ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 44

ಅಕ್ಟೋಬರ್ 30, 2011


ರೂ. 5/-

ಪುಟ 16



ಯಡಿಯೂರಪ್ಪ ಜೈಲಿನಲ್ಲಿ ಇನ್ನೂ ಹಲವರು ಸಾಲಿನಲ್ಲಿ....





ಬಂಡವಾಳಶಾಹಿ ಬಿಕ್ಕಟ್ಟಿನ ವಿರುದ್ಧ ಹೆಚ್ಚುತ್ತಿರುವ ಆಕ್ರೋಶ

ಯುಪಿಎ ಸರ್ಕಾರ - ಖಾಸಗಿ ಕಂಪನಿಗಳ ಶಾಮೀಲು



ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದ ಗಡಾಫಿ ಕಗ್ಗೊಲೆ



ತಾರಕಕ್ಕೇರುತ್ತಿರುವ ರಸಗೊಬ್ಬರ ಬಿಕ್ಕಟ್ಟು

ಸಂವಾದ

ಮಾಹಿತಿ ಹಕ್ಕಿನ ಮೇಲೆ ಯುಪಿಎ ಕಣ್ಣು

ಕುದ್ರೋಳಿ ನವರಾತ್ರಿ ಉತ್ಸವ

ಮಹಿಳೆಯರು ರಥ ಎಳೆಯುವಷ್ಟರಿಂದಲೇ ಎಲ್ಲಾ ಸಾಧನೆ ಆಗುವುದಿಲ್ಲವಾದರೂ ಸಮಾನ ಧಾರ್ಮಿಕ ಹಕ್ಕುಗಳಿಸಿಕೊಳ್ಳುವುದು ಮಹತ್ವದದ ವಿಷಯವೇ!

ವಿಧವೆಯವರಿಗೆ ಸಮಾನ ಗೌರವ ಶ್ಲಾಘನೀಯ ಪ್ರಯತ್ನ


ವಾಸುದೇವ ಉಚ್ಚಿಲ

ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವ 'ಮಂಗಳೂರು ದಸರಾ' ಎಂದು ಇತ್ತೀಚಿನ ವರ್ಷಗಳಲ್ಲಿ ಪ್ರಸಿದ್ಧವಾಗುತ್ತಿದೆ. ನೂರು ವರ್ಷಗಳ ಹಿಂದೆ ನಾರಾಯಣ ಗುರುಗಳು ಪ್ರತಿಷ್ಟಾಪಿಸಿದ್ದ ಈ ದೇವಾಲಯ ಈಗ ಕೆಲವು ವರ್ಷಗಳ ಹಿಂದೆ ನವೀಕೃತಗೊಂಡು ಒಳ್ಳೆ ಪ್ರವಾಸಿ ತಾಣವಾಗುವಂತೆ ಆದುದರಲ್ಲಿ ಮಾಜಿ ಕೇಂದ್ರ ಸಚಿವ ಜನಾರ್ಧನ ಪೂಜಾರಿಯವರ ಪಾತ್ರವಿದೆ.

ಈ ವರ್ಷದ ಮಂಗಳೂರು ದಸರಾ ವಿಶಿಷ್ಟ ಕಾರಣಗಳಿಗಾಗಿ ಪ್ರಚಾರ ಪಡೆಯಿತು. ವಿಧವೆಯರು ದೇವರ ರಥವನ್ನು ಎಳೆಯುವುದರ ಮೂಲಕ ವಿಧವೆಯರಿಗೆ ಗೌರವ ಸಲ್ಲಿಸಲಾಗುವುದು ಎಂಬುದನ್ನು ಜನಾರ್ಧನ ಪೂಜಾರಿಯವರು ದಸರಾಗೆ ಕೆಲವು ದಿನಗಳ ಮೊದಲೇ ಘೋಷಿಸಿಬಿಟ್ಟರು. ಅಲ್ಲದೆ ದಸರಾ ಉತ್ಸವದ ಅವಧಿಯಲ್ಲಿ ಇನ್ನೂ ಕೆಲವು ಕಾರ್ಯಕ್ರಮಗಳನ್ನು ನಡೆಸಿಯೇ ಬಿಟ್ಟರು. ಮಹಿಳೆಯರಿಂದಲೇ ಚಂಡಿಕಾಹೋಮ ನಡೆಸಲಾಯ್ತು. 1500 ಕ್ಕೂ ಮೀರಿ ಬೇರೆ ಬೇರೆ ಜಾತಿಗಳ ವಿಧವೆಯರಿಗೆ ಮುತ್ತೈದೆತನದ ಸಂಕೇತಗಳಾದ ಸೀರೆ ಕಣ, ಬಳೆ, ಕುಂಕುಮ, ಹೂ ಇತ್ಯಾದಿಗಳನ್ನು ಉಡುಗೊರೆ ನೀಡಲಾಯಿತು. ಬಂದಿದ್ದ ಪ್ರತಿಯೊಬ್ಬ ವಿಧವೆಗೂ ಅವಕಾಶ ಲಭ್ಯವಾಗುವಂತೆ ದೇವಳದ ತೇರನ್ನು ಮೂರು ಸುತ್ತು ವಿಧವೆಯರೇ ಎಳೆದು ತರುವ ಉತ್ಸವವೂ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಮಾತ್ರವಲ್ಲ, ಭಾರತದಲ್ಲಿಯೇ ಇದು ಸಂಕ್ಷೋಭೆಯುಂಟು ಮಾಡುವಂತಹ ವಿದ್ಯಮಾನ. ಭಾರತೀಯ ಸಮಾಜದಲ್ಲಿ ವಿಧವಾ ಸ್ತ್ರೀಯರನ್ನು ಮಂಗಳ ಕಾರ್ಯದಲ್ಲಿ ಭಾಗವಹಿಸಬಾರದ ಅಮಂಗಳೆಯರು ಎಂದು ಪರಿಗಣಿಸುವ ಪದ್ಧತಿ ಇದೆ. ಗಂಡನನ್ನು ಕಳಕೊಂಡವಳನ್ನು ವಿಧವೆಯೆಂದೂ, ಹೆಂಡತಿಯನ್ನು ಕಳಕೊಂಡವನನ್ನು ವಿಧುರನೆಂದೂ ಸೂಚಿಸುವ ಶಬ್ದಗಳು ನಮ್ಮ ದೇಶೀಯ ಭಾಷೆಗಳಲ್ಲಿ ಚಾಲ್ತಿಯಲ್ಲಿದೆಯಾದರೂ ವಿಧುರನನ್ನು ವಿಧುರನೆಂದು ಗುರುತಿಸುವುದು ಅಪೂರ್ವ. ಬಹುತೇಕ ಹಿಂದೂ ಮತಸ್ಥ ಎಲ್ಲಾ ಜಾತಿಗಳಲ್ಲೂ ಮಂಗಳ ಎನ್ನಲಾಗುವ ಕಾರ್ಯಗಳಲ್ಲಿ – ಮದುವೆ, ಸೀಮಂತ, ಪೂಜೆ, ಹಬ್ಬ, ಜನ್ಮದಿನ ಇತ್ಯಾದಿ ಆಚರಣೆಗಳಲ್ಲಿ ವಿಧವಾ ಸ್ತ್ರೀಯರು ಮುಂಚೂಣಿಯಲ್ಲಿ ನಿಂತು ಭಾಗವಹಿಸಬಾರದೆಂಬ ನಿಷೇಧವಿದೆ. ವಿಧವೆಯು 'ಮುತ್ತೈದೆತನ'ದ ಎಲ್ಲಾ ಸಂಕೇತಗಳನ್ನೂ ತನ್ನ ಶರೀರರಿಂದ ನಿವಾರಿಸಬೇಕು ಎಂಬ ಪದ್ಧತಿ ಇದ್ದಿತ್ತು. ಆ ಪದ್ಧತಿಯ ಭಾಗವಾಗಿ ಗಂಡನನ್ನು ಕಳಕೊಂಡ ಸ್ತ್ರೀಯು ತಾಳಿ,(ಕರಿಮಣಿ) ಹಣೆಬೊಟ್ಟು, ಮೂಗುಬೊಟ್ಟು, ಬಳೆ (ಗಾಜಿನ ಬಳೆ), ಕಾಲುಂಗುರ, ಹೂ ಇತ್ಯಾದಿಗಳನ್ನು ಧರಿಸದೆ ನಿರಾಭರಣರಾಗಿಯೂ, ಸರಳವಸನಧಾರಿಯಾಗಿಯೂ ಇರತಕ್ಕದ್ದೆಂಬ ನಡವಳಿಕೆ ಇತ್ತು. (ಹಿಂದಿನ ಬ್ರಾಹ್ಮಣ ಸಮಾಜಗಳಲ್ಲಿ ವಿಧವೆಯರು ಕೆಂಪು ಸೀರೆ ಉಟ್ಟು, ರವಿಕೆ ಧರಿಸದೆ, ತಲೆ ಬೋಳಿಸಿ ಇರತಕ್ಕದ್ದೆಂಬ ವಿಧಿಗಳೂ ಇದ್ದವು.) ಇವುಗಳಲ್ಲಿ ಅನೇಕ ಪದ್ಧತಿಗಳು ಬಳಕೆ ತಪ್ಪಿ ಹೋಗಿದ್ದರೂ, ವಿಧವೆಯರಿಗಿರುವ 'ಅಮಂಗಳತೆ' ಪರಿಕಲ್ಪನೆ ಬದಲಾಗಿಲ್ಲ.

ಎಲ್ಲ ಆಚರಣೆಗಳ ಅನೂಚಾನತೆ ತಪ್ಪದಂತೆ ನಡೆಯಬೇಕೆಂದು ಬಯಸಲಾಗುವುದು ವಿಶೇಷವಾಗಿ ದೇವಸ್ಥಾನಗಳಲ್ಲಿ. ದೇವಸ್ಥಾನ ಜನರ ಶ್ರದ್ಧೆ ಧರ್ಮಗಳ ಕೇಂದ್ರ. ಮೈಲಿಗೆಯಾಗುವ ಜನ ಬೇರೆಲ್ಲೂ ಸಲ್ಲ



ಬಹುದೆಂದು ಭಾವಿಸಿದರೂ, ದೇವಸ್ಥಾನಗಳಲ್ಲಿ ಸಲ್ಲಲಾರರು ಎಂಬುದು ನಂಬಿಕೆ. ಮಹಿಳೆಯರ ಮಾಸಿಕ ಋತುವನ್ನೇ ಮೈಲಿಗೆಯೆಂದು ಪರಿಗಣಿಸಿದ್ದರಿಂದ ಮಹಿಳೆಯರು ಹಲವು ಸಂದರ್ಭಗಳಲ್ಲಿ ಪೂಜೆ ಹಕ್ಕು ಮತ್ತು ದೇವರ ಸಾಮೀಪ್ಯವನ್ನು ಪಡೆಯದವರಾದರು. ವಿಧವಾ ಮಹಿಳೆಯರನ್ನು ಅಮಂಗಳೆಯರು ಮತ್ತು ಮೈಲಿಗೆಯವರೆಂದು ಪರಿಗಣಿಸಿದ್ದರಿಂದಲೇ ಮಹಿಳೆಯರಿಗೆ ಲಭ್ಯವಿದ್ದ ಅಷ್ಟಿಷ್ಟು ಸಾಮಾಜಿಕ ಅವಕಾಶಗಳೂ ದೇವಸ್ಥಾನಗಳಲ್ಲಿ, ಹಿಂದೂ ಸಮಾಜದಲ್ಲಿ ಇಲ್ಲವಾಯಿತು. ಇಂಥ ಯಾವೊಂದೂ ಅಮಂಗಳತೆಯೂ ವಿಧುರರಿಗೆ – ಅವರು ಪುರುಷರಾದ ಕಾರಣದಿಂದ – ತಟ್ಟುವುದಿಲ್ಲವಾದುದರಿಂದ, ಅವರು ಯಾವ ಅಡೆತಡೆಗಳಿಲ್ಲದೆ ಕೌಟುಂಬಿಕ, ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುತ್ತಾರೆ.

ವಿಧವೆಯರಿಗೆ ತಾರತಮ್ಯ ಮಾಡಲಾಗುತ್ತಿದೆ ಎಂಬುದು ಆಧುನಿಕ ಚಿಂತನೆಗಳ ಫಲವಾಗಿ ಅರಿವಿಗೆ ಬರುತ್ತಿದೆ. ವೈಧವ್ಯದ ಮಾನಸಿಕ ನೋವುಗಳನ್ನು ಕಡಿಮೆಗೊಳಿಸಿಕೊಳ್ಳಲು ಆಧುನಿಕ ಸಮಾಜ ಆಚರಣೆಗಳಲ್ಲಿ ಕೆಲವು ಪರಿವರ್ತನೆಗಳನ್ನು ತಂದುಕೊಂಡಿರುವುದು ನಿಜ. ಆದರೆ ಈ ವೈಧವ್ಯದ ಆಚರಣೆಗಳು ಬಂದಿರುವುದು ಒಂದು ಊಳಿಗಮಾನ್ಯ ಸಮಾಜದ ಸಾಮಾಜಿಕ, ಸಾಂಸ್ಕೃತಿಕ ರೂಪಗಳಾಗಿ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಒಂದು ಸಾಂಸ್ಕೃತಿಕ ಸಾಮಾಜಿಕ ಆಚರಣೆಗಳ ಭದ್ರ ನೆಲೆಗಳಾದ ಊಳಿಗಮಾನ್ಯ ಸಮಾಜ ಪೂರ್ಣವಾಗಿ ಅಳಿದು ಹೋಗುವ ವರೆಗೆ, ಆ ಅಳಿದುಳಿದ ಪಂಚಾಂಗದ ಮೇಲೆ ಕೆಲವು ಅರಳಿ ಮರಗಳು ಉಳಿದೇ ಉಳಿಯುತ್ತವೆ. ಸಾಮಾಜಿಕ ತಾರತಮ್ಯ, ಅವಮಾನ, ಅಸ್ಪೃಶ್ಯತೆಯಂತಹ ಆಚರಣೆಗಳು ಸಾಮಾಜಿಕ ಚಳುವಳಿಗಳ ಮೂಲಕ ಏಕಾಏಕಿ ನಾಶವಾಗುವುದಿಲ್ಲ. ಸಾಮಾಜಿಕ ಸಮಾನತಾ ಚಳುವಳಿಗಳ ಅವಶ್ಯವಿರುವುದು ನಿಜ. ಆದರೆ ತಳಮಟ್ಟದ ಊಳಿಗಮಾನ್ಯ ವ್ಯವಸ್ಥೆಯ ಪಳಯುಳಿಕೆ ಹಾಗೂ ಮೌಲ್ಯಗಳಿಗೆ ಬಲವಾದ ಪೆಟ್ಟು ಬೀಳಲೇ ಬೇಕು.

ಭಾರತದಲ್ಲಿ ಆಧುನಿಕ ಸಮಾಜದ ಬೆಳವಣಿಗೆಯಲ್ಲಿ, ಬೆಳವಣಿಗೆಯನ್ನು ಮುಂದಕ್ಕೊಯ್ಯಬೇಕಾದ ಬಂಡವಾಳಶಾಹಿ ಶಕ್ತಿಗಳು ಈಗಿನ ಅರೆ ಪಾಳೆಗಾರಿ ಶಕ್ತಿಗಳನ್ನು ನಾಶ ಮಾಡದೆ ತಮ್ಮ ಜೊತೆಗಾರರಾಗಿ ಮುಂದುವರೆಸುತ್ತಿರುವುದರ ಪರಿಣಾಮವಾಗಿ, ಗ್ರಾಮಾಂತರದಲ್ಲಿ ವ್ಯವಸ್ಥೆ ಹಾಗೆ ಮುಂದುವರಿಯುತ್ತಿದೆ. ಅದರ ಸಾಮಾಜಿಕ ಸಾಂಸ್ಕೃತಿಕ ಪಳೆಯುಳಿಕೆಗಳು ನಗರ– ಗ್ರಾಮೀಣ ಎನ್ನದೆ ವೈಧ್ಯವ್ಯ ಇತ್ಯಾದಿ ಆಚರಣೆಗಳಲ್ಲಿ ಪ್ರಕಟವಾಗುತ್ತಿದೆ.

'ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು' ತತ್ವದಡಿಯಲ್ಲಿ ನಡೆಯುವ ಆರ್ಥಿಕ ರಾಜಕೀಯ ಸಾಮಾಜಿಕ ಹೋರಾಟಗಳು ಮಾತ್ರ ಊಳಿಗಮಾನ್ಯ ವ್ಯವಸ್ಥೆಯನ್ನೂ, ಅದರ ಸಾಂಸ್ಕೃತಿಕ ಸಾಮಾಜಿಕ ಮೇಲುರಚನೆಗಳನ್ನೂ ಸಂಪೂರ್ಣವಾಗಿ ನಾಶ ಮಾಡೀತು.

ಇವೆಲ್ಲ ದೀರ್ಘಕಾಲದ ಕೆಲಸ. ಇವುಗಳ ಮಧ್ಯೆ ಕೂಡಾ ನಡೆಯುವ ಸಾಮಾಜಿಕ ಆಂದೋಲನಗಳು ಜನಮನ ಸ್ಥಿತಿಯನ್ನು ಅಲ್ಪಸ್ವಲ್ಪ ಬದಲಾವಣೆ ಮಾಡಿ ಸಣ್ಣ ಪರಿವರ್ತನೆಗಳು ಆಗುತ್ತಿರುತ್ತವೆ. 19ನೇ ಶತಮಾನದ ಕೊನೆಯಲ್ಲಿ ಪ್ರಾರಂಭವಾದ ಸಾಮಾಜಿಕ ಆಂದೋಲನಗಳು – ಸತಿ ಸಹಗಮನ ರದ್ಧತಿ, ಬಾಲ್ಯ ವಿವಾಹಕ್ಕೆ ತಡೆ, ವಿಧವಾ ಪುನರ್ ವಿವಾಹ, ಅಸ್ಪೃಶ್ಯತಾ ನಿವಾರಣೆ, ದೇವಾಲಯ ಪ್ರವೇಶ – ಪೂರ್ತಿಯಲ್ಲದಿದ್ದರೂ ಸಾಕಷ್ಟು ಬದಲಾವಣೆಗಳನ್ನು ತಂದಿವೆ. ಆ ನಿಟ್ಟಿನಲ್ಲಿ ಜನಾರ್ಧನ ಪೂಜಾರಿಯವರ ನೇತೃತ್ವದಲ್ಲಿ ನಡೆದ 'ವಿಧವಾ ಗೌರವ' ಕಾರ್ಯಕ್ರಮ ಅತ್ಯಂತ ಶ್ಲಾಘನೀಯವಾದುದು. ದೇವಸ್ಥಾನದ ಆವರಣದಲ್ಲಿ ವಿಧವೆಯರಿಗೆ ದೊರೆತ ಮಾನ್ಯತೆ ಮುಂದುವರಿದು, ಕೌಟುಂಬಿಕ ಸಾಮಾಜಿಕ ಪರಿಸರದಲ್ಲೂ ವಿಧವೆಯರಿಗೆ ಅಂಟಿಸಿದ ಅಮಂಗಳತೆಯನ್ನು ನಿವಾರಿಸುವಂತೆ ವಿಸ್ತಾರಗೊಳ್ಳಬೇಕಾದ ಅಗತ್ಯ ಬಹಳವಿದೆ.

ಹೋಮ, ಹವನ, ಯಜ್ಞ ಯಾಗಗಳಂತಹ ಆಚರಣೆಗಳೇ ಮೂಢನಂಬಿಕೆಗಳು. ಇಂತಹ ಆಚರಣೆಗಳಲ್ಲಿ ಈ ಮಹಿಳೆಯರು ಪಾಲ್ಗೊಂಡರೆ ಏನು ಪ್ರಯೋಜನ ? ಇದೆಲ್ಲಾ ಯಾಕೆ ಬೇಕು ಎಂದೂ ಕೂಡ ಯೋಚಿಸಲು ಅವಕಾಶವಿದೆ.

ಆದರೆ ಇಲ್ಲಿ ಒಂದು ವಿಷಯ ಗಮನಿಸಬೇಕಿದೆ. ಮಹಿಳೆಯರಲ್ಲಿ, ಜನರಲ್ಲಿ ಇಂತಹ ಧಾರ್ಮಿಕ ಆಚರಣೆಯ ಕುರಿತು ಎಲ್ಲಿಯವರೆಗೆ ನಂಬಿಕೆ ಇರುತ್ತದೋ ಅಲ್ಲಿಯವರೆಗೆ ಈ ಎಲ್ಲ ಆಚರಣೆಗಳಲ್ಲಿ ಮಹಿಳೆಯರು ಮತ್ತು ವಿಧವೆಯರು ಪಾಲ್ಗೊಳ್ಳಲು ಅವಕಾಶ ಇರಲೇಬೇಕು. ಪುರುಷರಿಗೆ ಇರುವ ಅವಕಾಶ ಮತ್ತು ಗಂಡ ಬದುಕಿರುವ ಮಹಿಳೆಯರಿಗೆ ಇರುವ ಅವಕಾಶ ಗಂಡ ಇಲ್ಲದ ಮಹಿಳೆಯರಿಗೆ ಇಲ್ಲ ಎನ್ನುವುದಾದರೆ ಅದನ್ನು ಒಪ್ಪಲು ಸಾಧ್ಯವಿಲ್ಲ. ಅದೇ ಇಲ್ಲಿರುವ ಮುಖ್ಯ ಪ್ರಶ್ನೆ.

★

ನವೆಂಬರ್ 1 ರಿಂದ 7 ಜನರ ಪ್ರಶ್ನೆಗಳಿಗಾಗಿ ಪ್ರಚಾರಾಂದೋಲನ

ಅಡ್ವಾಣಿ ಯಾತ್ರೆ ಪ್ರತಿಭಟಿಸಿ ಅಕ್ಟೋಬರ್ 29 ರಂದು ಪ್ರತಿಭಟನೆ

ಬೆಲೆ ಏರಿಕೆ ತಡೆ, ಆಹಾರದ ಹಕ್ಕಿನ ಖಾತ್ರಿ, ಭ್ರಷ್ಟಾಚಾರದ ವಿರುದ್ಧ ದೃಢ ಕ್ರಮಗಳು, ಪರಿಣಾಮಕಾರಿ ಲೋಕಪಾಲ್ ಮಸೂದೆ, ಅಂಗೀಕಾರ, ರೈತರಿಗೆ ಸಬ್ಸಿಡಿ ದರದಲ್ಲಿ ರಸಗೊಬ್ಬರ ಪೂರೈಕೆಯ ಖಾತ್ರಿ ಮತ್ತು ಯೂರಿಯಾದ ಕಾಳಸಂತೆ ತಡೆ, ನಿರುದ್ಯೋಗ ನಿವಾರಣೆಗೆ ಕ್ರಮಗಳು ಹಾಗೂ ಖಾಲಿ ಇರುವ ಸರ್ಕಾರಿ ಹುದ್ದೆಗಳಿಗೆ ಭರ್ತಿ, ಚಿಲ್ಲರೆ ವ್ಯವಹಾರ ಕ್ಷೇತ್ರದಲ್ಲಿ ವಿದೇಶಿ ಹಣ ಹೂಡಿಕೆ ತಡೆ ಹಾಕುವುದು ಮತ್ತು ಸಣ್ಣ ಅಂಗಡಿ-ವ್ಯವಹಾರಸ್ತರ ಹಿತ ರಕ್ಷಣೆ ಗಾಗಿ ನವೆಂಬರ್ 1 ರಿಂದ 7 ರ ವರೆಗೆ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ಕರ್ನಾಟಕದಲ್ಲಿ ನವೆಂಬರ್ 2 ರಂದು ಎಲ್ಲಾ ಜಿಲ್ಲೆಗಳಲ್ಲಿ ಮೆರವಣಿಗೆ, ಧರಣಿ, ಸಭೆಗಳನ್ನು ನಡೆಸಲು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ. ಹಾಗೆ ಅಡ್ವಾಣಿ ರಥಯಾತ್ರೆ ಪ್ರತಿಭಟಿಸಿ ಅಕ್ಟೋಬರ್ 29 ರಂದು ಬೆಂಗಳೂರು-ಮಂಗಳೂರಿನಲ್ಲಿ ಪ್ರತಿಭಟಿಲಾಗುವುದು.

ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸದಾನಂದರ ಗುಜರಾತ್ ಮಾದರಿ

ಸದಾನಂದಗೌಡ ಸರಕಾರ 'ಸುಖ ಸಮೃದ್ಧಿಯ ನಾಡೊಂದು ಕಟ್ಟುವ' ಅದರ ಘೋಷಣೆಗಿಂತ ಮಾಡಿದ 'ಅಭಿವೃದ್ಧಿಯ ರಾಜಕಾರಣ'ದ ಪಾತಕಗಳ ಮಸಿ ತೊಳೆದುಕೊಳ್ಳುವುದೇ ಪ್ರಥಮ ಆದ್ಯತೆಯಾಗಿ ಬಿಟ್ಟಿದೆ. ಭೂಮಿಯ ಡಿನೋಟಿಫಿಕೇಷನ್ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯುರಪ್ಪನವರನ್ನು ಲೋಕಾಯುಕ್ತ ನ್ಯಾಯಾಲಯವು ಬಂಧಿಸಿ ಕೇಂದ್ರ ಕಾರಾಗೃಹಕ್ಕೆ ತಳ್ಳಿದೆ. ಇದರ ಬೆನ್ನಲ್ಲೇ ಇನ್ನೂ ಹಲವಾರು ಸಚಿವರು, ಶಾಸಕರು ಜೈಲು ಕಂಬಿಗಳನ್ನು ಎಣಿಸಲಿದ್ದಾರೆ. ಸಚಿವರು, ಶಾಸಕರ ಮೈಗೆ ಮೆತ್ತಿಕೊಂಡಿರುವ ಹೊಸ ಹೊಸ ಹಗರಣಗಳು ನಿತ್ಯವೂ ಹೊರ ಬರುತ್ತಿವೆ. ಡಿನೋಟಿಫಿಕೇಷನ್ ಭೂ ಹಗರಣದಲ್ಲಿ ಗೃಹ ಸಚಿವ ಆರ್. ಅಶೋಕ್ ಮೇಲೆ ಡಿನೋಡಿಫಿಕೇಷನ್ ಪ್ರಕರಣದಲ್ಲಿ ಲೋಕಾಯುಕ್ತರು ಕೇಸ್ ದಾಖಲಿಸಿಕೊಂಡಿದ್ದಾರೆ. ವಿ.ಸೋಮಣ್ಣ, ಸಿ.ಪಿ. ಯೊಗೀಶ್ವರ, ನಿರಾಣಿ ಇವರುಗಳು ಜೈಲು ಸೇರುವ ದಿನಗಳು ದೂರವಿಲ್ಲ ಎನ್ನಿಸುತ್ತದೆ. ಈಗಾಗಲೇ ಮಾಜಿ ಸಚಿವ ಕಟ್ಟಾಸುಬ್ರಮಣ್ಯ ನಾಯ್ಡು, ಜನಾರ್ಧನ ರೆಡ್ಡಿ, ಕೃಷ್ಣಯ್ಯ ಶೆಟ್ಟಿ ಕಾರಾಗೃಹದಲ್ಲಿದ್ದಾರೆ. ಲೈಂಗಿಕ ದಬ್ಬಾಳಿಕೆ ಪ್ರಕರಣದಲ್ಲಿ ಹಾಲಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಅಂದರೆ ಇಡೀ ಬಿಜೆಪಿ ಸರ್ಕಾರವೇ, ಬಹಳಷ್ಟು ಸಂಪುಟ ಮತ್ತು ಶಾಸಕಾಂಗವೇ ಅಕ್ರಮ, ಭ್ರಷ್ಟಾಚಾರ ದುರಾಚಾರಗಳಲ್ಲಿ ಬಿರಿಯುತ್ತಿದೆ. ಹಗರಣಗಳಿಂದ ಮಾಜಿ ಸಿ.ಎಂ. ರಾಜೀನಾಮೆ ಸಲ್ಲಿಸಿದ ಬಳಿಕ ಅವರ ಪ್ರತಿನಿಧಿಯಾಗಿ ಬಂದ ಸದಾನಂದಗೌಡರು ಕಳಂಕಾತೀತರಲ್ಲ. ಹೀಗೆ ಅಕ್ರಮಗಳ ಸಂತಾನವಾಗಿರುವ ಈ ಸರ್ಕಾರದ ಚುಕ್ಕಾಣಿ ಹಿಡಿದ ಅವರು ಈಗಲೂ ತಾವೂ ಸ್ವಚ್ಛ, ದಕ್ಷ ಎಂದೆಲ್ಲ ಹೇಳಿಕೊಂಡು ಅಧಿಕಾರದಲ್ಲಿ ಮುಂದುವರೆಯುತ್ತಿರುವ ಭಂಡತನವು ಹೇಸಿಗೆ ತರುವಂತಹದ್ದು.


ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಮಹತ್ವದ ಲೋಕಾಯುಕ್ತ ವರದಿಯನ್ನು ಸರಕಾರ ಅಂಗೀಕರಿಸದೇ ಕೆಲವು ತಾಂತ್ರಿಕ ಸ್ಪಷ್ಟನೆಯ ಪ್ರಶ್ನೆಗಳನ್ನೆತ್ತಿರುವುದು ದುರುದ್ದೇಶವಾಗಿದೆ. ಮಾತ್ರವಲ್ಲ ಅಪರಾಧಿಗಳ ಮೇಲೆ ಕ್ರಮ ಜರುಗಿಸದೇ ಅವರನ್ನು ರಕ್ಷಿಸುವ, ಈ ಮೂಲಕ ವರದಿಯ ಶಿಫಾರಸುಗಳನ್ನು ಮೂಲೆ ಗುಂಪಾಗಿಸುವ ಕುತಂತ್ರವೇ ಆಗಿದೆ. ಹೀಗೆ ಬಿಜೆಪಿ ಅಧಿಕಾರದಲ್ಲಿ ಈಗಲೂ ಮುಂದುವರೆದಿರುವುದು ಜನತೆಯ, ರಾಜ್ಯದ ಹಿತಕ್ಕಾಗಿ ಅಲ್ಲ, ಬದಲಾಗಿ ಅಕ್ರಮಗಳ ಸಂರಕ್ಷಣೆಗಾಗಿ ಎಂಬುದು ಇನ್ನಷ್ಟು ನಿಚ್ಚಳವಾಗಿದೆ. ಈಗ ಲೋಕಾಯುಕ್ತ ಸಂಸ್ಥೆಯ ಪಾತ್ರ, ಕಾರ್ಯಭಾರ ಹೆಚ್ಚಿದೆ. ಅದನ್ನು ಇನ್ನಷ್ಟು ಬಲಪಡಿಸಬೇಕಿದೆ. ಆದರೆ ಅದನ್ನು ದುರ್ಬಲಗೊಳಿಸಲಾಗುತ್ತಿದೆ. ತೆರವಾದ ಲೋಕಾಯುಕ್ತ ಸ್ಥಾನಕ್ಕೆ ಇನ್ನೂ ಯಾರನ್ನೂ ನೇಮಕವನ್ನೇ ಮಾಡಿಲ್ಲ. ಹೀಗೆ "ಗುಜರಾತಿನ ಮೋದಿ ಮಾದರಿ'ಯನ್ನು 'ವಿಭಿನ್ನ' ಪಕ್ಷವಾಗಿರುವ ಬಿಜೆಪಿಯು ಅನುಷ್ಠಾನ ಗೊಳಿಸುತ್ತಿದೆ!!. ಇಂತಹ ವರಸೆಗಳನ್ನು ನಿಲ್ಲಿಸಿ ಕೂಡಲೇ ಲೋಕಾಯುಕ್ತ ವರದಿ ಅಂಗೀಕರಿಸಿ ಅಪರಾಧಿಗಳ ಮೇಲೆ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು.

ಇದೀಗ ಹೊಸ ಆರೋಪ ಬಂದಿರುವುದು ಗೃಹ ಸಚಿವರ ಮೇಲೆಯೇ. ಸದಾನಂದಗೌಡರ ಸಂಪುಟದಲ್ಲಿ ಪ್ರಭಾವಿಗಳು. ಇವರು ಆಯಕಟ್ಟಿನ ಪೋಲೀಸ್ ಇಲಾಖೆಯ ಸಚಿವರಾಗಿದ್ದು ಅಧಿಕಾರದಲ್ಲಿ ಮುಂದುವರಿಯುವುದು ಪ್ರಕರಣದ ಸಾಕ್ಷಿಗಳನ್ನು ಬುಡಮೇಲು ಮಾಡಲು ಕೊಟ್ಟ ಮುಕ್ತ ಅವಕಾಶವೇ ಆಗಿದೆ. ಆದ್ದರಿಂದ ಈ ಕೂಡಲೇ ಅಶೋಕ್ ರಾಜೀನಾಮೇ ಸಲ್ಲಿಸಿ ನ್ಯಾಯಾಂಗದ ಪ್ರಕ್ರಿಯೆಗೆ ಒಳಗಾಗಲೇಬೇಕು. ಈಗಾಗಲೇ ದೂರು ನೀಡಿದವರ ಮೇಲೆ ಒತ್ತಡ ಬೆದರಿಕೆ ಹಾಕಿರುವ ಪ್ರಯತ್ನಗಳು ಮುಂದೆ ನಡೆಯಬಹುದಾದ ಅನಾಹುತಗಳ ಸೂಚನೆಯಾಗಿದೆ. ಆದ್ದರಿಂದ ಅಶೋಕರನ್ನು ಒಳಗೊಂಡು ಇಂತಹ ಆರೋಪಗಳಲ್ಲಿರುವ ಸೋಮಣ್ಣ, ಯೋಗೀಶ್ವರ್, ನಿರಾಣಿಯವರನ್ನು ಸಂಪುಟದಿಂದ ವಜಾಗೊಳಿಸಬೇಕು.

ಈ ಧೈರ್ಯವನ್ನು ಸದಾನಂದಗೌಡರು ತೋರಿಸಬೇಕು. ಆದರೆ ಗೌಡರು ಒಂಡೆಡೆ ಜೈಲಿನಲ್ಲಿರುವ ತಮ್ಮ ನಾಯಕನ, ಇನ್ನೊಂದೆಡೆ ಅಕ್ರಮಗಳ ಸಕಲ ಫಲಾನುಭವಿ ಸಂಘ ಪರಿವಾರದ ಮೇಲಿನ ನಿಯಂತ್ರಣದಿಂದ ಹೊರಬರುತ್ತಾರೆಯೇ? ಇದು ಅವರಿಗೆ ಅಸಾಧ್ಯವಾಗಬಹುದು. ಹೀಗಿರುವಾಗ ಗಣಿ-ಭೂಮಾಫಿಯಾಗಳು ಮತ್ತು ಫ್ಯಾಸಿಸ್ಟ್ ಸಂಸ್ಥೆಗಳ ನಿಯಂತ್ರಣದಲ್ಲಿರುವ ಈ ಜನತೆಗೆ ದ್ರೋಹಿ ಸರಕಾರ ತೊಲಗುವುದೇ ದಾರಿ..

ಯಡಿಯೂರಪ್ಪ ಜೈಲಿನಲ್ಲಿ... ಇನ್ನೂ ಹಲವರು ಸಾಲಿನಲ್ಲಿ

ಹೀಗೊಂದು ವಿಷದ ಘಳಿಗೆ ತನ್ನ ಪಾಲಿಗೆ ಬರಲಿದೆಯೆಂಬ ನಿತ್ಯ ನಿರೀಕ್ಷೆಯಲ್ಲಿ ಇದ್ದ ಈ ನಾಯಕನಿಗೆ ಆ ಕ್ಷಣ ಒಂದೇ ಬಿಟ್ಟರೆ?!; ಉದರ ವೈರಾಗ್ಯದಂತೆ ಜೈಲು ವೈರಾಗ್ಯ ಬಾರದೇ ಇರುತ್ತದೆಯೇ?. ಈ ಹೋರಾಟಗಾರನ ಅಪರಾಧದ ಸ್ವರೂಪ, ಸಾಕ್ಷಿಗಳ ಪ್ರಮಾಣ ಪರಿಶೀಲಿಸಿದರೆ ನ್ಯಾಯಾಲಯಕ್ಕೆ ಇವರನ್ನು ಕಾರಾಗೃಹಕ್ಕೆ ಕಳಿಸದೇ ಬೇರೆ ಮಾರ್ಗಗಲಿರಲಿಲ್ಲ. ಅದರಲ್ಲೂ ತನ್ನ ಹಿಂದಿನ ತೀಪಿನ ಬಗ್ಗೆ ಉಚ್ಚ ನ್ಯಾಯಾಲಯ ತೀವ್ರ ತರಾಟೆಗೆ ತೆಗೆದು ಕೊಂಡ ನಂತರವೂ ಅನ್ಯಮಾರ್ಗ ಹುಡುಕುವುದೇ ಅದಕ್ಕೆ ದುಸ್ತರವೇ! ಹೀಗಾಗಿ ಹೊರಟದ್ದು ಖಡಕ್ ನಿರ್ದೇಶನ! ಯಡಿಯೂರಪ್ಪನವರ ನ್ಯಾಯಾಂಗ ಬಂಧನ!.



"ಓರಾಟಗಾರ"ನ ಹೇಡಿತನ

ಅಂದು ಜಾಮೀನು ಅರ್ಜಿ ತೀರ್ಪು ಕೇಳಲು ಮಾಜಿ ಮುಖ್ಯಮಂತ್ರಿಗಳು ನ್ಯಾಯಲಯಕ್ಕೆ ಬಂದಿರಲ್ಲಿಲ್ಲವೆಂಬುದೇ ಅವರ ಮನಸ್ಸಿನಲ್ಲಿ ಏನು ಕಾದಿದೆ ಎಂಬುದರ ಸುಳಿವಿತ್ತು ಅನ್ನಿಸುತ್ತದೆ. ಬಂಧನದ ಸುದ್ದಿ ಖಚಿತವಾದ ಮೇಲೂ .... ಆಗಲೂ ಅರೋಗ್ಯ ಸಮಸ್ಯೆ ಇತ್ಯಾದಿ.. ಹೀಗೆ ನೆಪಹಾಕಿ ಹೇಗಾದರೂ ಪರಪ್ಪನ ಅಗ್ರಹಾರದ ಜೈಲು ಖಾನೆಗಿಂತ ಹೈಟೆಕ್ ಆಸ್ಪತ್ರೆಯ ರೋಗಿಯಾಗಿ ಸೇರಿಬಿಟ್ಟರೆ ಎಂಬ ಹಳಸಲು ತಂತ್ರ ಬರದಿರಲಿಲ್ಲ. ಆದರೆ ಇದು ಆಗದು ಎಂದಾಗ 'ಸ್ವಯಂ ಪ್ರೇರಣೆಯಿಂದ' ಬಂಧನಕ್ಕೆ ಒಳಗಾದರಂತೆ! ಆದರೆ ಹೀಗೆ ಕಾಲ ವಿಳಂಬಿಸಿ, ಹಾದಿ ತಪ್ಪಿಸುವ ವರ್ತನೆಯು ಒಬ್ಬ ಮುಖ್ಯಮಂತ್ರಿಯಾಗಿದ್ದ, ಹೋರಾಟಗಾರ ಅನ್ನಿಸಿಕೊಂಡ ಈ 'ಜನನಾಯಕ'ನಿಗೆ ಎಳಷ್ಟು ಶೋಭೆ ತರಲಿಲ್ಲ. ಬದಲಾಗಿ ಜನರಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಯ್ತು. ಜೈಲು ಸೇರಿದ ಮರುಗಳಿಗೆಯೇ ' ಹದಗೆಟ್ಟ ಆರೋಗ್ಯದಿಂದ' ಜಯದೇವ ಆಸ್ಪತ್ರೆ ಸೇರಿದ ಮೇಲೆ . ಅಲ್ಲಿಂದ ಮತ್ತೆ ವಿಕ್ಟೋರಿಯಾ ಆಸ್ಪತ್ರೆಗೆ ಹಾಸಿಗೆಯಿಂದ ಮುಖ ಮುಚ್ಚಿಕೊಂಡು 'ಪಲಾಯನ, ಮಾಡುವಾಗ ಇನ್ನಷ್ಟು ಮಾನ ಹರಾಜಾದದ್ದು ಈಗಲೂ ಅವರು, ಅವರ ಬೆನ್ನು ಕಟ್ಟಿ ನಿಂತವರಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ.

ಹಾಗೇ ಇವರ ಸಾಥಿ, ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ತೀರ್ಪು ಕೇಳಿ ಅಘಾತವಾಗಿ ಅತ್ತ ಕುಸಿದು ಬಿದ್ದಾಗ ಅವರ 'ಆರಾಧ್ಯದೈವ' ಏಳುಕೊಂಡಲವಾಡನೂ ಅವರ ಕೈಹಿಡಿಯಲಿಲ್ಲ.

ಹೆಗ್ಗಳಿಕೆ-ಅಗ್ಗಳಿಕೆ

ಭೂಮಿಯ ಡಿನೋಟಿಫಿಕೇಷನ್ , ಲಂಚದ ಎರಡು ಪ್ರಕರಣಗಳಲ್ಲಿಚಕೀಲರಾದ ಸಿರಾಜಿನ್ ಪಾಶಾ, ಬಾಲರಾಜು ರವರ ದೂರನ್ನು ಅನುಸರಿಸಿ ಈ ಕ್ರಮಗಳಾಗುತ್ತಿವೆ. ಇದು ಇನ್ನೂ ಆರಂಭ. ಇಂತಹ ಹತ್ತಾರು (ನೂರಾರು) ಪ್ರಕರಣಗಳು ಇನ್ನೂ ಬಾಕಿ ಇವೆ. ಇವರು ಮಾತ್ರವಲ್ಲ ಇವರೊಂದಿಗೆ ಬಹುತೇಕ ಸಚಿವ ಸಂಪುಟದ ಒಂದೂವರೆ ಡಜನ್ ಮಂತ್ರಿಗಳು ಕಂಬಿ ಹತ್ತಲಿದ್ದಾರೆ. ಇನ್ನಷ್ಟು ಹಿಡಿಯಲಿದ್ದಾರೆ. ಯಡಿಯೂರಪ್ಪ - ಬಿಜೆಪಿಯದ್ದು ದಾಖಲಾರ್ಹ ಆಡಳಿತ ಅಲ್ಲವೇ? ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಸರಕಾರ ಎಂಬುದೇ ಆ ದಾಖಲೆ ಮತ್ತು ಜೈಲು ಸೇರಿದ ಮಾಜಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯಲ್ಲಿಯೂ!.

ನಿಜ! ಜೈಲು ಸೇರಿದ್ದೇ ನ್ಯಾಯ ನಿರ್ಣಯದ ಅಂತಿಮ ಹಂತವೇನಲ್ಲ. ಇದು ಒಂದು ಆರಂಭಿಕ ಘಟ್ಟ. ಇನ್ನೂ ಹಲವಾರು ನ್ಯಾಯಾಂಗ ಪ್ರಕ್ರೀಯೆಗಳು ನಡೆಯಲಿವೆ. ಅಂತಿಮ ತೀರ್ಪು ಹೊರಬರಬೇಕಿದೆ. ಅಂದರೆ ಈಗಿನ ಪ್ರಕ್ರಿಯೇ ಅರ್ಥಹೀನವೇನಲ್ಲ. ಇದು ಎಸಗಿದ ಅಪರಾಧ ಸ್ವರೂಪ ಖಚಿತಗೊಳಿಸುವ ಪ್ರಮುಖ ಹೆಜ್ಜೆ.

ಕ್ರಿಮಿನಲ್ ಅಪರಾಧ ನಾಲಿಗೆ ಹೊರಳಿಸದ ನಾಯಕರು

ಆದರೆ ಬಿಜೆಪಿ ನಾಯಕರು "ತಮ್ಮ ಒಡೆಯ ಕೇವಲ ಆರೋಪಿ ಮಾತ್ರ ,ಅಪರಾಧಿಯಲ್ಲ" ಎಂದು ಭಂಡತನದಿಂದ ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಿಜೆಪಿ ಸರಕಾರದ ಎಲ್ಲಾ ದುಷ್ಟ ಆಟಗಳನ್ನು ಕಂಡ ಜನತೆ ಇದನ್ನು ನಂಬುವ ಸ್ಥಿತಿಯಲ್ಲಿ ಇಲ್ಲ. ಈ ಆಡಳಿತದಲ್ಲಿ ಮನಸೋ ಇಚ್ಛೆ ಹೊಲಸು ತಿಂದವರು ಇದಕ್ಕಿಂತ ಇನ್ನೇನು ಹೇಳಿಯಾರು? ಇಷ್ಟಾದರೂ ಬಿಜೆಪಿಯ ದೆಹಲಿ-ಕರ್ನಾಟಕದ ನಾಯಕರ ನಾಲಿಗೆ ಹೊರಳುತ್ತಲೇ ಇಲ್ಲ, ಯಡಿಯೂರಪ್ಪನ ಬಂಧನವಾದ ಕೂಡಲೇ ದೆಹಲಿಯ ನಾಯಕರು ಏನಾದರೂ ಹೇಳಬೇಕಿತ್ತು, ಮಾಡಬೇಕಿತ್ತು. ಕನಿಷ್ಠ ಬಂಧನವಾದ ಮೇಲಾದರೂ ಮಾನ ಉಳಿಸಿಕೊಳ್ಳಲಾದರೂ ಅವರನ್ನು ಪಕ್ಷದಿಂದ

ಪುಟ 7ಕ್ಕೆ

ಕಾರ್ಟೂನ್ ಕಾರ್ನರ್



ಬಾಗೇಪಲ್ಲಿ ವಿದ್ಯುತ್ ಪೂರೈಸಲು ಒತ್ತಾಯಿಸಿ ಧರಣಿ ಸತ್ಯಾಗ್ರಹ

ವರದಿ: **ಮುಸ್ತಫಾ**

ವಿದ್ಯುತ್ ಕೊರತೆ ನೀಗಿಸಲು ಗ್ರಾಮೀಣ ಪ್ರದೇಶಗಳಿಗೂ ನಿರಂತರ ವಿದ್ಯುತ್ ಪೂರೈಸಲು ಒತ್ತಾಯಿಸಿ 13-10-2011 ರಂದು ಬಾಗೇಪಲ್ಲಿ ಬೆಸ್ಕಾಂ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹವನ್ನು ಪ್ರಾಂತ ರೈತ ಸಂಘ ಹಮ್ಮಿಕೊಂಡಿತ್ತು. ಗೂಳೂರು ವೃತ್ತದಿಂದ ಬೆಸ್ಕಾಂ ಕಛೇರಿಯವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಕಛೇರಿ ಮುಂದೆ ಧರಣಿ ನಡೆಸಲಾಯಿತು. ಬಾಗೇಪಲ್ಲಿಯ ಮಾಜಿ ಶಾಸಕರೂ ಹಾಗೂ ಸಿ.ಪಿ.ಐ.ಎಂ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ. ಶ್ರೀರಾಮರೆಡ್ಡಿ, ಕೆ.ಪಿ.ಆರ್.ಎಸ್. ಧರಣಿಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಕರ್ನಾಟಕಕ್ಕೆ 7000 ದಿಂದ 8000 ಮೆಗಾವ್ಯಾಟ್ ವಿದ್ಯುತ್ ಆದರೆ ಆಗುತ್ತದೆ. ಆದರೆ ಈಗ ಕರ್ನಾಟಕದ ಹಾಗೂ ಎಲ್ಲಾ ಮೂಲಗಳಿಂದ 6000 ಮೆಗಾವ್ಯಾಟ್ ವಿದ್ಯುತ್ ಮಾತ್ರ ಪೂರೈಕೆಯಾಗುತ್ತಿದೆ ಹಾಗಾಗಿ ವಿದ್ಯುತ್ ಸಮಸ್ಯೆ ಎದುರಾಗಿದೆ ಎಂದು ಈ ಬಿಜೆಪಿ ಸರ್ಕಾರ ಹೇಳುತ್ತಿದೆ. ಕೇವಲ 1000 ಮೆಗಾವ್ಯಾಟ್ ಉತ್ಪಾದನೆ ಕೊರತೆಯಿಂದ ಅಂತಹ ಗಂಭೀರ ಪರಿಸ್ಥಿತಿಯೇನೂ ಉಂಟಾಗುವುದಿಲ್ಲ. ಕರ್ನಾಟಕದಲ್ಲಿ ಹೆಚ್ಚಾಗಿ ನೀರಿನಿಂದಲೇ ವಿದ್ಯುತ್ ಉತ್ಪಾದನೆಯಾಗುತ್ತಿದೆ ಅದರಲ್ಲೂ ಹೆಚ್ಚಾಗಿ ಶರಾವತಿ ಡ್ಯಾಂ ನಿಂದ ಹೆಚ್ಚು ವಿದ್ಯುತ್ ಪೂರೈಕೆಯಾಗುತ್ತದೆ. ಆದರೆ ಅಲ್ಲಿರುವ 8 ಟರ್ಬೈನ್‌ಗಳಲ್ಲಿ ಕೇವಲ 3 ಮಾತ್ರ ಕಾರ್ಯನಿರ್ವಹಿಸುತ್ತಿವೆ ಹಾಗೂ 40 ವರ್ಷದ ಹಳೆಯ ಟರ್ಬೈನ್‌ಗಳು ಅವುಗಳನ್ನು ದುರಸ್ಥಿ ಸಹ ಮಾಡಿಸುತ್ತಿಲ್ಲ. ಇನ್ನು ರಾಯಚೂರು ಥರ್ಮಲ್ ಪ್ಲಾಂಟ್‌ನದೂ ಸಹ ಇದೇ ಪರಿಸ್ಥಿತಿ ಆಗಿದೆ. ಅಧಿಕಾರಿಗಳ ಅಸಮರ್ಪಕತೆ ಸಚಿವರುಗಳ ನಿರ್ಲಕ್ಷತೆ ಸರ್ಕಾರದ ಬೇಜವಾಬ್ದಾರಿಯಿಂದ ಆಡಳಿತ ಯಂತ್ರವೇ ಕುಸಿದಿದೆ. ಇವರ ಒಂದು ಬೇಜವಾಬ್ದಾರಿಯಿಂದ ಕರ್ನಾಟಕದಲ್ಲಿ ಕೇವಲ 3800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಇದರ ಹೊಣೆ ಈ ಸರ್ಕಾರದ್ದೇ ಆಗಿರುತ್ತದೆ. ಇದರಿಂದ ರೈತರಿಗೆ ಲೋಡ್- ಶೆಡ್ಡಿಂಗ್ ಮಾಡುವುದು ಅದರಲ್ಲಿ ಗ್ರಾಮೀಣ ಪ್ರದೇಶಗಳಿಗೆ 3 ಗಂಟೆ ತ್ರೀ ಫೇಸ್ 9 ಗಂಟೆ ಸಿಂಗಲ್ ಫೇಸ್. ಇನ್ನು ಉಳಿದ 12 ಗಂಟೆ ಕರೆಂಟು ಇರುವುದಿಲ್ಲ. 3 ಗಂಟೆ ಕೊಡುವ ತ್ರೀ ಫೇಸ್ ವಿದ್ಯುತ್ ನಲ್ಲಿ 30 ಸಲ ತೆಗೆಯುತ್ತಿರುತ್ತಾರೆ. 9 ಗಂಟೆ ಸಿಂಗಲ್ ಫೇಸ್ ನಲ್ಲಿ ಲೆಕ್ಕವಿಲ್ಲದಷ್ಟು ಸಲ ತೆಗೆಯುವುದು ಹಾಕುವುದು ಮಾಡುತ್ತಾರೆ. ಇನ್ನೂ ಹೆಚ್ಚಾಗಿ ಮಾತನಾಡಿದರೆ ಕಲ್ಲಿದ್ದಲು ಪೂರೈಕೆ ಇಲ್ಲ, ತೆಲಂಗಾಣ ಹೋರಾಟ ನಡೆಯುತ್ತಿರುವುದರಿಂದ ರೈಲಿನಲ್ಲಿ ಕಲ್ಲಿದ್ದಲು ಪೂರೈಕೆ ಆಗುತ್ತಿಲ್ಲ ಅಂತ ಸುಳ್ಳು ಹೇಳಿಕೊಂಡು ಕಾಲಕಳೆಯುತ್ತಿದೆ ಈ ಭ್ರಷ್ಟ ಬಿಜೆಪಿ ಸರ್ಕಾರ ಎಂದರು.

ಕೆ.ಪಿ.ಆರ್.ಎಸ್. ನವರು ಇಟ್ಟಿರುವ ಬೇಡಿಕೆಗಳು ಈಡೇರಿಸುವವರೆಗೂ ಇಲ್ಲಿಂದ ಕದಲುವುದಿಲ್ಲ. ಸ್ಥಳೀಯ ಸಮಸ್ಯೆಗಳು ಪರಿಹಾರವಾಗುವವರೆಗೂ ಧರಣಿ ವಾಪಸ್ಸು ಪಡೆಯುವುದಿಲ್ಲ ಎಂದು ಘೋಷಿಸಿದರು. ನಂತರ ಮಾತನಾಡಿದ ಕೆ.ಪಿ.ಆರ್.ಎಸ್. ನ ಮುಖಂಡರಾದ ಬಿ.ಸಿ.ಶ್ರೀನಿವಾಸ್ ಮಾತನಾಡುತ್ತಾ ಒಂದು ಕಡೆ ಕರೆಂಟ್ ಶಾಕ್ ಇನ್ನೊಂದು ಕಡೆ ಸೀಮೇ ಎಣ್ಣೆಯೂ



ಸರಿಯಾಗಿ ಸಿಗದೆ ಕತ್ತಲಲ್ಲಿ ಬದುಕುವ ಪರಿಸ್ಥಿತಿ ಉಂಟಾಗಿದೆ. ವಿದ್ಯುತ್ ಸಮಸ್ಯೆ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಕಾಟಾಚಾರದ ಉತ್ತರ ಕೊಡುತ್ತಾರೆ. ಆದರೆ ನಮ್ಮ ಈ ಅವ್ಯವಸ್ಥೆಯ ಬಗ್ಗೆ ಸರ್ಕಾರಕ್ಕೆ ವರದಿ ಮಾಡ ಬೇಕಾದ ಕೆಲಸ ಮಾಡಬೇಕೆಂದು ಅಧಿಕಾರಿಗಳಿಗೆ ಒತ್ತಾಯಿಸಿದರು. ಕೆ.ಪಿ.ಆರ್.ಎಸ್. ನ ತಾಲ್ಲೂಕು ಸಮಿತಿ ಸದಸ್ಯರಾದ ಬಾಲಕೃಷ್ಣ ಮಾತನಾಡುತ್ತಾ ಮಳೆಯೂ ಇಲ್ಲದೆ, ಬೆಳೆಯೂ ಇಲ್ಲದೆ ಇರುವಂತಹ ಪರಿಸ್ಥಿತಿಯಲ್ಲಿ ಕರೆಂಟ್ ಇಲ್ಲದೆ ಇನ್ನಷ್ಟು ಕಾಟ ಕೊಡುತ್ತಿರುವ ಬೆಸ್ಕಾಂ ಇಲಾಖೆಯ ಅಧಿಕಾರಿಗಳ ವರ್ತನೆ ಸರಿಯಿಲ್ಲ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯ ಅವರು ಕತ್ತಲಲ್ಲಿ ಯಾವ ರೀತಿ ಓದಬೇಕು, ಹಳ್ಳಿಗಳಲ್ಲಿ ಕುಡಿಯುವ ನೀರಿಗೂ ತುಂಬಾ ಕಷ್ಟವಾಗಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಕೃಷಿ ಕೂಲಿ ಕಾರ್ಮಿಕರ ಸಂಘದ ಮುಖಂಡರಾದ ಬಿಳ್ಳೂರು ನಾಗರಾಜ್ ಮಾತನಾಡಿ ರೈತರಿಗೆ ವಿದ್ಯುತ್ ಕೊಡವಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲಗೊಂಡಿದೆ. ಅಕ್ರಮ ಸಕ್ರಮ ಮಾಡ್ತೀವಿ ಅಂತ ರೈತರ ಹತ್ತಿರ ಹಣ ಕಟ್ಟಿಸಿಕೊಂಡು ವಂಚನೆ ಮಾಡುತ್ತಿದೆ. ಇದರ ಬಗ್ಗೆ ರೈತರಿಗೆ ಸರಿಯಾದ ತಾಂತ್ರಿಕ ಸಲಹೆ ನೀಡುತ್ತಿಲ್ಲ. 3 ರಿಂದ 4 ಲಕ್ಷದವರೆಗೂ ಖರ್ಚು ಮಾಡಿ ಬೋರ್ ವೆಲ್ ಕೊರೆಸಿದರೆ ಅದಕ್ಕೆ ಸರಿಯಾದ ವಿದ್ಯುತ್ ಅಳವಡಿಸಲು ಇಲಾಖೆಯಿಂದ ಸಹಕಾರ ಸಿಗುತ್ತಿಲ್ಲ. ಹಾಗಾಗಿ ರೈತರು ಆತ್ಮಹತ್ಯೆಗೆ ಮೊರೆಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕೂಡಲೆ ಇಂತಹ ಸಮಸ್ಯೆಗಳನ್ನು ಬಗೆಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತುಂಬಾ ಗಂಭೀರವಾದ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟರು.

ಚಿಕ್ಕಬಳ್ಳಾಪುರ ಜಿಲ್ಲೆಯ ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಾದ ಉಮೇಶ್ ಮತ್ತು ರಮೇಶ್ ಹಾಗೂ ಬಾಗೇಪಲ್ಲಿ ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಉಮೇಶ್ ರವರು ಧರಣಿ ನಿರತರಿಂದ ಬೇಡಿಕೆಯ ಮನವಿ ಪತ್ರವನ್ನು ಸ್ವೀಕರಿಸಲು ಬಂದಾಗ ಕೆ.ಪಿ.ಆರ್.ಎಸ್. ನ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಂದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ[...] ಅದಕ್ಕೆಲ್ಲ ಉತ್ತರಿಸಲು ಅಧಿಕಾರಿಗಳ[...] ಸರಿಯಾದ ಮಾಹಿತಿ ಇಲ್ಲದೆ ಪರದಾ[...] ವಂತಾಯಿತು. ಧರಣಿಯಲ್ಲಿ ಪಾಲ್ಗೊಂಡಿದ್ದ ಜಿ[...] ಪಂಚಾಯ್ತಿ ಉಪಾಧ್ಯಕ್ಷರಾದ ಬಿ. ಸಾವಿತ್ರ[...] ನವರು ಸಹಾ ಅಧಿಕಾರಿಗಳನ್ನು ತರಾ[...] ತೆಗೆದುಕೊಂಡರು. ಜುಲೈ ತಿಂಗಳಿನಲ್ಲಿ[...] ನಿಮಗೆ ಜಿಲ್ಲಾ ಪಂಚಾಯ್ತಿ ಸಭೆಯ[...] ತಿಳಿಸಿದ್ದೇನೆ. ಬಾಗೇಪಲ್ಲಿ ತಾಲ್ಲೂ[...] ಕೊತ್ತಕೋಟ ವಾಂಡ್ಲಪಲ್ಲಿಯಲ್ಲಿ ಶಾಲೆ[...] ಮುಂದೆ ಟ್ರಾನ್ಸ್‌ಫಾರ್ಮರ್ ಬದಲಾಯಿ[...] ಎಂದು. ಆದರೆ ನೀವು ಅದ[...] ಬದಾಲಾಯಿಸುವಷ್ಟರಲ್ಲಿಯೇ ಒಂದು ಮ[...] ಪ್ರಾಣ ಕಳೆದುಕೊಂಡಿತು. ಎಷ್ಟೊಂ[...] ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದೀರ ಎಂ[...] ಎಚ್ಚರಿಸಿದರು. ಅದಕ್ಕೆ ಅಧಿಕಾರಿಗಳ[...] ಉತ್ತರವಿರಲಿಲ್ಲ. ನಂತರ ಒಂದು ವಾರ[...] ಅದನ್ನು ಸರಿಪಡಿಸುತ್ತೇವೆ ಎಂದು ಉತ್ತರಿಸಿದ[...]

ಹೀಗೆ ಸರಿ ಸುಮಾರು ಅಧಿಕಾರಿಗಳು [...] ಪ್ರತಿಭಟನಾಕಾರರು ಒಂದು ಗಂಟೆಗೂ ಹ[...] ಕಾಲ ವಾಗ್ವಾದ ನಡೆಯಿತು. ಕಡೆಗೆ ಬೆಸ್[...] ಅಧಿಕಾರಿಗಳು ಎಲ್ಲವನ್ನೂ ಪರಿಹರಿಸಲು[...] ದಿವಸ ಕಾಲಾವಕಾಶ ಕೋರಿ ಮನವಿ ಪತ್ರವ[...] ಸ್ವೀಕರಿಸಿದರು. ಈ ಧರಣಿಯಲ್ಲಿ ಕೆ.ಪಿ.ಆರ್.[...] ತಾಲ್ಲೂಕು ಅಧ್ಯಕ್ಷರಾದ ಚಂದ್ರಶೇಖರ[...] ಎ.ಎನ್. ಶ್ರೀರಾಮಪ್ಪ, ನಾಗಿರೆಡ್ಡಿ, ಬಿ.ಸುಬ[...] ಬೈರಪ್ಪ, ಜಿಲ್ಲಾಪಂಚಾಯ್ತಿ ಸದಸ್ಯ[...] ನಾರಾಯಣಮ್ಮ, ತಾಲ್ಲೂಕು ಪಂಚಾ[...] ಅಧ್ಯಕ್ಷರಾದ ಶೋಭಾರಾಣಿ, ಸದಸ್ಯರ[...] ನಾರಾಯಣ ನಾಯಕ್, ಶಂಕರ್[...] ಮುಖಂಡರಾದ ಮಂಜುನಾಥ ರೆಡ್ಡಿ, ವೈ.[...] ವೆಂಕಟೇಶ್‌ಬಾಬು, ಚನ್ನರಾಯಪ್ಪ, [...] ರಾಮರೆಡ್ಡಿ, ಅಶ್ವತ್ಥಪ್ಪ, ಅಕ್ರಂ, ಜಿ. ಕೃಷ[...] ಗೋವರ್ಧನಾಚಾರಿ, ಮುಂತಾದವ[...] ಪಾಲ್ಗೊಂಡಿದ್ದರು. ○

WFTU ಕರೆ ಸಿಐಟಿಯು ನಿಂದ ಸಾಮಾಜಿಕ ಭದ್ರತೆಗೆ ಒತ್ತಾಯಿಸಿ ಪ್ರತಿಭಟನೆ

ಕಾರ್ಮಿಕರಿಗೆ ಕೆಲಸದ ಅವಧಿಯನ್ನು ನಿಗದಿಪಡಿಸಬೇಕು ಕನಿಷ್ಠ ವೇತನ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ವಿಶ್ವ ಕಾರ್ಮಿಕರ ಸಂಘಟನೆಗಳ ಒಕ್ಕೂಟ ಕರೆ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು ಸಂಘಟನೆಯ ಕಾರ್ಯಕರ್ತರು ಚಿಕ್ಕಬಳ್ಳಾಪುರ ನಗರದ ಅಂಚೆ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ನಗರದ ಪ್ರವಾಸಿ ಮಂದಿರದಿಂದ ಅಂಚೆ ಕಛೇರಿಯ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದರು. ಕೆಲಸದ ಅವಧಿ ನಿಗಧಿ ಪಡಿಸದೆ ಮತ್ತು ಸಮರ್ಪಕವಾಗಿ ವೇತನ ನೀಡದೆ ಕಾರ್ಮಿಕರನ್ನು ಶೋಷಣೆಗೆ ಒಳಪಡಿಸಲಾಗುತ್ತಿದೆ ಎಂದು ಸಿ.ಐ.ಟಿ.ಯು. ನ ಜಿಲ್ಲಾ ಅಧ್ಯಕ್ಷರಾದ ಸಿದ್ದಗಂಗಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸಿಪಿಐ(ಎಂ)ನ ಮಾಜಿ ಶಾಸಕರು ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀರಾಮರೆಡ್ಡಿ ಮಾತನಾಡಿ ವಾರದ 5 ದಿನಗಳ ಕಾಲ 7 ಗಂಟೆಯಂತೆ 35 ಗಂಟೆ ಕೆಲಸದ ಅವಧಿ ನಿಗಧಿಪಡಿಸಬೇಕು, ಕಾರ್ಮಿಕರ ನ್ಯಾಯ ಸಮ್ಮತ ಬೇಡಿಕೆ ಮತ್ತು ಹಕ್ಕುಗಳಿಗೆ ಮಾನ್ಯತೆ ನೀಡಬೇಕು ಪ್ರತಿಯೊಬ್ಬ ಕಾರ್ಮಿಕರಿಗೂ ಸಾಮಾಜಿಕ ಉದ್ಯೋಗ ಭದ್ರತೆ ಒದಗಿಸಬೇಕು. ಇಡೀ ವಿಶ್ವದಲ್ಲೇ ಬಲಿಷ್ಠ ಎನಿಸಿಕೊಂಡಿರುವ ಅಮೇರಿಕಾ ದೇಶವು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದೆ, ಆರ್ಥಿಕ ದುಸ್ಥಿತಿ ಹಿನ್ನೆಲೆಯಲ್ಲಿ ಅಲ್ಲಿ ಪ್ರತಿ ದಿನ 6 ಬ್ಯಾಂಕುಗಳು ಮುಚ್ಚುತ್ತಿವೆ. ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆ ಎಂದು ಹೇಳಿದರು. ನಂತರ ಸಿಐಟಿಯುವಿನ ಮುಖಂಡರಾದ ಮುನಿಕೃಷ್ಣಪ್ಪ ಮಾತನಾಡಿ ಇಂದು ಅಂತರಾಷ್ಟ್ರೀಯ[...] ಕಾರ್ಯಾಚಾರಣೆಯ ದಿನವಾದ್ದರಿಂದ ಇಡಿ[...] ಭಾರತಾದ್ಯಂತ ಸಿಐಟಿಯು ನೇತೃತ್ವದ[...] ಆಚರಿಸಲಾಗುತ್ತಿದೆ. ಅಮೇರಿಕಾದಲ್ಲಿ ಹಲ[...] ವರ್ಷಗಳಿಂದ ಕಾನೂನು ಬಾಹಿರವಾ[...] ಜೈಲಿನಲ್ಲಿ ಇರುವ ಕ್ಯೂಬನ್ನರನ್ನು ಬಿಡುಗ[...] ಮಾಡಬೇಕು ಎಂದು ಈ ಮೂಲ[...] ಒತ್ತಾಯಿಸುತ್ತಿದ್ದೇವೆ ಎಂದರು. ಜಿಲ[...] ಸಿಐಟಿಯು ನ ಉಪಾಧ್ಯಕ್ಷರಾದ ವೈ.ಆರ[...] ವೆಂಕಟೇಶ್ ಬಾಬು ಕಾರ್ಯದರ್ಶಿ[...] ಲಕ್ಷ್ಮೀದೇವಮ್ಮ, ಮುಸ್ತಫಾ, ಭಾಗ್ಯ[...] ವೆಂಕಟಲಕ್ಷ್ಮಮ್ಮ, ರತ್ನಮ್ಮ, ಆಯಿಷ[...] ಸುನಂದಮ್ಮ, ಜಯಲಕ್ಷ್ಮಮ್ಮ, ಮಧುಲ[...] ಮುಂತಾದವರು ಪಾಲ್ಗೊಂಡಿದ್ದರು.

ೃಷಿಯ ಒಂದು ಅನಿವಾರ್ಯ ಹಾಗೂ ಮೂಲಭೂತ ಅಗತ್ಯಗಳಲ್ಲಿ ಒಂದಾದ ರಸಗೊಬ್ಬರದ ಬೆಲೆಗಳು ವಿಪರೀತವಾಗಿ ರಿ ರೈತರು ಕಂಗಾಲಾಗಿರುವ ಪರಿಸ್ಥಿತಿ ನಮ್ಮ ಮುಂದಿದೆ. ಈ ಸಮಸ್ಯೆಗಳ ಮೂಲ ಕಾರಣಗಳೂ ಹಾಗೂ ರಿಹಾರವೇನೆಂದು ಚರ್ಚಿಸುವ ರಾಜ್ಯ ಮಟ್ಟದ ಸಂವಾದವೊಂದು ಇದೇ ಅಕ್ಟೋಬರ್ 19,2011 ರಂದು ಬೆಂಗಳೂರಿನ ಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘ ಸಂಘಟಿಸಿದ್ದ ಸಂವಾದದ ಂದು ವರದಿ.

ಯುಪಿಎ ಸರ್ಕಾರ –ರಸಗೊಬ್ಬರ ಕಂಪನಿಗಳ ಕೂಟದ ನಡುವಿನ ಶಾಮಿಲಾತಿಯನ್ನು ಬಯಲಿಗೆಳೆಯಿರಿ

ಕೆ.ವರದರಾಜನ್



ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಾನ್ಪಡೆಯವರು ಅಧ್ಯಕ್ಷತೆ ವಹಿಸಿದ್ದ ಸಂವಾದದಲ್ಲಿ ಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಮುಖ್ಯ ತಿಥಿಗಳಾಗಿ ಮಾತನಾಡುತ್ತಾ ರಸಗೊಬ್ಬರ ಕಂಪನಿಗಳು ಹಾಗು ಯಂತ್ರಣ ಕೂಟಗಳು ರಸಗೊಬ್ಬರ ದರಗಳನ್ನು ಮಿತಿಮೀರಿ ರಿಕೆ ಮಾಡಲು ಅವಕಾಶ ನೀಡಿರುವ ಕಾಂಗ್ರೆಸ್ ನೇತೃತ್ವದ ುಪಿಎ ಸರ್ಕಾರದ ಜನವಿರೋಧಿ ತೀರ್ಮಾನವನ್ನು ಅಖಿಲ ಾರತೀಯ ಕಿಸಾನ್ ಸಭಾ ತೀವ್ರವಾಗಿ ಖಂಡಿಸುತ್ತದೆ ಎಂದರು. ವರ ಭಾಷಣದ ಸಾರ ಹೀಗಿದೆ.... ಕಳೆದ ಎರಡು ವರ್ಷಗಳ PA ಸರ್ಕಾರದ ರಸಗೊಬ್ಬರ ನೀತಿಯನ್ನು ನೋಡಿದರೆ ರ್ಕಾರ, ದುಷ್ಟ ರಸಗೊಬ್ಬರ ಉದ್ದಿಮೆಗಳು, ಹೊಟ್ಟೆಬಾಕ ್ಯಾಪಾರಸ್ತರು ಹಾಗು ಕಾಳಸಂತೆಕೋರರ ನಡುವೆ ಅಕ್ರಮ ಾಮಿಲಾತಿ ಗೋಚರಿಸುತ್ತದೆ. ಬೆಲೆಗಳ ಮೇಲಿನ ನಿಯಂತ್ರಣ ೆಗೆದು ಹಾಕಿರುವುದರಿಂದ ಉದ್ದಿಮೆದಾರರ ಬೆಲೆ ನಿಯಂತ್ರಣ ೂಟವೊಂದು ಸ್ಥಾಪನೆಯಾಗಿದ್ದು ಏಕಸ್ವಾಮ್ಯ ರೀತಿಯಲ್ಲಿ ಬೆಲೆ ರಿಕೆಯಾಗಿದೆ. ವಿತರಕರು ಕೃತಕ ಅಭಾವವನ್ನು ಸೃಷ್ಟಿಸಿ ಮತ್ತಷ್ಟು ಷ್ಟಿ ಬೆಲೆ ಏರಿಸುವುದರ ಜೊತೆಗೆ ಕಾಳಸಂತೆಕೋರರ ಹಾವಳಿ ೆಚ್ಚಿಸಿದೆ.

ದೇಶದಲ್ಲಿ ಸಮತೋಲಿತ ರಸಗೊಬ್ಬರ ಹಂಚಿಕೆ ಸಾಧಿಸಲು ನು ಪೌಷ್ಟಿಕ ಆಧಾರಿತ ಸಹಾಯಧನ ನೀತಿಯನ್ನು ಜಾರಿಗೆ



ುತ್ತಿರುವುದಾಗಿ ಸರ್ಕಾರ ಘೋಷಿಸಿದಾಗಲೇ, ಇದು ರೈತರ ೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆಂದು ಹಾಗು ಇದು ಬೆಲೆ ರಿಸಲು ನೆಪ ಮಾತ್ರ ಎಂದು ಕಿಸಾನ್ ಸಭಾ ಹೇಳಿತ್ತು. ನ್ನತಾಧಿಕಾರ ಸಚಿವ ಸಮಿತಿಯು ಯೂರಿಯಾ ಬೆಲೆ ನಿಯಂತ್ರಣ ೆಯಲು ಸುಮಿತ್ರ ಚೌಧುರಿ ಸಮಿತಿಯ ಶಿಫಾರಸುಗಳನ್ನು ಂಗೀಕರಿಸಿದೆ. ಇದರಿಂದಾಗಿ ಕಂಪನಿಗಳಿಗೆ ಮೂಲ ಬೆಲೆ ನಿಗದಿ ಾಡುವಲ್ಲಿ ಸ್ವತಂತ್ರ ಅಧಿಕಾರ ನೀಡಿದಂತಾಗಿದೆ. ಅಲ್ಲದೆ ಅನಿಲ ೆ ಹೆಚ್ಚಳ, ಇನ್ನಿತರ ತೆರಿಗೆಗಳು ಹಾಗು ಅಬಕಾರಿ ಸುಂಕ ್ಧಿಯನ್ನು ನೇರವಾಗಿ ರೈತಾಪಿ ವರ್ಗದ ಮೇಲೆ ಹೇರಲಾಗುತ್ತಿದೆ. ಇತ್ತೀಚಿನ CAG ವರದಿಯಾದ 'ರಸಗೊಬ್ಬರ ಸಹಾಯಧನದ ಕಾರ್ಯಕ್ಷಮತಾ ಲೆಕ್ಕ ಪರಿಶೋದನಾ ವರದಿ'ಯ ಪ್ರಕಾರ ಸರಿ ಸುಮಾರು 45 ಪ್ರತಿಶತ ರೈತರು ಗೊಬ್ಬರ ಕೊಳ್ಳುವಾಗ ನಿಗದಿತ ಬೆಲೆಗಿಂತ ಹೆಚ್ಚು ಬೆಲೆ ಸಂದಾಯಮಾಡುತ್ತಿರುವುದಾಗಿ ತಿಳಿದು ಬಂದಿದೆ ಹಾಗು 60 ಪ್ರತಿಶತ ರೈತರು ತಮಗೆ ವಾರ್ಷಿಕ ಅಗತ್ಯಗಳಿಗೆ ಬೇಕಾದ ಗೊಬ್ಬರವನ್ನು ಪಡೆಯಲು ನಾನಾ ರೀತಿಯ ತೊಂದರೆ ಅನುಭವಿಸಿದ್ದಾರೆ ಎಂದು ವರದಿ ಹೇಳಿದೆ. ವರದಿಯಲ್ಲಿ ಅತಿ ಹೆಚ್ಚು ಬೇಡಿಕೆ ಇರುವ ಸಮಯದಲ್ಲಿ ವಿತರಕರು ಕೃತಕ ಅಭಾವ ಸೃಷ್ಟಿಸಿ ಬೆಲೆಗಳನ್ನು ಗಗನಕ್ಕೆ ಏರುವಂತೆ ಮಾಡಿರುವುದನ್ನು ಗಮನಿಸಿದೆ. ದುಬಾರಿ ಬೆಲೆಯ ಆಮದುಗಳಿಗೆ ಉದ್ದೇಶಪೂರ್ವಕವಾಗಿ ಒತ್ತು ನೀಡುವ ಮತ್ತು ಅತಿ ಮುಖ್ಯ ಕೃಷಿ ಲಾಗುವಾಡು ಯೂರಿಯ ದ ದೇಶಿಯ ಉತ್ಪಾದನೆಯಿಂದ ದೂರಸರಿಯುವ ಸರ್ಕಾರದ ರಸಗೊಬ್ಬರ ನೀತಿಯನ್ನು ಟೀಕಿಸಿದೆ. ಹೊಸ ಬೆಲೆ ನಿಗದಿಯನ್ನು ಸಿಎಜಿ ವರದಿ ಬಲವಾಗಿ ಖಂಡಿಸಿದ್ದರೂ ಕೂಡ ಸರ್ಕಾರ ಬೆಲೆ ನಿಯಂತ್ರಣ ತೆಗೆದುಹಾಕಲು ಹಾಗು ಏರಿಕೆಗೆ ಮುಂದಾಗಿದೆ. ಕಾಳಸಂತೆಕೋರರ ಹಾಗು ಭ್ರಷ್ಟ ಆಚರಣೆಗಳಿಗೆ ಅಂತ್ಯ ಕಾಣಿಸುವ ಬದಲು ರೈತರನ್ನು ರಸಗೊಬ್ಬರ ಕಂಪನಿಗಳ ಕಪಿ ಮುಷ್ಟಿಯಲ್ಲಿ ಸಿಲುಕಿಸುತ್ತದಷ್ಟೇ.

ಕಳೆದ ಸಾಲಿನಲ್ಲಿ ಯೂರಿಯಾ ದರದಲ್ಲಿ 10 ಶೇಕಡಾ ಏರಿಕೆಯಾಗಿದ್ದರು 2011–12 ಸಾಲಿನಲ್ಲಿ ಮತ್ತೆ 10 ಶೇಕಡಾ ಏರಿಕೆ ಕಂಡಿದೆ. ಕಂಪನಿಗಳು ಬಜೆಟ್ ನಲ್ಲಿ ವಿಧಿಸಲಾದ 1 ಪ್ರತಿಶತ ಅಬಕಾರಿ ತೆರಿಗೆಯನ್ನು ನೇರವಾಗಿ ರೈತನ ಮೇಲೆ ಹೊರಿಸಿವೆ

ಏಪ್ರಿಲ್ 2010 ಕ್ಕೆ ಮುಂಚೆ ಯೂರಿಯಾ ಬೆಲೆ ಟನ್ ವೊಂದಕ್ಕೆ ರೂ. 4860 ಇತ್ತು. ಇತ್ತೀಚೆಗಿನ ಬೆಲೆಯೇರಿಕೆಯಿಂದ ಅದು ಟನ್ ಒಂದಕ್ಕೆ ರೂ. 5622 ಕ್ಕೆ ಏರಿದೆ. ಒರಿಸ್ಸಾ, ಜಾರ್ಖಂಡ್, ಉತ್ತರ ಪ್ರದೇಶ್ ದಂಥಹ ರಾಜ್ಯಗಳಲ್ಲಿ ಕೃತಕ ಅಭಾವ ಸೃಷ್ಟಿಸಿ ಟನ್ ವೊಂದಕ್ಕೆ ರೂ. 12000 ದಷ್ಟು ದುಬಾರಿ ಬೆಲೆಗೆ ವಿತರಕರು ಮಾರುತ್ತಿದ್ದಾರೆ. ಸರ್ಕಾರವು ಬಹುತೇಕ ಸಾರ್ವಜನಿಕ ರಂಗದ

ಪುಟ 15ಕ್ಕೆ

ರಸಗೊಬ್ಬರ: ಯಾಕೆ ರೈತ ತತ್ತರ ?

ಜಿ.ಸಿ.ಬಯ್ಯಾರೆಡ್ಡಿ
ಪ್ರಾಂತ ರೈತ ಸಂಘದ
ರಾಜ್ಯ ಪ್ರಧಾನ ಕಾರ್ಯದರ್ಶಿ

"ಯೂರಿಯಾ ಇಲ್ಲದೇ ಯಾವ ಬೆಳೆಯನ್ನೂ ಬೆಳೆಯಲಾಗದು. ಆದರೆ ಯೂರಿಯಾದ ಬೆಲೆ ದಿನೇ ದಿನೇ ಏರುತ್ತಿದೆ. 50 ಕೆ.ಜಿ.ಯ ಯೂರಿಯಾ ಚೀಲಕ್ಕೆ ಏಪ್ರಿಲ್ 1,2011 ರಂದು ರೂ. 278.78 ಪೈಸೆ ಮೇ 1,2011 ರಂದು ರೂ. 281.10 ಪೈಸೆ ಸೆಪ್ಟೆಂಬರ್ 24,2011 ರಂದು ರೂ. 594.00 ಇತ್ತು. ಅಂದರೆ ಕ್ರಮವಾಗಿ ಒಂದು ಕೆ.ಜಿ. ಯೂರಿಯಾದ ಬೆಲೆಯೂ 5.57 ರೂಪಾಯಿ ಇದ್ದದ್ದು ನಂತರ 5.62 ರೂಗೆ ನಂತರ 12.00 ರೂಗೆ ಏರಿಕೆಯಾಗಿದೆ.

ಅದೇ ರೀತಿಯಾಗಿ ಡಿ.ಎ.ಪಿ. ರಸಗೊಬ್ಬರದ 50 ಕೆ.ಜಿ. ಚೀಲದ ಬೆಲೆಯು ಏಪ್ರಿಲ್ 1, 2011 ರಂದು 563.30 ರೂಪಾಯಿ ಇದ್ದದ್ದು ಸೆಪ್ಟೆಂಬರ್ 24, 2011 ರಂದು 950.00 ಗೆ ಏರಿಕೆಯಾಗಿದೆ.

ಅಂದರೆ ಕೆ.ಜಿ. ಡಿ.ಎ.ಪಿ. 11.25 ರೂ ಇದ್ದದ್ದು 20.00 ರೂಪಾಯಿಗೆ ಏರಿಕೆಯಾಗಿದೆ.

ರಸಗೊಬ್ಬರದ ಬೆಲೆ ಶೇ. 110, ರಿಂದ 125 ರಷ್ಟು ಏರಿಕೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ಗಂಭೀರವಾದ ಬರ ಪರಿಸ್ಥಿತಿ ಕಾಣಿಸಿಕೊಂಡಿದೆ. ನೀರಿಲ್ಲ. ವಿದ್ಯುತ್ ಇಲ್ಲ. ಜೋಳದ ಬೆಲೆ ಕ್ವಿಂಟಲ್‌ಗೆ 700–750 ಕ್ಕೆ ಕುಸಿದಿದೆ. ರೈತರ ಬೆಳೆಗೆ ಬೆಲೆ ಸಿಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಂದಾಗಿ ಶೇ. 45 ರಷ್ಟು ರೈತರು ವ್ಯವಸಾಯ ಮಾಡುವುದನ್ನೆ ಬಿಡಬೇಕೆಂಬ ವಿಷಮ ಸ್ಥಿತಿ ತಲುಪಿದ್ದಾರೆ. ಈ ಪರಿಸ್ಥಿತಿಗೆ ಪ್ರಮುಖವಾಗಿ ಕೇಂದ್ರ ಸರ್ಕಾರದ ನೀತಿಗಳು ಕಾರಣ. ಇದಲ್ಲದೇ ನೂರು ರೂಪಾಯಿಗೆ ಮಾರಬೇಕಾದ ಗೊಬ್ಬರವನ್ನು 150 ರೂಪಾಯಿಗೆ ಮಾರಿದರೂ ಕೇಳುವವರೇ ಇಲ್ಲ.



ಈ ಎಲ್ಲ ಕಾರಣಗಳಿಂದ ರೈತರು ಆಹಾರ ಧಾನ್ಯ ಬೆಳೆಯುವುದನ್ನು ಬಿಟ್ಟು ಬೇರೆ ಉತ್ಪಾದನೆಗಳಿಗೆ ವರ್ಗಾವಣೆಗೊಳ್ಳುತ್ತಿದ್ದಾರೆ. ಹೀಗಾಗಿ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗುತ್ತಿದೆ. ಇದಲ್ಲದೇ ರೈತರು ವ್ಯವಸಾಯವನ್ನೇ ಮಾಡದೇ ಬೆಳೆ ಬೆಳೆಯದೇ ಭೂಮಿಯನ್ನು ಬೀಳು ಬಿಡುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಹಾಗೂ ಗ್ರಾಮೀಣ ಬಡತನ ಹೆಚ್ಚುತ್ತಿದೆ. ಒಟ್ಟಾರೆ ಬಹಳ ಆತಂಕಕಾರಿಯಾದ ಬೆಳವಣಿಗೆಯಾಗಿದ್ದು ರೈತರು ಸಂಘಟಿತರಾಗಿ ಹೋರಾಟದ ಮೂಲಕ ಇಂತಹ ಸವಾಲನ್ನು ಎದುರಿಸಬೇಕು.

❊

ಸಿಪಿಎಂ ಮಂಗಳೂರು ನಗರ ಸಮ್ಮೇಳನ

ಕಳೆದ ನಾಲ್ಕು ವರ್ಷಗಳಿಂದ ಮಂಗಳೂರು ನಗರದ ವ್ಯಾಪ್ತಿಯಲ್ಲಿ ಸಿಪಿಎಂ ಪಕ್ಷದ ನೇತೃತ್ವದಲ್ಲಿ ಒಂದರ ಬೆನ್ನಿಗೊಂದು ಎಂಬಂತೆ ಜನತೆಯ




ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳೂ, ರಾಜಕೀಯ ಚಳುವಳಿಗಳೂ ನಡೆಯುತ್ತಾ ಬಂದಿದ್ದು, ಸಿಪಿಎಂ ಪಕ್ಷದ ಕಾರ್ಯಕರ್ತರ ಉತ್ಸಾಹ ಅಕ್ಟೋಬರ್ 9 ರಂದು ನಡೆದ ಪಕ್ಷದ ನಗರ ಸಮ್ಮೇಳನದಲ್ಲಿ ವ್ಯಕ್ತವಾಯಿತು.

ಮಂಗಳೂರಿನ ಪಂಜಿಮೊಗರು ಎಂಬಲ್ಲಿ ಕಾ.ರಮೇಶ್ ಕುಮಾರ್ ನಗರದಲ್ಲಿ ಕಾ.ನಾಗೇಶ್ ಕುಮಾರ್ ವೇದಿಕೆಯಲ್ಲಿ ನಡೆದ ನಗರ ಸಮ್ಮೇಳನಕ್ಕೆ ಪಕ್ಷದ ಹಿರಿಯ ಸಂಗಾತಿ ಕೆ.ಪೂವಪ್ಪ ಸಾಲ್ಯಾನ್ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು. ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಎಡಪಕ್ಷಗಳ ಬೆಂಬಲವಿದ್ದುದರಿಂದ 1ನೇ ಯುಪಿಎ ಸರಕಾರವು ಜನವಿರೋಧಿ ಆರ್ಥಿಕ ನೀತಿಗಳನ್ನು ಪೂರ್ಣವಾಗಿ ಜಾರಿಗೊಳಿಸಲು ಅವಕಾಶ ನೀಡಲಿಲ್ಲ. ಪೆಟ್ರೋಲಿಯಂ ಬೆಲೆಯೇರಿಕೆಗೆ ತಡೆಯೊಡ್ಡಲಾಗಿತ್ತು. ಚಿಲ್ಲರೆ ವ್ಯಾಪಾರದಲ್ಲಿ, ಕೈಗಾರಿಕೆಗಳಲ್ಲಿ, ಬ್ಯಾಂಕಿಂಗ್‌ನಲ್ಲಿ ವಿದೇಶಿ ನೇರ ಹೂಡಿಕೆಗೆ ತಡೆ ಒಡ್ಡಲಾಯಿತು. ಪರಮಾಣು ಶಕ್ತಿ ನೀತಿಯಲ್ಲಿ ಅಮೇರಿಕಾ ನಿರ್ದೇಶನಕ್ಕೆ ಸರ್ಕಾರ ಬಾಗುತ್ತಿರುವುದನ್ನು ವಿರೋಧಿಸಿ ಎಡಪಕ್ಷಗಳು ಆ ಸರ್ಕಾರಕ್ಕೆ ಬೆಂಬಲ ಹಿಂತೆಗೆದವು. ಯುಪಿಎ 2ನೇ ಸರ್ಕಾರ ಪದೇ ಪದೇ ಹೆಚ್ಚಿಸುತ್ತಿರುವ ಪೆಟ್ರೋಲಿಯಂ ಬೆಲೆ, ಕೈಗಾರಿಕೆ ಹಾಗೂ ಪರಮಾಣು ಸ್ಥಾವರಗಳಲ್ಲಿ ವಿದೇಶಿ ಭಾಗಿತ್ವದ ಬಗ್ಗೆ ಜನತೆಯೇ ಅತೃಪ್ತರಾಗಿ ಪ್ರತಿಭಟಿಸುತ್ತಿರುವುದು ' - ಎಡಪಕ್ಷಗಳು ಅಂದು ತಾಳಿದ್ದ ಭಿನ್ನಮತವು ಎಷ್ಟು ಮಹತ್ವದ್ದು ಎಂದು ಜನ ಅರ್ಥೈಸುತ್ತಿದ್ದಾರೆ ಎಂದು ಅವರು ವಿವರಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭ್ರಷ್ಟಾಚಾರವನ್ನು ಪೋಷಿಸಿಕೊಂಡು ಬಳುತ್ತಿರುವುದನ್ನು ಬಿ.ಮಾಧವ ಕಟುವಾಗಿ ಟೀಕಿಸಿದರು. ಸಿಪಿಎಂ ಪಕ್ಷದ ಬಗ್ಗೆ ಜನತೆಯು ನಿರೀಕ್ಷೆಯನ್ನಿಟ್ಟಿದ್ದು, ಪಕ್ಷವು ಇನ್ನಷ್ಟು ಹೋರಾಟಗಳಲ್ಲಿ ತೊಡಗಿಕೊಳ್ಳಲಿದೆ ಎಂದು ಹೇಳಿದರು. ನಿವೇಶನ ರಹಿತರು ನಿವೇಶನ ಕೋರಿ ಮಾಡುವ ಹೋರಾಟಗಳನ್ನು ಇನ್ನಷ್ಟು ಬಲಪಡಿಸಲಿದೆ ಎಂದರು.

ಪ್ರತಿನಿಧಿ ಅಧಿವೇಶನದಲ್ಲಿ 110 ಪ್ರತಿನಿಧಿಗಳು ಭಾಗವಹಿಸಿದ್ದರು. ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಂಡಿಸಿದ ವರದಿಯ ಮೇಲೆ 27 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ಪ್ರತಿನಿಧಿ ಸಮ್ಮೇಳನವು ಮುಂದಿನ ಅವಧಿಗೆ 13 ಮಂದಿಯ ನಗರ ಸಮಿತಿಯನ್ನು ಆಯ್ಕೆ ಮಾಡಿತು. ಸುನಿಲ್ ಕುಮಾರ್ ಬಜಾಲ್ ಅವರು ನಗರ ಸಮಿತಿಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿರುತ್ತಾರೆ. ಸಮ್ಮೇಳನವು ಜಿಲ್ಲಾ ಸಮ್ಮೇಳನಕ್ಕೆ 21 ಮಂದಿ ಪ್ರತಿನಿಧಿಗಳನ್ನು 4 ಮಂದಿ ಪರ್ಯಾಯ ಪ್ರತಿನಿಧಿಗಳನ್ನು ಆಯ್ಕೆ ಮಾಡಿರುತ್ತದೆ.





ಸಮ್ಮೇಳನದ ಕೊನೆಯಲ್ಲಿ ನಡೆದ ಬಹಿರಂಗ ಸಭೆ ಪಂಜಿಮೊಗರು ಮೈದಾನಿನಲ್ಲಿ ನಡೆಯಿತು. ಅದಕ್ಕೂ ಮೊದಲೂ ಕೂಳೂರು ವೃತ್ತದಿಂದ ಪಂಜಿಮೊಗರು ವರೆಗೆ ನಡೆದ ಆಕರ್ಷಕ ಮೆರವಣಿಗೆಯು ಮುಂಚೂಣಿಯಲ್ಲಿದ್ದ ಸಮವಸ್ತ್ರಧಾರಿಗಳ ವಾದ್ಯಘೋಷದ ತಾಲೀಮುನಡೆ ಜನರನ್ನು ಆಕರ್ಷಣೆಗೊಳಿಸಿತು. ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಮುಖಂಡರಾದ ಜಿ.ವಿ.ಶ್ರೀರಾಮ ರೆಡ್ಡಿ, ಬಿ.ಮಾಧವ ಮಾತನಾಡಿದರು. ಸುನಿಲ್ ಕುಮಾರ್ ಬಜಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

★

ಅಕ್ಷರ ದಾಸೋಹ ಕೆಲಸಗಾರರಿಂದ ಬಂಟ್ವಾಳದಲ್ಲಿ ಪ್ರತಿಭಟನೆ:

ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಹೊಸ ನೀತಿಯಂತೆ ಮಕ್ಕಳ ಹಾಜರಿ ಪ್ರಮಾಣಕ್ಕನುಗುಣವಾಗಿ ಅಕ್ಷರ ದಾಸೋಹ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವ ಕ್ರಮವಾಗಿ ಬಂಟ್ವಾಳ ತಾಲೂಕಿನಲ್ಲೂ ಶಾಲೆಯ ಬಿಸಿಯೂಟದ ನೌಕರರನ್ನು ತೆಗೆದು ಹಾಕಿರುವುದುದನ್ನು ವಿರೋಧಿಸಿ ಅಕ್ಟೋಬರ್ 7 ರಂದು ಬಂಟ್ವಾಳ ತಾಲೂಕು ಪಂಚಾಯತ್ ಎದುರು ರಾಜ್ಯ ಅಕ್ಷರ ದಾಸೋಹ ಕೆಲಸಗಾರರ ಸಂಘ (ಸಿಐಟಿಯು) ವತಿಯಿಂದ ಪ್ರತಿಭಟನೆಯನ್ನು ನಡೆಸಲಾಯ್ತು.

ವಜಾ ಮಾಡಿರುವ ಕೆಲಸಗಾರರನ್ನು ವಾಪಾಸು ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ ಅಕ್ಟೋಬರ್ 16 ರಿಂದ 5 ದಿನ ಕಾಲ ವಿಧಾನಸೌಧದ ಎದುರು ಪ್ರತಿಭಟನೆ ಕೈಗೊಳ್ಳುವುದಾಗಿ ಘೋಷಿಸಲಾಯ್ತು. ಪ್ರತಿಭಟನಾಕಾರರನ್ನುದ್ದೇಶಿಸಿ ದ.ಕ.ಜಿಲ್ಲಾ ಸಿಐಟಿಯು ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಬಿಸಿಯೂಟ ಜಿಲ್ಲಾ ಸಂಘಟನೆಯ ಕಾರ್ಯದರ್ಶಿ ಗಿರಿಜಾ ಮೂಡಬಿದ್ರಿ, ಸಿಐಟಿಯು ಬಂಟ್ವಾಳ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ ಮಾತನಾಡಿದರು. ಸಂಘದ ತಾಲೂಕು ಅಧ್ಯಕ್ಷೆ ಸುಂದರಿ ಮಲ್ಲಡ್ಕ,ಕಾರ್ಯದರ್ಶಿ ರೇವತಿ, ಕಾರ್ಮಿಕ ಮುಖಂಡರಾದ ಸಂಜೀವ ಬಂಗೇರ, ಬಿ.ನಾರಾಯಣ, ಶೀನ ಬಂಗೇರ, ಜಾರಪ್ಪ ಮಾರಿಪಳ್ಳ, ಮಾರಪ್ಪ ಬಡಕಬೈಲು ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

★

ಮುನ್ನೂರು ಗ್ರಾಮ ಪಂಚಾಯತು ಎದುರು ನಿವೇಶನ ರಹಿತರ ಪ್ರತಿಭಟನೆ:

ನಿವೇಶನ ಒದಗಿಸುವಂತೆ ನಿವೇಶನ ರಹಿತರು ಅರ್ಜಿ ಸಲ್ಲಿಸಿ ತಿಂಗಳುಗಳೇ ಆಗಿದ್ದರೂ ಈ ಬಗ್ಗೆ ಏನೊಂದೂ ಪ್ರತಿಕ್ರಯಿಸದ ಸರ್ಕಾರದ ಕ್ರಮವನ್ನು ಖಂಡಿಸಿ ಮುನ್ನೂರು ಗ್ರಾಮ ಪಂಚಾಯತು ನಿವಾಸಿಗಳು ಪಂಚಾಯತು ಕಚೇರಿ ಎದುರು ಅಕ್ಟೋಬರ್ 10 ರಂದು ಪ್ರತಿಭಟನಾ ಪ್ರದರ್ಶನ ಏರ್ಪಡಿಸಿದ್ದರು. ಮುನ್ನೂರು ನಿವೇಶನ ರಹಿತರ ಹೋರಾಟ



ಸಮಿತಿಯ ವತಿಯಿಂದ ಈ ಪ್ರತಿಭ
ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಕರ್ನಾ
ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದ
ಯಾದವ ಶೆಟ್ಟಿ ಮಾತನಾಡಿದರು. ಸಿಪಿ
ಉಳ್ಳಾಲ ವಲಯ ಕಾರ್ಯದರ್ಶಿ ಕೃ
ಸಾಲ್ಯಾನ್, ಡಿವೈಎಫ್ಐ ದ.ಕ.ಜಿಲ್ಲಾ
ಮುನೀರ್ ಕಾಟಿಪಳ್ಳ, ಉಳ್ಳಾಲ ವಲ
ಡಿವೈಎಫ್ಐ ಅಧ್ಯಕ್ಷ ಮಹಾಬಲ ದೆಪ್ಪೆಲಿಮ
ಗ್ರಾ.ಪಂ.ಸದಸ್ಯರಾದ ಗಣೇಶ್ ಟೈಲರ್, ಶಶಿಕ
ಕೋಟೆಕಾರು ವಲಯ ಬೀಡಿ ಕಾರ್ಮಿ
ಸಂಘದ ಜಯಂತ ನಾಯ್ಕ್, ಎಸ್ಎಫ್
ಜೀವನ್‌ರಾಜ್ ಕುತ್ತಾರು ಮತ್ತಿತರ
ಉಪಸ್ಥಿತರಿದ್ದರು. ಇದಕ್ಕೂ ಮೊದಲು ಕುತ್ತಾ
ಜಂಕ್ಷನ್‌ನಿಂದ ಮುನ್ನೂರು ವರೆಗೆ ಜಾ
ನಡೆಯಿತು.

★

ಬಿಎಸ್ಎನ್ಎಲ್ ಗುತ್ತಿಗೆ ಕಾರ್ಮಿಕ
ಮರು ನೇಮಕ – ಹೋರಾಟ ಯಶ



ಸಂಸ್ಥೆಯ ದಿನಗೂಲಿ ಮತ್ತು ಗು
ಕಾರ್ಮಿಕರಿಗೆ ಮತ್ತೆ ಕೆಲಸ ನೀಡಬೆ
ಎಂಬುದೂ ಸೇರಿದಂತೆ ವಿವಿಧ ಬೇಡಿಕೆ
ಈಡೇರಿಕೆಗೆ ಒತ್ತಾಯಿಸಿ ಬಿಎಸ್ಸೆನ್ನೆಲ್ ಸ
ಪರ್ಮನೆಂಟ್ ವರ್ಕರ್ಸ್ ಯೂನಿಯನ್ ದ
ಜಿಲ್ಲಾ ಘಟಕ (ಸಿಐಟಿಯು) ಅಕ್ಟೋಬ
ರಂದು ಮಂಗಳೂರು ನಗರದ ಬಿಎಸ್ಸೆನ್
ಪ್ರಧಾನ ಕಚೇರಿ ಎದುರು ಪ್ರತಿಭಟನಾ ಧ
ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾ
ಸಿಐಟಿಯು ಮಂಗಳೂರು ತಾಲ್ಲೂ
ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾ
ದ.ಕ.ಜಿಲ್ಲೆಯ ಬಿಎಸ್ಸೆಎನ್ನೆಲ್ ವಿನಿಮ
ಕೇಂದ್ರಗಳಲ್ಲಿ ಮತ್ತು ಕಚೇರಿಗಳಲ್ಲಿ ಹ
ವರ್ಷಗಳಿಂದ ಗುತ್ತಿಗೆ ಹಾಗೂ ದಿನಗೂ
ಕಾರ್ಮಿಕರಾಗಿ ದುಡಿಯುತ್ತಿರುವ ಕಾರ್ಮಿಕರ
ಪೂರ್ವಪರ ವಿಚಾರಿಸದೆ ಕೆಲಸದಿಂದ ವ
ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ
ಸಮಿತಿಯ ಕಾರ್ಯಾ
ವಸಂತ ಆಚಾರಿ ಕೂ
ಮಾತನಾಡಿದರು.

ಪ್ರತಿಭಟನಾಕಾ
ಕಚೇರಿಯ ಮು
ಶಾಮಿಯಾನ ಹ

ತೆಲಂಗಾಣ: ವಿದ್ಯುತ್ ಕೊರತೆ–ಜನರ ಬವಣೆ ನಿವಾರಿಸಲು ಆಗ್ರಹ

ಆಂಧ್ರಪ್ರದೇಶದಲ್ಲಿ ಮುಂದುವರೆದಿರುವ ಪ್ರತಿಭಟನೆಗಳನ್ನು ನಿಲ್ಲಿಸಲು ಹಾಗೂ ಜನರನ್ನು ಸಂಕಷ್ಟದಿಂದ ಪಾರು ಮಾಡಬೇಕಾದರೆ, ಆಂಧ್ರಪ್ರದೇಶವನ್ನು ಐಕ್ಯವಾಗಿ ಉಳಿಸಿಕೊಳ್ಳಬೇಕೆ, ಇಲ್ಲವೇ ವಿಭಜಿಸಬೇಕೆ ಎಂಬುದನ್ನು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಕೂಡಲೆ ನಿರ್ಧರಿಸಬೇಕೆಂದು ಆಂಧ್ರ ಪ್ರದೇಶ ಸಿಪಿಎಂ ಪಕ್ಷ ಆಗ್ರಹಿಸಿದೆ.


ಪಾಲಿಟ್‌ಬ್ಯೂರೊ ಸದಸ್ಯರಾದ ಬಿ.ವಿ.ರಾಘವುಲು ನೇತೃತ್ವದ ಸಿಪಿಎಂ ನಿಯೋಗ ಅಕ್ಟೋಬರ್ 10ರಂದು ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿಯವರನ್ನು ಭೇಟಿ ಮಾಡಿತು. ಈ ಸಂದರ್ಭದಲ್ಲಿ ಪ್ರತ್ಯೇಕ ತೆಲಂಗಾಣ ಹೋರಾಟದಿಂದ ಸಾಮಾನ್ಯ ಜನರು ಅನುಭವಿಸುತ್ತಿರುವ ಕಷ್ಟಗಳ ಕುರಿತು ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿತು. ವಿದ್ಯುತ್ ಕಡಿತದಿಂದಾಗಿ, ಸಮರ್ಪಕವಾಗಿ ಮಳೆಯಾಗದ ಪ್ರದೇಶಗಳಲ್ಲಿ ಬೆಳೆಗಳು ಹೇಗೆ ನಾಶವಾಗಿವೆ ಮತ್ತು ಬರ ರೀತಿಯ ಪರಿಸ್ಥಿತಿ ನಿರ್ಮಾಣವಾಗಿರುವ ಕುರಿತು ನಿಯೋಗ ಒತ್ತಿ ಹೇಳಿತು.

ಪ್ರತ್ಯೇಕ ತೆಲಂಗಾಣ ಹೋರಾಟವನ್ನು ಬೆಂಬಲಿಸಿ ಸಿಂಗರೇಣಿ ಕಲ್ಲಿದ್ದಲು ಗಣಿ ಕಾರ್ಮಿಕರು ಮುಷ್ಕರ ನಡೆಸುತ್ತಿರುವುದರಿಂದ ಸಮರ್ಪಕವಾಗಿ ಸರಬರಾಜಾಗದೆ ವಿದ್ಯುತ್ ಉತ್ಪಾದನೆಗೆ ಧಕ್ಕೆಯಾಗಿದೆ. ಇದರಿಂದಾಗಿ ಭಾರಿ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಇದರಿಂದಾಗಿ ಈಗಾಗಲೆ ಬೆಳೆದಿರುವ ಬೆಳೆಗಳು ಸೊರಗಿವೆ. ಅದರಲ್ಲೂ ಪ್ರತ್ಯೇಕವಾಗಿ ಕೊಳವೆ ಬಾವಿಗಳನ್ನೇ ಅವಲಂಬಿಸಿ ಕೃಷಿ ಮಾಡುತ್ತಿರುವ ತೆಲಂಗಾಣ ಪ್ರಾಂತ್ಯದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಮುಷ್ಕರ ನಡೆಸುವುದಾಗಿ ಕಾರ್ಮಿಕರು ಈಗಾಗಲೇ ಸಾಕಷ್ಟು ಬಾರಿ ನೊಟೀಸ್ ನೀಡಿದ್ದಾರೆ. ಹೀಗಿದ್ದಾಗಲೂ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಪರ್ಯಾಯ ಕ್ರಮಗಳನ್ನು ಕೈಗೊಳ್ಳದಿರುವುದಕ್ಕೆ ಸಿಪಿಎಂ ಮುಖಂಡರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ರಾಜ್ಯ ಸರ್ಕಾರ ಇತರ ರಾಜ್ಯಗಳಿಂದ ಯಾವುದೇ ಬೆಲೆ ತೆತ್ತು ವಿದ್ಯುತ್ ಖರೀದಿಸಬೇಕು. ಆ ಮೂಲಕ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕೆಂದು ನಿಯೋಗ ಒತ್ತಾಯಿಸಿತು. ಸಮರ್ಪಕವಾಗಿ ಮಳೆಯಾಗದ ಮಂಡಲ್‌ಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಬೇಕು ಮತ್ತು ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂತಲೂ ನಿಯೋಗ ಆಗ್ರಹಿಸಿತು.

ಜನ ನಡೆಸುತ್ತಿರುವ ಮುಷ್ಕರದಿಂದಲೇ ಇಂತಹ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಅಭಿಪ್ರಾಯ ರೂಪಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ರಾಘವುಲು ಟೀಕಿಸಿದರು. ಪ್ರಸಕ್ತ ಬಿಕ್ಕಟ್ಟಿನ ಪರಿಸ್ಥಿತಿಗೆ ಕೇಂದ್ರ ಮತ್ತು ರಾಜ್ಯ

ಅಪ್ಪು

ಸರ್ಕಾರಗಳೇ ಕಾರಣ ಎಂದು ಕಿಡಿ ಕಾರಿರುವ ರಾಘವುಲು, ಪ್ರತ್ಯೇಕ ತೆಲಂಗಾಣ ಕುರಿತು ರಾಷ್ಟ್ರೀಯ ಮಟ್ಟದಲ್ಲಿ ಸಮಾಲೋಚನೆ ನಡೆಸಬೇಕೆಂಬ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗುಲಾಂ ನಬಿ ಆಜಾದ್ ಅವರ ಹೇಳಿಕೆಗೆ ತೀವ್ರ



ಕೃಪೆ: ದಿ ಹಿಂದೂ

ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮಾಲೋಚನೆಗಳನ್ನು ಮುಂದುವರೆಸುವ ಅಗತ್ಯವನ್ನೂ ಹೊಂದಿದ್ದಾರೆಯೇ ಹೇಗೆ ಎಂದು ಖಾರವಾಗಿ ಪ್ರಶ್ನಿಸಿದರು. ಮುಷ್ಕರದಿಂದಾಗಿ ಕಳೆದ 40 ದಿನಗಳಿಂದ ತೆಲಂಗಾಣ ಪ್ರಾಂತ್ಯದ ಎಲ್ಲ ಶಾಲಾ ಕಾಲೇಜುಗಳು ಮುಚ್ಚಿವೆ. ವಿದ್ಯಾರ್ಥಿಗಳು ಮತ್ತು ಪೋಷಕರು ಅವರ ಭವಿಷ್ಯದ ಕುರಿತು ಆತಂಕಿತರಾಗಿದ್ದಾರೆ. ಕಾರ್ಮಿಕರು ಮತ್ತು ಸರ್ಕಾರಿ ನೌಕರರನ್ನು ವಿಭಜಿಸುವ ಮೂಲಕ ಪ್ರತಿಭಟನೆಗಳು ಹತ್ತಿಕ್ಕಲು ಮುಂದಾಗಿರುವ ಸರ್ಕಾರದ ಪ್ರಯತ್ನಗಳನ್ನೂ ರಾಘವುಲು ತೀವ್ರವಾಗಿ ಖಂಡಿಸಿದರು. ಇಂತಹ ಪ್ರಯತ್ನಗಳು ಜನರನ್ನು ಮತ್ತಷ್ಟು ಉದ್ರಿಕ್ತಗೊಳಿಸಲಿದೆ. ನಂತರ ಶಾಂತರೀತಿಯಿಂದ ನಡೆಯುತ್ತಿರುವ ಪ್ರತಿಭಟನೆಗಳು ಹಿಂಸಾರೂಪಕ್ಕೆ ತಿರುಗಲಿವೆ ಎಂದು ಎಚ್ಚರಿಕೆ ನೀಡಿದರು.

ಈ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರದ ಬಳಿ ಮಾತ್ರ ಪರಿಹಾರವಿದೆ. ಹಾಗಾಗಿ ಕೇಂದ್ರ ಸರ್ಕಾರ ವಿಳಂಬ ಮಾಡದೆ ಕೂಡಲೆ ಕಾರ್ಯಪ್ರವೃತ್ತವಾಗಬೇಕು. ಇದುವರೆಗೂ ರಾಜ್ಯದಲ್ಲಿನ ರಾಜಕೀಯ ಪಕ್ಷಗಳಾದ–ಕಾಂಗ್ರೆಸ್. ಟಿಡಿಪಿ, ಬಿಜೆಪಿ ಮತ್ತಿತರ ಪಕ್ಷಗಳು– ಅವರ ರಾಜಕೀಯ ಲಾಭದ ದೃಷ್ಟಿಯಿಂದಲೇ ನಡೆದುಕೊಂಡಿವೆ. ಕೇಂದ್ರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇರುವುದರಿಂದ ಈ ವಿಷಮ ಪರಿಸ್ಥಿತಿಯನ್ನು ನಿಭಾಯಿಸುವ ಪ್ರಾಥಮಿಕ ಜವಾಬ್ದಾರಿಯೂ ಕಾಂಗ್ರೆಸ್ ಪಕ್ಷದ್ದೇ ಆಗಿದೆ. ಆದರೆ ಈ ಬಿಕ್ಕಟ್ಟನ್ನು ಇನ್ನಷ್ಟು ಕಾಲ ಮುಂದಕ್ಕೆ ಹಾಕುವ ಮತ್ತು ಆಗ, ಜನತೆ ಬೇಸರಗೊಂಡು ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ಕೈಬಿಡಲಿದ್ದಾರೆ ಎಂದು ಕಾಂಗ್ರೆಸ್ ಭಾವಿಸಿದಂತಿದೆ ಎಂದು ರಾಘವುಲು ಹೇಳಿದರು. ▮

ಯಡಿಯೂರಪ್ಪ ಜೈಲಿನಲ್ಲಿ... ..

ಪುಟ 3 ರಿಂದ

ಉಚ್ಚಾಟಿಸುವಂತಹ ಕನಿಷ್ಠ ಕ್ರಮ ವಹಿಸಬೇಕಿತ್ತು. ಯಡಿಯೂರಪ್ಪನವರ ಸರಕಾರದ ನಂಗುವ ಅಭಿವೃದ್ಧಿ ಸಾಧನೆಯಲ್ಲಿ ಪಾಲಿರುವ ಇವರ ನಾಲಿಗೆ, ಕೈಗಳು ಹೇಗೆ ಎದ್ದಾವು?. ಆದ್ದರಿಂದಲೇ ತಮ್ಮ ನಾಯಕನನ್ನು ಉಳಿಸಲು ಹೈಕಮಾಂಡ್– ಲೋ ಕಮಾಂಡ್‌ಗಳು ನಿರತವಾಗಿವೆ.

ಇಲ್ಲಿ ಅತೀ ಹುಶಾರಾದವರೆಂದರೆ ಆರ್.ಎಸ್.ಎಸ್. ಇಲ್ಲಿನ ಕೇಶವ ಶಿಲ್ಪ, ನಾಗಪುರದ ' 'ಋಷಿ ಮುನಿಗಳು'! ನ್ಯಾಯ, ಸತ್ಯ, ಪ್ರಾಮಾಣಿಕತೆ, ದೇಶ ಭಕ್ತಿಯ ಬಗ್ಗೆ ಸದಾ ಬೊಗಳೆ ಹೊಡೆವ ಈ ಚೆಡ್ಡಿಗಳಿಗೆ ಇದು ಅಪರಾಧವಲ್ಲ, ಕೇವಲ ಆರೋಪ ! ಅದರದೇನಿದ್ದರೂ ತನ್ನ ಹೆಸರು –ಹಗರಣದ ಹೊರಬರದಂತೆ ನೋಡಿಕೊಳ್ಳುವ ಅದರ ಜಾಯಮಾನ ಅರಿಯದ್ದು ಏನಲ್ಲ. ಅಂದರೆ ಸಂಘ ಪರಿವಾರ ಎಷ್ಟು ಅಧಃಪತನಕ್ಕೆ ಇಳಿದಿದೆ, ರಾಷ್ಟ್ರದ್ರೋಹ ಎಸಗುತ್ತಿದೆ ಎಂಬುದಕ್ಕೆ ಇದೂ ಒಂದು ಸಾಕ್ಷಿ ಕಲ್ಲು.

ರಾಜ್ಯ ಹಾಳದರೇನು?
ನೆಕ್ಕುವುದು ತಮಗಿರಲಿ ಎಂದವರು!

ಹೀಗೆ ಕ್ರಿಮಿನಲ್ ಅಪರಾಧ ಎಸಗಿ ಜೈಲು ಸೇರಿರುವ ವ್ಯಕ್ತಿಯನ್ನು ಜೈಲು, ಆಸ್ಪತ್ರೆಯಲ್ಲಿ ಕಂಡು ಸಂತೈಸಿ, ಸೌಹಾರ್ದತೆ ಹೇಳಿದವರ ವರ್ತನೆ ಹೀನಾಯ. ಅದರಲ್ಲೂ ಖಾವಿ ಧರಿಸಿ ಧರ್ಮೋದ್ಧಾರಕರೆಂದು, ಹೇಳಿಕೊಳ್ಳುವ ಕೆಲವು ಮಠಾಧೀಶರ ವರ್ತನೆ ಅಸಹ್ಯಕರ. ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಸಾರ್ವಜನಿಕರ ಬೆವರ ಹಣವನ್ನು ಎಸೆದಾಗ ಸಿಕ್ಕಷ್ಟು ಬಾಚಿಕೊಂಡವರ ಈ ಋಣ ಸಂದಾಯದ ಪರಿ ಅವಮಾನಕರ. ಇಂತಹ ಧಾರ್ಮಿಕ ವೇಷಧಾರಿಗಳು ಯಡಿಯೂರಪ್ಪನನ್ನು ಈಗಲೂ ಸಮರ್ಥಿಸುತ್ತಿದ್ದಾರೆ. ಬಿಡುಗಡೆಗೆ ಕಾನೂನು 'ಕ್ರಮಗಳನ್ನು ಒಪ್ಪದೇ ಪೂಜೆ– ಯಜ್ಞಗಳಿಂದ ಪಾರಾಗಿಸುವ ವಂಚನೆಯ ವರಸೆಯನ್ನು ಆರಂಭಿಸಿದ್ದಾರೆ . ಯಡಿಯೂರಪ್ಪನ ಕ್ರಿಮಿನಲ್ ಕೃತ್ಯಗಳನ್ನು ನಕ್ಷತ್ರ, ಗ್ರಹಗಳ ಮೇಲೆ ಹಾಕಲು ಜೋತಿಷಿಗಳು ವಜ್ರಾಸನ ಹಾಕಿ ಕುಳಿತಿದ್ದಾರೆ. ಒಂದು ಅಪಾಯಕಾರಿ ಸಂಗತಿಯೆಂದರೆ ನ್ಯಾಯಾಂಗದ ಕ್ರಮವನ್ನು ವಿಕೃತಗೊಳಿಸಿ ಜಾತಿವಾದ ದ ಬಣ್ಣ ಬಳಿದು ರಾಜಕೀಯವಾಗಿ ಬೆಳೆಸಲು ಯತ್ನಿಸುತ್ತಿರುವುದು. ಇಲ್ಲಿ ಲಿಂಗಾಯಿತರ ದಮನ ನಡೆದಿದೆಯಂತೆ, ಸದಾನಂದ ಸರ್ಕಾರದಿಂದ ಅವರಿಗೆ ರಕ್ಷಣೆಯೇ ಇಲ್ಲವಂತೆ ! ಹೀಗೆಂದು ಹೇಳುತ್ತಾ ಸಚಿವ ಸಂಪುಟ ಶಾಸಕರನ್ನೂ ಜಾತಿ ಆಧಾರದಲ್ಲಿ ಎತ್ತಿಕಟ್ಟಿ ಬೆದರಿಕೆ ಒಡ್ಡಿ ಈ ಭ್ರಷ್ಟರನ್ನು ರಕ್ಷಿಸಬೇಕು ಎಂಬುದು ಅವರ ಬೇಡಿಕೆ.

ಅಧಿಕಾರ ದಾಹ

ಈ ಬೆಳವಣಿಗೆ ಬಿಜೆಪಿಯೊಳಗೆ ಕುದಿಯುತ್ತಿರುವ ಗುಂಪುಗಾರಿಕೆಯನ್ನು ತೀವ್ರಗೊಳಿಸ ತೊಡಗಿದೆ. ಸಂಪುಟದ 16 ಸಚಿವರು ಪ್ರತೇಕ ಸಭೆ ನಡೆಸಿದ್ದಾರೆ. ಇನ್ನೊಂದೆಡೆ ಅನಂತಕುಮಾರ್ ಬಣ ಇದೇ ಸಂದರ್ಭ ಬಳಸಿ ಯಡಿಯೂರಪ್ಪನನ್ನೂ ' ಪದಚ್ಯುತಗೊಳಿಸಿ 'ಲಿಂಗಾಯಿತ ನಾಯಕನ ಪಟ್ಟವನ್ನು ಜಗದೀಶ್ ಶೆಟ್ಟರಿಗೆ ಕಟ್ಟುವ ಯತ್ನದಲ್ಲಿ ಮಗ್ನರಾಗಿದ್ದಾರಂತೆ. ಇದು ಹೀಗೆ ಇನ್ನಷ್ಟು ಮುಂದುವರಿಯುವುದರಲ್ಲಿ ಅನುಮಾನವಿಲ್ಲ. ರಾಜ್ಯದ ಜನ ಬರ, ವಿದ್ಯುತ್ ಅಭಾವ, ಕೆಲಸವಿಲ್ಲದೇ ಪರದಾಟ, ಕೂಲಿ, ಆಹಾರ–ವಸತಿ, ಹತ್ತಾರು ಬದುಕಿನ ಸಮಸ್ಯೆಗಳ ನಡುವೆ ನಲುಗುತ್ತಿರುವಾಗ ಈ ನಾಯಕರ ಚಿಂತೆ ಎಂತಹುದು?. ಜನರ ಬಗೆಗೆ ಇಲ್ಲದ ಕಾಳಜಿ,ಆದರೆ ರಾಜ್ಯವನ್ನು ನುಂಗಿ ದೋಚುವ ಲೂಟಿ ಖೋರತನದ ಅವಕಾಶ ಪಡೆಯುವುದಕ್ಕೆ ಎಷ್ಟು ಕಾತುರ?

ಅಧ್ವಾನಗೊಳ್ಳುತ್ತಿರುವ ಅಡ್ವಾಣಿ ಯಾತ್ರೆ

ಇಂತಹ ಸ್ಥಿತಿಯಲ್ಲಿ ಸ್ವಚ್ಛ ಆಡಳಿತ.ಭ್ರಷ್ಟಾಚಾರದ ವಿರುದ್ಧ ಅಡ್ವಾಣಿಯವರು ಆರಂಭಿಸಿರುವ ರಥಯಾತ್ರೆ ನಗೆಪಾಟಲಿಗೀಡಾಗುತ್ತಿದೆ. ಕಣ್ಣೆದುರೇ ಭ್ರಷ್ಟಾಕಾಂಡಗಳುಮನಭೋಮಂಡಲದತ್ತ ಬೆಳೆದು ನಂತಿರುವ ನಾಯಕರು ಇರುವಾಗ ಆಡ್ವಾನಿಯವರ ಕಣ್ಣಿಗೆ ಕಾಣಿಸದೇ? ಇವರ 'ಆತ್ಮ'ಕ್ಕೆ ಸ್ವಲ್ಪವೂ ಅಳುಕಿಲ್ಲವೇ?. ಯಾವ ಮುಖ ಹೊತ್ತು ಕರ್ನಾಟಕಕ್ಕೆ ಬರುತ್ತಾರೆ?. ಇದು ಅವರಿಗೆ ಪ್ರಶ್ನೆಯಲ್ಲ! ಈ ಚೆಡ್ಡಿ ಪಡೆಗೆ ತನ್ನದೇ

ಪುಟ 12 ಕ್ಕೆ

ನ್ಯೂಯಾರ್ಕಿನ ಮ್ಯಾನ್‌ಹಟ್ಟನ್ ಹಣಕಾಸು ಪ್ರದೇಶದ ಲಿಬರ್ಟಿ ಸ್ಕ್ವೇರ್(ಸ್ವಾತಂತ್ರ್ಯ ಚೌಕ)ದಲ್ಲಿ ಸಪ್ಟಂಬರ್ 17 ರಿಂದ ಆರಂಭವಾದ 'ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ' ಆಂದೋಲನ ಈಗ ಅಮೆರಿಕಾ ಸಂಯುಕ್ತ ಸಂಸ್ಥಾನಗಳ 100ಕ್ಕೂ ಹೆಚ್ಚು ನಗರಗಳಿಗೆ ಹರಡಿದೆ. ಸದ್ಯ ಕಾಣುತ್ತಿರುವ ಜಾಗತಿಕ ಹಣಕಾಸು ಬಿಕ್ಕಟ್ಟನ್ನು ಹುಟ್ಟಿಸಿರುವ 'ಕಾರ್ಪೊರೇಟ್ ದುರಾಸೆ'ಯ ವಿರುದ್ಧ ಜನಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ಕ್ರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ ದುರಾಸೆಯೆಂಬುದು ಬಂಡವಾಳಶಾಹಿ ವ್ಯವಸ್ಥೆಯ ಅನಿವಾರ್ಯ ಭಾಗ. ನಮ್ಮ ದೇಶದಲ್ಲಂತೂ ನವ-ಉದಾರವಾದಿ ಪಥ್ಯಗಳಿಂದ ಈ ಕಾಯಿಲೆ ವಾಸಿಯಾಗದು. ನಮ್ಮ ಪ್ರಧಾನಿಗಳು ಮತ್ತು ಅವರ ಸಲಹೆಗಾರರು ಈ ದಾರಿಯ ಮರುಪರಿಶೀಲನೆ ಮಾಡಬೇಕಾಗಿದೆ. ಭಾರತದ ಮುಂದೆ ಆಯ್ಕೆ ಇನ್ನೂ ತೆರೆದಿದೆ. ಬೃಹತ್ ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಜನತೆಯ ಒತ್ತಡಗಳನ್ನು ಹೆಚ್ಚಿಸಿ, ಯುಪಿಎ-2 ಸರಕಾರ ಈ ಆಯ್ಕೆಗೆ ಮುಂದಾಗುವಂತೆ ಮಾಡಬೇಕಾಗಿದೆ.

ಬಂಡವಾಳಶಾಹಿ ಬಿಕ್ಕಟ್ಟಿನ ವಿರುದ್ಧ ಹೆಚ್ಚುತ್ತಿರುವ ಆಕ್ರೋಶ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಅಕ್ಟೋಬರ್ 19, 2011 ರ ಸಂಪಾದಕೀಯ

ಇತ್ತೀಚೆಗೆ ದಕ್ಷಿಣ ಆಫ್ರಿಕಾ ದೇಶದ ಜೊಹಾನ್ನೆಸ್‌ಬರ್ಗ್‌ನಲ್ಲಿ ಮುಕ್ತಾಯಗೊಂಡ ಭಾರತ, ಬ್ರೆಝಿಲ್ ಮತ್ತು ದಕ್ಷಿಣ ಆಫ್ರಿಕಾ (ಇಬ್ಸಾ) ಶೃಂಗ ಸಭೆಯಲ್ಲಿ ಪ್ರಧಾನ ಮಂತ್ರಿ ಮನಮೋಹನ ಸಿಂಗ್ "ಜಾಗತಿಕ ಆರ್ಥಿಕ ನೆಲಕ್ಕೆ ಕುಕ್ಕದಂತೆ ತಡೆಯಲು ಕ್ರಮಗಳನ್ನು ಕೈಗೊಳ್ಳಿ" ಎಂದು ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಕರೆ ನೀಡಿದ್ದಾರೆ. ಈ ಕರೆ ಜಿ-20 ದೇಶಗಳು ಫ್ರಾನ್ಸಿನ ಕ್ಯಾನೆಯಲ್ಲಿ ಸಭೆ ಸೇರುವ ಹದಿನೈದು ದಿನಗಳ ಮೊದಲು ಬಂದಿದೆ.

ಈ ಶೃಂಗ ಸಭೆಗೆ ಹೊರಡುವ ಮುನ್ನ ಪ್ರಧಾನ ಮಂತ್ರಿಗಳು ಏರುತ್ತಿರುವ ಹಣದುಬ್ಬರ ಮತ್ತು ಇಳಿಯುತ್ತಿರುವ ಕೈಗಾರಿಕಾ ಉತ್ಪಾದನೆ ದರ ಎಂಬ ಭಾರತೀಯ ಆರ್ಥಿಕದ ಅವಳಿ ಸಮಸ್ಯೆಗಳ ಬಗ್ಗೆ ಆಳವಾದ ಆತಂಕ ವ್ಯಕ್ತಪಡಿಸುತ್ತ ಈ ಆರ್ಥಿಕದ ನಿರ್ವಾಹಕರು ಮತ್ತು ಸಲಹಾಗಾರರೊಂದಿಗೆ ಉನ್ನತ ಮಟ್ಟದ ಸಮಾಲೋಚನೆಗಳನ್ನು ನಡೆಸಿದ್ದರು.

ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಪ್ರಧಾನಿಗಳ ಕರೆ ಮತ್ತು ಭಾರತೀಯ ಆರ್ಥಿಕಕ್ಕೆ ಅವರು ಅಂಗೀಕರಿಸಬೇಕೆನ್ನುವ ಪಥ್ಯಗಳು, ಇವೆರಡೂ, ಭಾರತ ಈಗಲೂ ಯುಪಿಎ-2 ಸರಕಾರದ ನೇತೃತ್ವದಲ್ಲಿ ನವ-ಉದಾರವಾದಿ ಚೌಕಟ್ಟಿನಲ್ಲೇ ಪರಿಹಾರಗಳ ಹುಡುಕಾಟ ನಡೆಸಿದೆ ಎಂಬುದನ್ನು ಬಿಂಬಿಸುತ್ತವೆ. ಇವು ವಿಶಾಲ ಭಾರತೀಯ ಜನಸಮೂಹಗಳ ಸಂಕಟಗಳನ್ನು ಇನ್ನಷ್ಟು ಆಳಗೊಳಿಸುತ್ತವಷ್ಟೇ. ಈ ಬಗ್ಗೆ ಮುಂದೆ ನೋಡೋಣ.

'ಕಾರ್ಪೊರೇಟ್ ದುರಾಸೆ'ಯ ವಿರುದ್ಧ

ಮಹತ್ವದ ಸಂಗತಿಯೆಂದರೆ, ಭಾರತೀಯ ಪ್ರಧಾನ ಮಂತ್ರಿಗಳಿಗೆ ಹೆಚ್ಚುತ್ತಿರುವ ಜಾಗತಿಕ 'ವಾಲ್ ಸ್ಟ್ರೀಟ್-ವಿರೋಧಿ' ಪ್ರತಿಭಟನೆಗಳ ಪರಿವೆಯೇ ಇಲ್ಲ ಎಂಬುದನ್ನು ಅವರ ಈ ಮಾತುಗಳು ತೋರಿಸುತ್ತಿವೆ. ಜಾಗತಿಕ ಆರ್ಥಿಕದ ಇನ್ನೂ ಹಲವಾರು ಮುಖಂಡರೂ ಕೂಡ, ಅವರಂತೆಯೇ, ಇದನ್ನು ಗಮನಿಸಬಾರದು ಎಂಬ ಯೋಚನೆ ಮಾಡಿರುವಂತೆ ಕಾಣುತ್ತದೆ. 'ಜಾಗತಿಕ ಕಾರ್ಯಾಚರಣೆಯ ದಿನ' ವಿಶ್ವಾದ್ಯಂತ 82 ದೇಶಗಳಲ್ಲಿ 1500 ಪ್ರತಿಭಟನಾ ಕಾರ್ಯಾಚರಣೆಗಳು ನಡೆದವು. ನ್ಯೂಯಾರ್ಕಿನ ಮ್ಯಾನ್‌ಹಟ್ಟನ್ ಹಣಕಾಸು ಪ್ರದೇಶದ ಲಿಬರ್ಟಿ ಸ್ಕ್ವೇರ್(ಸ್ವಾತಂತ್ರ್ಯ ಚೌಕ)ದಲ್ಲಿ ಸಪ್ಟಂಬರ್ 17 ರಿಂದ ಆರಂಭವಾದ 'ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ' ಆಂದೋಲನ ಈಗ ಅಮೆರಿಕಾ ಸಂಯುಕ್ತ ಸಂಸ್ಥಾನಗಳ 100ಕ್ಕೂ ಹೆಚ್ಚು ನಗರಗಳಿಗೆ ಹರಡಿದೆ. ಈ ಎಲ್ಲ ಕಾರ್ಯಾಚರಣೆಗಳು ಕೇಂದ್ರಿತವಾಗಿರುವುದು ಸದ್ಯ ಕಾಣುತ್ತಿರುವ ಜಾಗತಿಕ ಹಣಕಾಸು ಬಿಕ್ಕಟ್ಟನ್ನು ಮತ್ತು ಅದು ಇಮ್ಮಡಿ ಇಳಿಕೆಯ ಹಿಂಜರಿತದತ್ತ ಸರಿಯುವ ಬೆದರಿಕೆ ಉಂಟು ಮಾಡಿರುವ 'ಕಾರ್ಪೊರೇಟ್ ದುರಾಸೆ'ಯ ವಿರುದ್ಧ.

ಒಂದೆಡೆ, ಬೋಸ್ಟನ್ ನಗರದಲ್ಲಿ ಬ್ಯಾಂಕ್ ಆಫ್ ಅಮೆರಿಕಾದ ಎದುರು ಪ್ರತಿಭಟನೆಕಾರರು ಇದು 'ವರ್ಗಸಮರ' ಎಂದು ಕೂಗಾಡುತ್ತಿದ್ದರೆ, ಅಮೆರಿಕಾದ ಬಲಪಂಥೀಯ ರಿಪಬ್ಲಿಕನ್ ಪಾರ್ಟಿ ಇದು ನಿಜಕ್ಕೂ 'ವರ್ಗಸಮರ' ಎಂದು



ಎಚ್ಚರಿಕೆಯ ಗಂಟೆ ಬಾರಿಸುತ್ತಿದೆ.

ಜಾಗತಿಕ ಹಿಂಜರಿತ ಆರಂಭವಾದ ಮೇಲೆ ಕಾರ್ಲ್ ಮಾರ್ಕ್ಸ್‌ರವರ 'ದಾಸ್ ಕೆಪಿಟಲ್' ಗ್ರಂಥದ ಮಾರಾಟ ಸರ್‍ರನೆ ಏರಿದೆಯಂತೆ. ಪೂಜ್ಯ ಪೋಪ್ ಕೂಡ ತಮ್ಮ ನಗರ ವ್ಯಾಟಿಕನ್‌ಗೆ ಈ ಗ್ರಂಥದ ಪ್ರತಿಗಳನ್ನು ತರಿಸಿ ಎಂದು ಆದೇಶ ಹೊರಡಿಸಿರುವುದಾಗಿಯೂ ವರದಿಯಾಗಿದೆ. ವಿಯೆಟ್ನಾಂ ಯುದ್ಧ-ವಿರೋಧಿ ಪ್ರತಿಭಟನೆಗಳ ಕಾಲದಲ್ಲಿ ಇದೇ ಬೋಸ್ಟನ್ ನಗರದಲ್ಲಿ ವಿಶ್ವವಿದ್ಯಾಲಯ ಆವರಣಗಳಲ್ಲಿ "ನೀವು ಉತ್ತಮ ದರ್ಜೆ ಪಡೆಯಬೇಕಾದರೆ 'ಮಾರ್ಕ್ಸ್' ಚೆನ್ನಾಗಿರಬೇಕು" ಎಂಬ ಪೋಸ್ಟರ್‌ಗಳನ್ನು ಹಚ್ಚಲಾಗಿತ್ತು (ಇಲ್ಲಿ ಅಂಕಗಳು ಎಂಬರ್ಥದ ಇಂಗ್ಲಿಷ್ ಪದ 'ಮಾರ್ಕ್ಸ್'ನ್ನು, ಕಾರ್ಲ್ ಮಾರ್ಕ್ಸ್‌ನ ಬಗ್ಗೆ ಚೆನ್ನಾಗಿ ತಿಳಿದಿರಬೇಕು ಎಂಬ ದ್ವಂದ್ವಾರ್ಥ ಬರುವಂತೆ ಬಳಸಲಾಗಿದೆ-ಅನು).

ಬಂಡವಾಳಶಾಹಿಯನ್ನು ಮತ್ತು ಅದರ ಬಿಕ್ಕಟ್ಟುಗಳ ಮೂಲವನ್ನು ಅರ್ಥ ಮಾಡಿಕೊಳ್ಳಲು ಕಾರ್ಲ್ ಮಾರ್ಕ್ಸ್‌ರವರ ಪ್ರಧಾನ ಕೃತಿ 'ದಾಸ್ ಕ್ಯಾಪಿಟಲ್'ಗೆ ಮತ್ತೆ ಮೊರೆ ಹೋಗುತ್ತಿರುವವರು ಆ ಕೃತಿಯ ಮೊದಲ ಸಂಪುಟದ ಕೊನೆಯ ಅಧ್ಯಾಯವನ್ನು ಓದುವುದೊಳ್ಳೆಯದು. "ಬಂಡವಾಳ ಅಡಿಯಿಂದ ಮುಡಿಯ ವರೆಗೆ, ಪ್ರತಿಯೊಂದು ರಂಧ್ರದಿಂದ ರಕ್ತ ಮತ್ತು ಹೊಲಸನ್ನು ಜಿನುಗಿಸುತ್ತಾ ಬರುತ್ತದೆ" ಎನ್ನುವ ಮಾರ್ಕ್ಸ್ ಅದನ್ನು ಅಡಿ ಟಿಪ್ಪಣಿಯಲ್ಲಿ ಒಂದು ಉದ್ಧರಣೆಯ ಮೂಲಕ ಸಮರ್ಥಿಸಿಕೊಳ್ಳುತ್ತಾರೆ. ಇದು ಒಬ್ಬ ಕಾರ್ಮಿಕ ಟಿ ಜೆ ಡನ್ನಿಂಗ್ ಎಂಬಾತನ ಉದ್ಧರಣೆ- "ಸಾಕಷ್ಟು ಲಾಭದೊಂದಿಗೆ ಬಂಡವಾಳಕ್ಕೆ ಬಹಳ ಧೈರ್ಯ ಬರುತ್ತದೆ; 10% ಲಾಭವಿದ್ದರೆ ಅದನ್ನು ಎಲ್ಲಿ ಬೇಕಾದರೂ ತೊಡಗಿಸಬಹುದು; 20% ವಿದ್ದರೆ ಅದಕ್ಕೆ ಆತುರ ಅರಂಭವಾಗುತ್ತದೆ, 50%ವಿದ್ದರೆ ಅದು ಭಂಡತನ ತೋರುತ್ತದೆ. 100%ವಿದ್ದರೆ ಎಲ್ಲ ಮಾನವೀಯ ಕಾನೂನುಗಳನ್ನು ಮೆಟ್ಟಿ ಹಾಕಲು ಅದು ಸಿದ್ಧವಾಗುತ್ತದೆ, 300%ವಿದ್ದರಂತೂ ಅದು ಮಾಡಲು ಹೇಸದ ಅಪರಾಧವಿಲ್ಲ, ಯಾವ ಅಪಾಯಕ್ಕಾದರೂ ತಲೆ ಕೊಡಲು ಅದು ಸಿದ್ಧ, ಎಷ್ಟೆಂದರೆ ಸ್ವತ: ತನ್ನ ಮಾಲಕನನ್ನೇ ನೇಣು ಹಾಕಲು ಕೂಡಾ ಅದು ಸಿದ್ಧವಾಗುತ್ತದೆ." **ಹೇಗೇ ಆಗಲಿ, ಗರಿಷ್ಟ ಲಾಭ ಮಾಡಲೇ ಬೇಕು ಎಂಬ ವಿಕೃತ ಓಟ ಬಂಡವಾಳಶಾಹಿಯಲ್ಲೇ ಅಡಕವಾಗಿರುವ ಗುಣ. ಇದೇ ಪ್ರಸಕ್ತ ಬಿಕ್ಕಟ್ಟಿನ ಮೂಲ ಕಾರಣವೇ ಹೊರತು, ಯಾರೋ ಕೆಲವರ ವೈಯಕ್ತಿಕ ದುರಾಸೆ ಅಥವ ನಿಯಂತ್ರಣ ವ್ಯವಸ್ಥೆಗಳ ದೌರ್ಬಲ್ಯವಲ್ಲ.**

ನುಚ್ಚುನೂರಾಗಿರುವ ಮತ್ತೊಂದು ಮಿಥ್ಯೆ

ಲಾಭವನ್ನು ಗರಿಷ್ಟಗೊಳಿಸುವುದು ಬಂಡವಾಳಶಾಹಿ ವ್ಯವಸ್ಥೆಯ ಆಧಾರಭೂತ ಸಂಗತಿ. ದುರಾಸೆಯೆಂಬುದು ಅದನ್ನು ಬಿಂಬಿಸುವ ಒಂದು ಸೌಮ್ಯವಾದ ಪದವಷ್ಟೇ, ಅಂತಹ ಹಲವು ಪದಗಳಲ್ಲಿ ಒಂದು ಮಾತ್ರ. ದುರಾಸೆಯೆಂಬುದು ಬಂಡವಾಳಶಾಹಿಗೆ ಪರಕೀಯವಾದ ಒಂದು ಸಂಗತಿ. ಆದ್ದರಿಂದ ಅದನ್ನು ಹತೋಟಿಯಲ್ಲಿಡಬಹುದು ಎಂಬ ಮಿಥ್ಯೆ ಮತ್ತೊಮ್ಮೆ ಸ್ಫೋಟಗೊಂಡಿದೆ. ಬಂಡವಾಳಶಾಹಿಯಿಂದ ದುರಾಸೆಯೆಂಬುದನ್ನು ಪ್ರತ್ಯೇಕಿಸಲು ಅಸಾಧ್ಯ. ದುರಾಸೆ ಸದಾ ಅದರ ಜೋಡಿ. ಇಲ್ಲಿ ದೋಷಿ ಆ ವ್ಯವಸ್ಥೆಯೇ ಹೊರತು ಕೆಲವು ಬಂಡವಾಳಶಾಹಿಗಳ ವೈಯಕ್ತಿಕ ಹಣದಾಸೆಯಲ್ಲ.

ಬಂಡವಾಳಶಾಹಿಯ ಅಡಿಯಲ್ಲಿ ಪ್ರಭುತ್ವ ಎಂಬುದು ಒಂದು ಸೌಮ್ಯವಾದ ತಟಸ್ಥ ಸಂಸ್ಥೆ ಎಂಬ ಪ್ರಜ್ಞಾಪೂರ್ವಕವಾಗಿ ಬೆಳೆಸಿಟ್ಟ ಇನ್ನೊಂದು ಮಿಥ್ಯೆಯೂ ನುಚ್ಚುನೂರಾಗಿದೆ. ಬಂಡವಾಳಶಾಹಿ ಪ್ರಭುತ್ವ ತನ್ನ ಸ್ವಭಾವಕ್ಕೆ ಅನುಗುಣವಾಗಿ ಪ್ರಸಕ್ತ ಬಿಕ್ಕಟ್ಟನ್ನು ಉಂಟು ಮಾಡಿದ ಹಣಕಾಸು ದೈತ್ಯರನ್ನೇ ಪಾರು ಮಾಡಲು ಮಧ್ಯಪ್ರವೇಶಿಸಿತು. ಅಮೆರಿಕನ್ ಸರ್ಕಾರದ ಹಣಕಾಸು ಪಾರು ಕಾರ್ಯಕ್ರಮಗಳ ವಿಶೇಷ ಮಹಾನಿರೀಕ್ಷಕರು ಹೀಗಂದಿದ್ದಾರೆ: "2007ರಲ್ಲಿ ಹಣಕಾಸು ಬಿಕ್ಕಟ್ಟು ಆರಂಭಗೊಂಡಂದಿನಿಂದ ಒಕ್ಕೂಟ ಸರಕಾರ ಹಲವು ಸಂಸ್ಥೆಗಳ ಮೂಲಕ ಆರ್ಥಿಕಕ್ಕೆ ಮತ್ತು ಹಣಕಾಸು ವ್ಯವಸ್ಥೆಗೆ ಬೆಂಬಲ ನೀಡಲೆಂದು ರೂಪಿಸಿದ ಹತ್ತಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಒಕ್ಕೂಟ ಸರಕಾರದ ಒಟ್ಟು ಬೆಂಬಲ 23.7 ಟ್ರಿಲಿಯನ್ ಡಾಲರುಗಳಷ್ಟಾಗಬಹುದು." ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಜಿಡಿಪಿ 14 ಟ್ರಿಲಿಯನ್ ಗಿಂತ ತುಸು ಹೆಚ್ಚು ಎಂಬ ಸಂಗತಿಯೊಡನೆ ಇದನ್ನು ಹೋಲಿಸಿ ನೋಡಿ. ಆದರೆ ಅಮೆರಿಕನ್ ಖಜಾನೆಯ ವಕ್ತಾರರು ಈ ಅಂಕಿ-ಅಂಶ ಸರಿಯಾಗಿಲ್ಲ ಎಂದು ಹೇಳುತ್ತಾರೆ.

ಅದೇ ರೀತಿ, ಹಲವು ಅಭಿವೃದ್ಧಿ ಹೊಂದಿದ ದೇಶಗಳ ಸರಕಾರಗಳು ಹಣಕಾಸು ಸಂಸ್ಥೆಗಳನ್ನು ಪಾರು ಮಾಡಲೆಂದು ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿದವು. ಹೀಗೆ ಕಾರ್ಪೊರೇಟ್ ದಿವಾಳಿಯನ್ನು ಸಾರ್ವಭೌಮ ದಿವಾಳಿಯಾಗಿ, ಅಂದರೆ ಕಂಪನಿಗಳ ದಿವಾಳಿಯನ್ನು ಇಡೀ ದೇಶದ ದಿವಾಳಿಯಾಗಿ ಪರಿವರ್ತಿಸಿದವು. ಈ ಸಾಲದ ಹೊರೆಯನ್ನು ನಿಭಾಯಿಸುವಲ್ಲಿ ಇಂದು ಯುರೋಪಿಯನ್ ಒಕ್ಕೂಟ ತಳಮಳಕ್ಕೊಳಗಾಗಿದೆ. ಗ್ರೀಸಿನಂತಹ ಸರಕಾರಗಳು ತೀವ್ರವಾದ 'ಮಿತವ್ಯಯ'ಕ್ರಮಗಳನ್ನು,ಅಂದರೆ ದುಡಿಯುವ ಜನಗಳ ಸಾಮಾಜಿಕ ಸೌಲಭ್ಯಗಳಲ್ಲಿ, ಅವರಿಗಾಗಿ ಮಾಡುವ ಖರ್ಚುಗಳಲ್ಲಿ ವಿಪರೀತ ಕಡಿತದ ಕ್ರಮಗಳನ್ನು ಅಂಗೀಕರಿಸಿವೆ, ಸ್ಪೇನಿನ ಸರಕಾರವೂ ಅದೇ ಹಾದಿಯಲ್ಲಿದೆ. ಸಾರ್ವತ್ರಿಕ ಮುಷ್ಕರಗಳು ಮತ್ತು ಪ್ರತಿಭಟನೆಗಳು ಅಲ್ಲೀಗ ದೈನಂದಿನ ಸಂಗತಿಗಳಾಗಿ ಬಿಟ್ಟಿವೆ.

ವಿಷಮತೆ ಹೆಚ್ಚಿಸಿರುವ ಆರ್ಥಿಕ ಹಿಂಜರಿತ

ಬಿಕ್ಕಟ್ಟಿನ ಪರಿಣಾಮಗಳು ಬಹಳ ತೀವ್ರವಾಗಿವೆ. ಹೊಸ ಜನಗಣತಿ ಮಾಹಿತಿಯ ಪ್ರಕಾರ ಅಮೆರಿಕನ್ ನಾಗರಿಕರಲ್ಲಿ, ಪ್ರತಿ ಆರು ಮಂದಿಯಲ್ಲಿ ಒಬ್ಬರು ಬಡತನದಲ್ಲಿ ಇದ್ದಾರೆ. ಸತತ ಮೂರನೇ ವರ್ಷದಲ್ಲಿ, ಅಲ್ಲಿ ಕುಟುಂಬಗಳ ಆದಾಯಗಳು ಇಳಿದಿವೆ, ಬಡತನ ದರ ಏರಿದೆ ಎಂದು ಅಮೆರಿಕನ್ ಸೆನ್ಸಸ್ ಬ್ಯೂರೋ ವರದಿ

ಕನ್ನಡ ವಾರಪತ್ರಿಕೆ

ಮಾಡಿದೆ. ಅಧಿಕೃತ ನಿರುದ್ಯೋಗ ದರ ಸದ್ಯಕ್ಕೆ 9.1% , ಅಂದರೆ 1.4 ಕೋಟಿ ಅಮೆರಿಕನ್ ನಾಗರಿಕರು ಈಗ ಕೆಲಸವಿಲ್ಲದೆ ಖಾಲಿ ಕೂತಿದ್ದಾರೆ. ಒಟ್ಟಾರೆ ಬಡತನದ ದರ 2009ರಲ್ಲಿ 14.3% ಇದ್ದದ್ದು 2010ರಲ್ಲಿ 15.1% ಅಥವ 4.62 ಕೋಟಿಗೇರಿದೆ. ನಾಲ್ಕು ಮಂದಿಯ ಒಂದು ಕುಟುಂಬದ ವಾರ್ಷಿಕ ಆದಾಯ - 22,300 ಡಾಲರುಗಳು ಅಲ್ಲಿ ಬಡತನದ ರೇಖೆ. ಅಮೆರಿಕನ್ ಕುಟುಂಬಗಳ ಮಧ್ಯಸ್ಥ(ಮೀಡಿಯನ್)ವಾರ್ಷಿಕ ನಿಜ ಆದಾಯ 2007ರಿಂದ 2010ರ ನಡುವೆ 6.4% ಕಡಿತಗೊಂಡು 49,445 ಡಾಲರಿಗಿಳಿದಿದೆ. ಒಟ್ಟಾರೆಯಾಗಿ ಸರಾಸರಿ ಆದಾಯ 7.1% ದಷ್ಟು ಇಳಿದಿದ್ದರೆ, ಅಲ್ಲಿಯ ಕರಿಯ ಜನರ ಮಟ್ಟಿಗೆ ಇದು ಅದರ ದುಪ್ಪಟ್ಟಿಗಿಂತಲೂ ಹೆಚ್ಚು, ಅಂದರೆ 15% ದಷ್ಟು ಭಾರೀ ಇಳಿತ ಕಂಡಿದೆ. ಆಫ್ರಿಕನ್-ಅಮೆರಿಕನ್ನರ ನಿರುದ್ಯೋಗ ದರ ಈಗ 16.7% ದಷ್ಟಿದೆ. 1980ರ ದಶಕದ ಆರಂಭದಲ್ಲಿ ಇಂಧನ ಬಿಕ್ಕಟ್ಟು ತೀವ್ರಮಟ್ಟಕ್ಕೇರಿದ್ದಾಗ, ನವ-ಉದಾರವಾದಿ ಸರಕಾರೀ ಕಡಿತಗಳು ಹಣದುಬ್ಬರವನ್ನು, ಬಡ್ಡಿದರಗಳನ್ನು ಮತ್ತು ನಿರುದ್ಯೋಗವನ್ನು ತೀವ್ರವಾಗಿ ಏರಿಸಿದ್ದ ಸಂದರ್ಭದಲ್ಲೂ ಯಾವುದೇ ಮೂರು ವರ್ಷಗಳ ಅವಧಿಯಲ್ಲಿಯೂ ಬಡತನದ ಏರಿಕೆಯ ಪ್ರಮಾಣ 2007-2010ರಲ್ಲಿ ಕಂಡು ಬಂದಷ್ಟು ತ್ವರಿತವಾಗಿ ಏರಿರಲಿಲ್ಲ ಎಂಬುದು ಆರ್ಥಿಕ ಹಿಂಜರಿತದ ಪರಿಣಾಮ ಎಷ್ಟು ತೀವ್ರವಾಗಿದೆ ಎಂಬುದನ್ನು ಬಿಂಬಿಸುತ್ತದೆ. ಬಡತನದಲ್ಲಿ ಬದುಕುತ್ತಿರುವ ಅಮೆರಿಕನ್ನರ ಒಟ್ಟು ಸಂಖ್ಯೆ, ಅಂದರೆ 4.6 ಕೋಟಿ, 1959ರಲ್ಲಿ ಜನಗಣತಿಯಲ್ಲಿ ಅದನ್ನು ಗುರುತಿಸಲಾರಂಭಿಸಿದಂದಿನಿಂದ ಕಂಡು ಬಂದಿರುವ ಅತೀ ಹೆಚ್ಚಿನ ಸಂಖ್ಯೆ. ಇನ್ನು ಒಟ್ಟು ಜನಸಂಖ್ಯೆಯಲ್ಲಿ ಬಡತನದ ಅನುಪಾತವನ್ನು ಗಮನಿಸಿದರೆ, 1983ರ ನಂತರ 1993ರಲ್ಲಿ ಒಮ್ಮೆಯಷ್ಟೇ ಅದು ಈಗ ತಲುಪಿರುವ ಅನುಪಾತವನ್ನು ತಲುಪಿತ್ತು. ದೇಶದ ಒಟ್ಟು ಆದಾಯದಲ್ಲಿ ಅತಿ ಮೇಲಿನ ಮಟ್ಟದ 1% ಮಂದಿಯ ಪಾಲು 20%ದ ಸುತ್ತಮುತ್ತಲೇ ಇದೆ, ಅದು ಕಡಿಮೆಯಾಗುತ್ತಿಲ್ಲ. 1970ರ ದಶಕದಲ್ಲಿ ಇದು ಸುಮಾರು 8% ದಷ್ಟಿತ್ತು.



ಅಲ್ಲದೆ, ಹಿಂಜರಿತ ಎಲ್ಲಾ ಅಮೆರಿಕನ್ನರ ಸಂಪತ್ತಿನ ಮೇಲೆ ಗಾಢ ದುಷ್ಪರಿಣಾಮ ಬೀರಿದ್ದರೂ, ಬಿಳಿ ಅಮೆರಿಕನ್ನರು ಅನುಭವಿಸಿದ ನಷ್ಟದ ಪ್ರಮಾಣ ಅತೀ ಕಡಿಮೆ ಎಂದು ಅಮೆರಿಕಾದ ಹೊಸ ಜನಗಣತಿ ಮಾಹಿತಿಗಳನ್ನು ಕುರಿತಂತೆ ಪಿವ್ ಸಂಶೋಧನಾ ಕೇಂದ್ರದ ವಿಶ್ಲೇಷಣೆ ತೋರಿಸುತ್ತದೆ. 2005ರಿಂದ 2009ರ ನಡುವೆ ಹಿಸ್ಪಾನಿಕ್ ಕುಟುಂಬಗಳ ನಿವ್ವಳ ಆಸ್ತಿಮೌಲ್ಯ ಸರಾಸರಿಯಾಗಿ 66% ದಷ್ಟು ಮತ್ತು ಕರಿಯ ಕುಟುಂಬಗಳದ್ದು 53%ದಷ್ಟು ಇಳಿದರೆ, ಬಿಳಿಯ ಕುಟುಂಬಗಳು ಅನುಭವಿಸಿದ ಇಳಿಕೆ ಕೇವಲ 16%. ಬಿಳಿಯ ಕುಟುಂಬಗಳ ಸರಾಸರಿ ಆಸ್ತಿ ಮೌಲ್ಯ ಈಗ ಕರಿಯ ಕುಟುಂಬಗಳ ಆಸ್ತಿ ಮೌಲ್ಯದ 20 ಪಟ್ಟಾದರೆ, ಹಿಸ್ಪಾನಿಕ್ ಕುಟುಂಬಗಳ 18 ಪಟ್ಟು, ಇದು ಹಿಂಜರಿತದ ಮೊದಲು ಇದ್ದ ಕಂದರದ ಸುಮಾರು ದುಪ್ಪಟ್ಟು, 1984ರಿಂದ ಇಂತಹ ಮಾಹಿತಿಗಳನ್ನು ಕಲೆ ಹಾಕುತ್ತಿದ್ದು ಈ ಆದಾಯ ಕಂದರ ಇಷ್ಟೊಂದು ಪ್ರಮಾಣದಲ್ಲಿ ಹಿಂದೆ ಕಂಡು ಬಂದಿರಲಿಲ್ಲ. ಹಿಂಜರಿತ ಏಶ್ಯನ್ ಅಮೆರಿಕನ್ ಕುಟುಂಬಗಳ ಆಸ್ತಿ ಮೌಲ್ಯಗಳಲ್ಲೂ 54% ಇಳಿಕೆ ತಂದಿದೆ. 2005ರ ಮೊದಲು ಇದು ಸರಾಸರಿ ಬಿಳಿ ಕುಟುಂಬಕ್ಕಿಂತ ಹೆಚ್ಚಿತ್ತು, ಆದರೆ ನಂತರ 2009ರ ವೇಳೆಗೆ ಇದು ಬಿಳಿ ಕುಟುಂಬಗಳಿಗಿಂತ ಕೆಳಗಿಳಿಯಿತು. 2005ರಲ್ಲಿ ಅತೀ ಹೆಚ್ಚು ಸಂಪತ್ತು ಹೊಂದಿರುವ 10% ಕುಟುಂಬಗಳು ಎಲ್ಲಾ ಕುಟುಂಬಗಳ ಒಟ್ಟು ಸಂಪತ್ತಿನ 49% ಪಾಲು ಹೊಂದಿದ್ದರೆ, 2009ರ ವೇಳೆಗೆ ಅದು 56%ಕ್ಕೇರಿದೆ. ಯಾವ ಆಸ್ತಿಯೂ ಇಲ್ಲದವರ ಸಂಖ್ಯೆ ಈ ಆರ್ಥಿಕ ಹಿಂಜರಿತದ ಅವಧಿಯಲ್ಲಿ ತೀವ್ರವಾಗಿ ಏರಿದೆ. 2005ರಲ್ಲಿ ನಿವ್ವಳ ಆಸ್ತಿ ಮೌಲ್ಯ ಸೊನ್ನೆ ಅಥವ ಋಣಾತ್ಮಕವಾಗಿರುವ ಹಿಸ್ಪಾನಿಕ್ ಕುಟುಂಬಗಳ ಪ್ರಮಾಣ 23% ಇತ್ತು, 2009ರಲ್ಲಿ ಅದು 33%ಕ್ಕೇರಿತ್ತು. ಕರಿಯ ಕುಟುಂಬಗಳಲ್ಲಿ ಅದು 29%ದಿಂದ 35%ಕ್ಕೇರಿತು ಹಾಗೂ ಬಿಳಿಯ ಕುಟುಂಬಗಳಲ್ಲಿ 11% ದಿಂದ 15% ಕ್ಕೇರಿತು. ಹಲವು ವರ್ಷಗಳಿಂದ ಆದಾಯಗಳಲ್ಲಿ ವಿಷಮತೆ ಅಮೆರಿಕಾದಲ್ಲಿ ಹೆಚ್ಚುತ್ತಾ ಬರುತ್ತಿರುವುದನ್ನು ಅಲ್ಲಿನ ಅಂಕಿ-ಅಂಶಗಳು ತೋರಿಸುತ್ತಿದ್ದವು. ಅದೀಗ 1930ರ ದಶಕದ ಮಹಾಕುಸಿತದ ಅವಧಿಯ ನಂತರ ಎಂದೂ ಕಾಣದ ಮಟ್ಟವನ್ನು ತಲುಪಿದೆ.

ಇನ್ನೊಂದೆಡೆ, ಈ ಬಿಕ್ಕಟ್ಟನ್ನು ಹುಟ್ಟು ಹಾಕಿದ ವಾಲ್ ಸ್ಟ್ರೀಟಿನ ಹಣಕಾಸು ದೈತ್ಯರ ಸ್ಥಿತಿ-ಗತಿಗಳೇನು? 'ದಿವಾಳಿ'ಯೆದ್ದಿತ್ತು ಎನ್ನಲಾದ ಮೆರಿಲ್ ಲಿಂಚ್‌ನ್ನು ವಹಿಸಿಕೊಂಡ ಬ್ಯಾಂಕ್ ಆಫ್ ಅಮೆರಿಕಾ 2011ರ ಮೊದಲ ಆರು ತಿಂಗಳಲ್ಲಿ 370 ಕೋಟಿ ಡಾಲರುಗಳನ್ನು ಗಳಿಸಿತು. ಗೋಲ್ಡ್‌ಮನ್ ಸ್ಯಾಕ್ಸ್ ತನ್ನ ಉನ್ನತ ಅಧಿಕಾರಿಗಳಿಗೆ ಬೋನಸ್ ನೀಡಲೆಂದೇ 523 ಕೋಟಿ ಡಾಲರುಗಳನ್ನು ಎತ್ತಿಟ್ಟಿದೆ. ಈ ಬ್ಯಾಂಕ್ ಈ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ 1189 ಕೋಟಿ ಡಾಲರುಗಳಷ್ಟು ನಿವ್ವಳ ಹೆಚ್ಚುವರಿ ಆದಾಯ ಗಳಿಸಿದೆ, ನಿವ್ವಳ ಗಳಿಕೆ 270 ಕೋಟಿ ಡಾಲರುಗಳು.

ನವ-ಉದಾರವಾದಿ ಪಥ್ಯ ಕೆಲಸ ಮಾಡದು

ಇಂತಹ ಸಂದರ್ಭದಲ್ಲಿ, ಮೇಲೆ ಗಮನಿಸಿದ ಪ್ರಧಾನ ಮಂತ್ರಿಗಳ ಕಾಳಜಿ, ನಿಜವಾಗಿಯೂ, ಸ್ವಾಭಾವಿಕ ಎಂದನಿಸುತ್ತದೆ. ಆದರೆ ಭಾರತದಲ್ಲಿರುವ ನಮಗೆ ಸೂಚಿಸುತ್ತಿರುವ ಪಥ್ಯಗಳಾದರೂ ಏನು? ಒಟ್ಟಾರೆ ಹಣದುಬ್ಬರ



ಸಪ್ಟಂಬರಿನಲ್ಲಿ 9.72% ಇದ್ದರೆ, ಆಹಾರ, ಇಂಧನ ಮತ್ತು ಬಳಕೆ ಸರಕುಗಳ ಬೆಲೆಗಳು ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಏರಿವೆ. ಇನ್ನೊಂದೆಡೆ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಕೇವಲ 4.1%ಕ್ಕೆ ಕುಸಿದಿದೆ. ಜಾಗತಿಕ ಹಿಂಜರಿತದಿಂದಾಗಿ ರಫ್ತು ಪ್ರಮಾಣ ಜುಲೈ- ಸಪ್ಟಂಬರ್ ನಡುವೆ 82%ದಿಂದ 36%ಕ್ಕೆ ಇಳಿಯಿತು. ಆಮದು ಪ್ರಮಾಣ ಕೂಡ ಅದೇ ರೀತಿ ಬಿದ್ದು ಆಂತರಿಕ ಬೇಡಿಕೆ ಕುಸಿದಿರುವದನ್ನು ತೋರಿಸಿದೆ. ಇದರಿಂದಾಗಿ ನಮ್ಮ ವ್ಯಾಪಾರ ಕೊರತೆ 7350 ಕೋಟಿ ಡಾಲರುಗಳಷ್ಟಾಗಿದೆ. ಇಷ್ಟು ದೊಡ್ಡ ಪ್ರಮಾಣದ ಕೊರತೆ ಹಿಂದೆಂದೂ ಕಂಡು ಬಂದಿರಲಿಲ್ಲ.

ಹಣದುಬ್ಬರವನ್ನು ಹತೋಟಿಗೆ ತರುವ ರಿಝರ್ವ್ ಬ್ಯಾಂಕ್ ಕ್ರಮಗಳಿಂದಾಗಿ ಸಾಲದ ವೆಚ್ಚ ಏರುವಂತಾಗಿದೆ, ಅದರಿಂದಾಗಿ ಹೂಡಿಕೆ ಇಳಿಯುತ್ತಿದೆ, ಎಂದು ಹೂಡಿಕೆದಾರರು ದೂರುತ್ತಿದ್ದಾರೆ. ಅಂದರೆ ಬಂಡವಾಳ ಅಗ್ಗವಾಗಿದ್ದರೆ, ಹೂಡಿಕೆ ಹೆಚ್ಚುತ್ತದೆ, ಅದರಿಂದಾಗಿ ಹೆಚ್ಚಿನ ಬೆಳವಣಿಗೆ ಕಾಣಬರುತ್ತದೆ ಎಂಬುದು ಈ ದೂರಿನ ಹಿಂದಿರುವ ಅಂದಾಜು.

ಈ ತರ್ಕದಲ್ಲಿರುವ ದೋಷವೆಂದರೆ, ಹೆಚ್ಚಿನ ಹೂಡಿಕೆಗಳ ಮೂಲಕ ಉತ್ಪಾದಿಸಿದುದನ್ನು ಮಾರಾಟ ಮಾಡಬೇಕು, ಅದಕ್ಕೆ ಜನಗಳಿಗೆ ಕೊಳ್ಳುವ ಶಕ್ತಿ ಇರಬೇಕು. ಇದು ಜಗತ್ತಿನಲ್ಲಿಯೂ, ನಮ್ಮ ದೇಶದಲ್ಲಿಯೂ ತೀವ್ರವಾಗಿ ಇಳಿಯುತ್ತಿರುವಾಗ, ನವ-ಉದಾರವಾದಿ ಪಥ್ಯಗಳು ಕೆಲಸ ಮಾಡಲಾರವು. ಅವು ಹೆಚ್ಚಿನ ಜೂಜುಕೋರ ಲಾಭಗಳನ್ನು ಗಳಿಸಲು ಅಗ್ಗದ ಬಂಡವಾಳದ ಬಳಕೆಯನ್ನು ಮರೆಮಾಚುವ ಒಂದು ಪರದೆಯಷ್ಟೇ. ಜಾಗತಿಕವಾಗಿ ಕಂಡು ಬರುತ್ತಿರುವ ಪ್ರವೃತ್ತಿ ಇದು. ಈ ಹಿಂಜರಿತವನ್ನು ಹುಟ್ಟು ಹಾಕಿದ ಹಣಕಾಸು ಕಾರ್ಪೊರೇಟ್‌ಗಳೇ ತಮ್ಮ ಖಾತೆಗಳಲ್ಲಿ ಕಳೆದ ಆರು ತಿಂಗಳಲ್ಲಿ 11.3 ಟ್ರಿಲಿಯನ್ ಡಾಲರುಗಳಷ್ಟು ಹೆಚ್ಚಿನ ಡಿರೈವೇಟಿವ್‌ಗಳನ್ನು ಹೊಂದಿ ತಮ್ಮ ಜೂಜುಕೋರ ವ್ಯಾಪಾರವನ್ನು ಹೆಚ್ಚಿಸಿವೆ. ಡಿರೈವೇಟಿವ್‌ಗಳ ಚಟುವಟಿಕೆಗಳಲ್ಲಿ, ಅಂದರೆ ಈ ಜೂಜುಕೋರ ವ್ಯಾಪಾರದಲ್ಲಿ ಪ್ರಸ್ತುತ ಹಿಂಜರಿತದ ಪ್ರಮುಖ ಅಪರಾಧಿಗಳಾದ ಜೆ ಪಿ ಮಾರ್ಗನ್ ಚೇಸ್, ಸಿಟಿಗ್ರೂಪ್, ಬ್ಯಾಂಕ್ ಆಫ್ ಅಮೆರಿಕ ಮತ್ತು ಗೋಲ್ಡ್ ಮನ್ ಸ್ಯಾಕ್ಸ್ ಇವರ ಪಾಲು ಸುಮಾರು 90%.

ಆಂತರಿಕ ಬೇಡಿಕೆ ಹೆಚ್ಚಿಸುವ ಮಧ್ಯಪ್ರವೇಶ ಬೇಕು

ಏನೇ ಆಗಲಿ, ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲೇಬೇಕು ಎಂಬ ಮಾರ್ಗದ ಎಗ್ಗಿಲ್ಲದ ಅನುಸರಣೆಯನ್ನು ಮುಂದಗೊಳಿಸ ಬಹುದಾದ ಒಂದು ಕಾರ್ಯಸಾಧ್ಯ ದಾರಿಯೆಂದರೆ ಕೀನ್ಸ್ ವಾದರೀಯಲ್ಲಿ ಪ್ರಭುತ್ವದ ಮಧ್ಯಪ್ರವೇಶ. ಈ ಕೀನ್ಸ್‌ವಾದ ಮತ್ತೆ-ಮತ್ತೆ ಅನಿವಾರ್ಯವಾಗಿಯೇ ಬಿಕ್ಕಟ್ಟುಗಳಿಗೆ ಒಳಗಾಗುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸ್ಥಿರತೆ ತರಲೆಂದು ರೂಪಿಸಿದ ಸಂರಚನಾ ಕ್ರಮವೇ ಹೊರತು ಜನತೆಗೆ ಪರಿಹಾರಗಳನ್ನು ಒದಗಿಸುವುದಕ್ಕೆಂದು ರೂಪಿಸಿದ್ದಲ್ಲ. ಆದರೆ ನವ-ಉದಾರವಾದಿ ವ್ಯವಸ್ಥೆಯಲ್ಲಿ ಪ್ರಭುತ್ವದ ಮಧ್ಯಪ್ರವೇಶ ಕಾರ್ಪೊರೇಟ್‌ಗಳ ರಕ್ಷಣೆಗೆಂದೇ ಬರುತ್ತದೆ, ಅದಕ್ಕೆ ಬೆಲೆ ಕೀಳುವುದು ಜನತೆಯಿಂದಲೇ; ಇದರಿಂದಾಗಿ ಆ ವ್ಯವಸ್ಥೆ ಮತ್ತಷ್ಟು ಅಸ್ಥಿರಗೊಳ್ಳುತ್ತದೆ.

ಭಾರತೀಯ ಸಂದರ್ಭದಲ್ಲಿ, ಈ ಹಿಂದೆ ನಾವು ಹಲವು ಬಾರಿ ಹೇಳಿರುವಂತೆ, ಸರಕಾರದ ಮಧ್ಯಪ್ರವೇಶ ನಮ್ಮ ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು, ಆಮೂಲಕ ಒಟ್ಟು ಆಂತರಿಕ ಬೇಡಿಕೆಯನ್ನು ವಿಸ್ತರಿಸುವಂತಿರಬೇಕು. ಆಗ ಮಾತ್ರವೇ ನಮ್ಮ ಆರ್ಥಿಕದ ಮೂಲಭೂತ ಅಂಶಗಳನ್ನು ಬಲಪಡಿಸಿ, ಅವುಗಳಲ್ಲಿ ಸ್ಥಿರತೆ ತರಲು ಸಾಧ್ಯ. ಇಂತಹ ಮಧ್ಯಪ್ರವೇಶ ಒಂದು ತಾಳಿಕೆಯ ಬೆಳವಣಿಗೆಯ ದಿಕ್ಕು ಹಿಡಿಯಲು ಕೂಡ ಅನುವು ಮಾಡಿಕೊಡುತ್ತದೆ.

ಆದರೆ ಹಿಂದಿನ ಎರಡು ಬಜೆಟ್ ದಸ್ತಾವೇಜುಗಳೇ ಪ್ರಕಟಗೊಳಿಸಿರುವಂತೆ, ಶ್ರೀಮಂತರಿಗೆ 5ಲಕ್ಷ ಕೋಟಿರೂ.ಗಳಿಗಿಂತಲೂ ಹೆಚ್ಚು ತೆರಿಗೆ ರಿಯಾಯ್ತಿಗಳನ್ನು ಒದಗಿಸಿ ಕೊಡಲಾಗಿದೆ. ಪ್ರಧಾನ ಮಂತ್ರಿಗಳು ಮತ್ತು ಅವರ ಸಲಹಾಗಾರರು ಈ ಪ್ರವೃತ್ತಿಯ ಮರುಪರಿಶೀಲನೆ ಮಾಡಿ ಅದನ್ನು ಬದಲಿಸುವ ಬಗ್ಗೆ ಯೋಚಿಸುವುದೊಳ್ಳೆಯದು. ಶ್ರೀಮಂತರಿಗೆ ಕೊಡಮಾಡಿದ್ದ ಈ ಬೃಹತ್ ಮೊತ್ತವನ್ನು ಸಾರ್ವಜನಿಕ ಕಾಮಗಾರಿ ಯೋಜನೆಗಳಲ್ಲಿ ತೊಡಗಿಸಿದ್ದರೆ, ಅದರಿಂದ ಬಹು ಅಗತ್ಯವಿರುವ ಮೂಲರಚನೆಗಳನ್ನು ಕಟ್ಟಿ ಬೆಳೆಸಬಹುದಾಗಿತ್ತು, ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಾಣ ಮಾಡಬಹುದಿತ್ತು, ಆಮೂಲಕ ಜನತೆಯ ಕೊಳ್ಳುವ ಶಕ್ತಿ ಅಪಾರವಾಗಿ ಹೆಚ್ಚುತ್ತಿತ್ತು.

ಈಗಲೂ ಅಂತಹ ಆಯ್ಕೆಗೆ ಅವಕಾಶವಿದೆ. ಬೃಹತ್ ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಜನತೆಯ ಒತ್ತಡಗಳನ್ನು ಹೆಚ್ಚಿಸಿ, ಯುಪಿಎ-2 ಸರಕಾರ ಈ ಆಯ್ಕೆಗೆ ಮುಂದಾಗುವಂತೆ ಮಾಡಬೇಕಾಗಿದೆ.

ಕಡಲು ತಡಿ

ಪುಟ 6 ರಿಂದ

ರಾತ್ರಿಯೂ ಧರಣಿ ಮುಂದುವರಿಸಿದರು. ಆ ರಾತ್ರಿ ಇಡೀ ಸುರಿದ ಭಾರೀ ಮಳೆಗೂ ಜಗ್ಗದೆ ಧರಣಿ ಮುಂದುವರಿಯಿತು.

ಮರುದಿನ ಗುತ್ತಿಗೆದಾರರು ಮತ್ತು ಬಿಎಸ್ಸೆಎನ್ನೆಲ್ ಆಡಳಿತ ವರ್ಗ ಧರಣಿ ನಿರತ ಸಂಘಟನೆಯ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಿ ಚರ್ಚಿಸಿತು. ಅಂತಿಮವಾಗಿ ಬೇಡಿಕೆ ಈಡೇರಿಸಲು ಗುತ್ತಿಗೆದಾರರು ಮತ್ತು ಆಡಳಿತ ವರ್ಗ ಒಪ್ಪಿಕೊಂಡ ಮೇರೆಗೆ ಅನಿರ್ದಿಷ್ಟಾವಧಿ ಮುಷ್ಕರ ಹಿಂತೆಗೆದುಕೊಳ್ಳಲಾಯಿತು. ಇದು ಸಿಐಟಿಯು ನೇತೃತ್ವದಲ್ಲಿ ನಡೆಸಿದ ಹೋರಾಟಕ್ಕೆ ಸಂದ ಜಯವಾಗಿದೆ. ಧರಣಿಯಲ್ಲಿ ಯೂನಿಯನ್ನಿನ ಉಪಾಧ್ಯಕ್ಷ ಮನೋಹರ ನಾರೆಂಬೋಲ್, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಭೀಮನಗುಳಿ, ಉದಯ್ ಕುಮಾರ್ ಅಂಚೇರಿ, ಶ್ರೀಧರ ಪುತ್ತೂರು, ರಾಜೇಶ್, ದಿನೇಶ್, ಗಿರಿಯಪ್ಪ, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಯೋಗೀಶ್ ಜಪ್ಪಿನಮೊಗರು ಮೊದಲಾದವರು ಭಾಗವಹಿಸಿದ್ದರು.

★

ನಿವೇಶನ ಹಕ್ಕುಪತ್ರಕ್ಕೆ ಆಗ್ರಹಿಸಿ ಕುಪ್ಪೆಪದವು ಗ್ರಾಮ ಪಂಚಾಯತ್‌ಗೆ ಮುತ್ತಿಗೆ

ನಿವೇಶನ ರಹಿತರಿಗೆ ನಿವೇಶನ ಮತ್ತು ಹಕ್ಕುಪತ್ರ ಹಾಗೂ ಸರಕಾರೀ ಜಮೀನಿನಲ್ಲಿ ವಾಸವಿದ್ದ



ಭೂಮಿಯ ಸಕ್ರಮೀಕರಣ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ನೇತೃತ್ವದಲ್ಲಿ ಅಕ್ಟೋಬರ್ 12 ರಂದು ಕುಪ್ಪೆಪದವು ಗ್ರಾಮ ಪಂಚಾಯತ್‌ಗೆ ಮುತ್ತಿಗೆ ಹಾಕಲಾಯಿತು.

ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಗುರುಪುರ ವಲಯ ಸಿಐಟಿಯು ಕಾರ್ಯದರ್ಶಿ ಸದಾಶಿವದಾಸ್ ಕೂಡಾ ಮಾತನಾಡಿದರು. ಭೂಮಿ ಹೋರಾಟ ಸಮಿತಿಯ ಅಧ್ಯಕ್ಷ ಲ್ಯಾನ್ಸಿ ರೊಜಾರಿಯೋ, ಕಾರ್ಯದರ್ಶಿ ವಸಂತಿ, ಎಸ್.ಎ.ಹಸನಬ್ಬ ಮೊದಲಾದವರು ಭಾಗವಹಿಸಿದ್ದರು.

★

ಅಕ್ರಮ ಗಣಿಗಾರಿಕೆ: ಲೋಕಾಯುಕ್ತ ವರದಿ ಜಾರಿಗೆ ಸಿಪಿಎಂ ಆಗ್ರಹ:

ರಾಜ್ಯದಲ್ಲಿ ನಡೆದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸಲ್ಲಿಸಿರುವ ವರದಿ ಜಾರಿಗೆ ತರಬೇಕು ಎಂದು ಒತ್ತಾಯಿಸಿ ಸಿಪಿಎಂ ವತಿಯಿಂದ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಅಕ್ಟೋಬರ್ 13 ರಂದು ಧರಣಿ ನಡೆಯಿತು.

ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿ, ರಾಜ್ಯದ ಬೊಕ್ಕಸಕ್ಕೆ 16 ಸಾವಿರ ಕೋಟಿ ರೂಪಾಯಿಗೂ ಅಧಿಕ ನಷ್ಟ ಉಂಟು ಮಾಡಿದ ಹಗರಣದ ಬಗ್ಗೆ ಲೋಕಾಯುಕ್ತರು ವಿಸ್ತೃತ ತನಿಖೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆದರೆ ಆ ವರದಿಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳದೆ, ಬಿಜೆಪಿ ಸರಕಾರ ಭ್ರಷ್ಟರನ್ನು ರಕ್ಷಿಸುವ ಕೆಲಸ ಮಾಡುತ್ತಿದೆ ಎಂದು ಅವರು ಟೀಕಿಸಿದರು.

ರಾಜ್ಯದ ಬೊಕ್ಕಸಕ್ಕೆ ಆಗಿರುವ ನಷ್ಟ ತುಂಬಿಸಿಕೊಳ್ಳಲು ಭ್ರಷ್ಟರೆಲ್ಲರ ಆಸ್ತಿ ಮುಟ್ಟುಗೋಲು ಹಾಕಬೇಕು, ಬ್ಯಾಂಕ್ ಖಾತೆ ಜಪ್ತಿ ಮಾಡಬೇಕು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಧರಣಿಯಲ್ಲಿ ಆಗ್ರಹಿಸಲಾಯಿತು. ಪಕ್ಷದ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ವಾಸು ಗಟ್ಟಿ, ಸಂಜೀವ ಬಂಗೇರ, ಸುಕುಮಾರ್, ಪದ್ಮಾವತಿ ಶೆಟ್ಟಿ, ಸದಾಶಿವ ದಾಸ್, ಸುನಿಲ್ ಕುಮಾರ್ ಬಜಾಲ್ ಮೊದಲಾದವರು ಉಪಸ್ಥಿತರಿದ್ದರು.

★

ಮಾರುತಿ ಸುಜುಕಿ ಕಾರ್ಮಿಕರ ಮೇಲಿನ ದೌರ್ಜನ್ಯ ವಿರೋಧಿಸಿ ಪ್ರತಿಭಟನೆ:

ಹರಿಯಾಣದ ಗುರುಗಾಂವಿನಲ್ಲಿರುವ ಮಾರುತಿ ಸುಜುಕಿ ಕಾರ್ಖಾನೆಯಲ್ಲಿನ ಗುತ್ತಿಗೆ ಕಾರ್ಮಿಕರನ್ನು ಏಕಾಏಕಿ ವಜಾ ಮಾಡಿದುದರ ವಿರುದ್ಧ, ಮತ್ತು ಆ ಬಳಿಕ ಕಾರ್ಮಿಕರು ಸಿಐಟಿಯು ಸಂಘಟನೆಯಡಿ ಕೈಗೊಳ್ಳುತ್ತಿರುವ ಮುಷ್ಕರವನ್ನು ಪೋಲೀಸ್ ದಮನದ ಮೂಲಕ ಇಲ್ಲವಾಗಿಸುವುದರ ವಿರುದ್ಧ, ಸಿಐಟಿಯು ಕಾರ್ಮಿಕ ಸಂಘಟನೆಯನ್ನು ರಾಜ್ಯ ಸರ್ಕಾರವು ಅಮಾನ್ಯಗೊಳಿಸಿರುವುದರ ವಿರುದ್ಧ ಸಿಐಟಿಯು ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಮಂಗಳೂರು ಕೇಂದ್ರದಲ್ಲಿರುವ ಮಾರುತಿ ಸುಜುಕಿ ಶೋ ರೂಂ ಎದುರಿಗೆ ಅಕ್ಟೋಬರ್ 17 ರಂದು ಪ್ರತಿಭಟನೆಯನ್ನು ಕೈಗೊಳ್ಳಲಾಯಿತು.

ಮಾರುತಿ ಸುಜುಕಿ ಆಡಳಿತ ವರ್ಗದ ನೀತಿಯನ್ನು ಪ್ರತಿಭಟಿಸಿ ರಾಷ್ಟ್ರಾದ್ಯಂತ ಮಾರುತಿ ಸಂಸ್ಥೆಯ ಕಚೇರಿಗಳ ಮುಂದೆ ಸಿಐಟಿಯು ಹಮ್ಮಿಕೊಂಡಿದ್ದ ಪ್ರತಿಭಟನೆಯ ಭಾಗವಾಗಿ ಮಂಗಳೂರಿನಲ್ಲೂ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮತ್ತು ಇನ್ನೊಬ್ಬ ಮುಖಂಡರಾದ ಸುಕುಮಾರ್ ಮಾತನಾಡಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ, ಭಾರತಿ ಬೋಳಾರ ಮತ್ತಿತರರು



ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕರಿಯಂಗಳ ಗ್ರಾಮ ಪಂಚಾಯತು ಮುಂದೆ ನಿವೇಶನ ರಹಿತರ ಪ್ರತಿಭಟನೆ

ಪ್ರಸಿದ್ಧ ಪೊಳಲಿ ದೇವಸ್ಥಾನವಿರುವ ಬಂಟ್ವಾಳ ತಾಲೂಕಿನ ಕರಿಯಂಗಳ ಗ್ರಾಮ ಪಂಚಾಯತಿನ ಎದುರುಗಡೆ ನಿವೇಶನ ರಹಿತರು ನಿವೇಶನ, ಹಕ್ಕುಪತ್ರ ಹಾಗೂ ಅಕ್ರಮ-ಸಕ್ರಮೀಕರಣ ಆಗ್ರಹಿಸಿ ಭೂಮಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ 14 ರಂದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಗೂ ಮೊದಲು ಬಡಕಬೈಲಿನಿಂದ ಮೆರವಣಿಗೆ ನಡೆಸಲಾಯ್ತು.

ಪ್ರತಿಭಟನಾಕಾರರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ತಾಲೂಕು ಸಮಿತಿ ಅಧ್ಯಕ್ಷ ರಾಮಣ್ಣ ವಿಟ್ಲ, ಕಾರ್ಯದರ್ಶಿ ಬಿ.ನಾರಾಯಣ ಮಾತನಾಡಿದರು. ಸ್ಥಳೀಯ ಹೋರಾಟ ಸಮಿತಿಯ ಸಂಚಾಲಕ ಮಾರಪ್ಪ ಬಡಕಬೈಲು, ತಾಲೂಕಿನ ಕಾರ್ಮಿಕ ಮುಖಂಡರಾದ ವಾಸು ಗಟ್ಟಿ, ಸಂಜೀವ ಬಂಗೇರ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

◎

ದೇವರೂ ದಣಿದಿರಬೇಕು!

ಸಂಧ್ಯಾವಂದನೆಯಲ್ಲಿ ಒಂದು ಮಂತ್ರವಿದೆ: 'ಯದಹ್ನಾತ್ ಕುರುತೇ ಪಾಪಂ...... ತದ್ರಾತ್ರಿಯಾತ್ ಪ್ರತಿಮುಚ್ಯತೇ'. ಸಂಸ್ಕೃತ ಪಂಡಿತರ ಪ್ರಕಾರ ಇದರ ಅರ್ಥ: 'ಹಗಲು ಮಾಡಿದ ಪಾಪವನ್ನು ಹಗಲೇ ತೊಳೆದುಬಿಡು, ರಾತ್ರಿ ಮಾಡಿದ ಪಾಪವನ್ನು ರಾತ್ರಿಯೇ ತೊಳೆದುಬಿಡು.' ನಾನು ಪಾಪ ಮಾಡ್ತಾನೇ ಇರುತ್ತೇನೆ, ನೀನು ತೊಳೀತಾನೇ ಇರು ಅಂತ ದೇವರಲ್ಲಿ ಮೊರೆ ಹೊಗುತ್ತಾನೆ. ಪಾಪ, ದೇವರಿಗೆ ಇವನು ಮಾಡಿದ ಪಾಪವನ್ನು ಹಗಲೂ ಇರುಳೂ ತೊಳೆಯುವುದೇ ಕೆಲಸ ! ಓ ದೇವರೇ ನಾನು ಪಾಪವನ್ನೇ ಮಾಡದೇ ಇರುವ ಹಾಗೆ ವರ ಕರುಣಿಸು ಅಂತ ಬೇಡಿಕೊಳ್ಳುವುದಿಲ್ಲ.

ನಮ್ಮ ಮಾಜಿ ಮುಖ್ಯಮಂತ್ರಿಗಳು ಹಾಗೂ ಮತ್ತೊಬ್ಬ ಮಾಜಿ ಮಂತ್ರಿಗಳು ದೇವರಲ್ಲಿ ಮೊರೆ ಇಡದ ದಿನಗಳೇ ಇಲ್ಲ. ಹೋಮ, ಹವನ, ಪೂಜೆ, ಪುನಸ್ಕಾರ ಅಂತ ದೇವರನ್ನು ಸಂಪ್ರೀತಗೊಳಿಸಲು ಮಾಮುಗಳು ಏನೇನೆಲ್ಲಾ ಮಾಡಿದರು. ದಿನ ಬೆಳಗಾದರೆ ಜೋತಿಷಿಗಳ ಹತ್ತಿರ ಹೋಗಿ ಭವಿಷ್ಯ ಕೇಳಿದ್ದೇ ಕೇಳಿದ್ದು. ಮಾಟ ಮಂತ್ರ ಮಾಡಿಸಿದ್ದೇ ಮಾಡಿಸಿದ್ದು. ಆದರೂ ಪಾಪ ಅವರಿಗೆ ಕೊನೆಗೂ ಶ್ರೀಕೃಷ್ಣ ಜನ್ಮಸ್ಥಾನವೇ ಗತಿಯಾಯಿತು. ಮತ್ತೊಬ್ಬರು ಗಂಗಾಜಲ ತರಿಸಿ ಎಲ್ಲರಿಗೂ ಹಂಚಿದರು. ತಿರುಪತಿ ಲಾಡು ತರಿಸಿ ವಿತರಣೆ ಮಾಡಿದರು. ಆ ಮೂಲಕ ಎಷ್ಟು ಪುಣ್ಯ ಗಳಿಸಿದರು ! ಅವರಿಗೂ ಪಾಪ ಕೊನೆಗೂ ಕಂಬಿ ಎಣಿಸೋದು ತಪ್ಪಲಿಲ್ಲಾ. ಯಾಕೆ ಹೀಗೆ?

ದೇವರಿಗೂ ಇವರ ಪಾಪಗಳನ್ನೆಲ್ಲಾ ತೊಳೆದೂ ತೊಳೆದೂ ಸುಸ್ತಾಗಿರಬೇಕು! ದೇವರಿಗೂ ಒಂದು ಮಿತಿ ಇದೆಯಲ್ವ? ಮೈತುಂಬಾ ಪಾಪ ಮೆತ್ತಿಕೊಂಡು ಬಂದು ತೊಳಿ ತೊಳಿ ಅಂತಾ ಹೇಳಿದರೆ ಎಷ್ಟು ತೊಳಿಯೋಕೆ ಸಾಧ್ಯ ಹೇಳಿ?

– ತಡಗಳಲೆ ಸುರೇಂದ್ರ
ಬೆಂಗಳೂರು.

ಜನಾರ್ಧನ ರೆಡ್ಡಿ, ಯಡಿಯೂರಪ್ಪ ಸಾಲಿನಲ್ಲಿ ನಿರಾಣಿ, ಅಶೋಕ್.... ಯೋಗಿಶ್ವರ

ಹಗರಣಗಳ ಸಾಲೇ ನಿನ್ನಯ ಕೊರಳಿನ ಮಾಲೆ ಅಂತ ರಾಜ್ಯ ಬಿಜೆಪಿ ಸರ್ಕಾರದ ಶಾಧನೆಗಳ ಬಗೆಗೆ ಪತ್ರಿಕೆಯಲ್ಲಿ ಸಾಕಷ್ಟು ಹಿಂದೆಯೇ ಒಂದು ಲೇಖನ ಮಾಲೆಯೇ ಪ್ರಕಟವಾಗಿತ್ತು. ಆಗ ಹಗರಣಗಳು ಸಾಲು ಸಾಲಾಗಿ ಹೊರ ಬೀಳುತ್ತಿದ್ದವು. ಈಗ ಆ ಹಗರಣಗಳ ಫಲವಾಗಿ ದಕ್ಷಿಣ ಭಾರತದ ಪ್ರಪ್ರಥಮ ಬಿಜೆಪಿ ಸರ್ಕಾರದ ಚುಕ್ಕಾಣಿ ಹಿಡಿದವರು, ಅದನ್ನು ಅಧಿಕಾರಕ್ಕೆ ತಂದ ಅತಿರಥ ಮಹಾರಥರು, ಕೊರತೆ ಬಿದ್ದ ಬಹುಮತವನ್ನು ತುಂಬಿ ಕೊಟ್ಟ ದಿಗ್ಗಜರು ಎಲ್ಲರೂ ಸಾಲು ಸಾಲಾಗಿ ಶ್ರೀಕೃಷ್ಣ ಜನ್ಮ ಸ್ಥಾನಕ್ಕೆ ಅರ್ಥಾತ್ ಕಾರಾಗೃಹ ವಾಸಕ್ಕೆ ತೆರಳುತ್ತಿದ್ದಾರೆ. ಈ ಸಾಲಿನಲ್ಲಿ ಇನ್ನಷ್ಟು ಜನ ನಿಂತು ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ. ವಿದ್ಯುತ್ ಕಡಿತ, ಬೆಲೆ ಏರಿಕೆಯ ಕಡಿತ, ಬರದ ಬಾಧೆಗಳ ನಡುವೆಯೂ ಜನ ಭಾರತೀಯ ಜನತಾ ಪಕ್ಷ–ಬಿಜೆಪಿಯ ಮುಖಂಡರ ಅವಸ್ಥೆಗಳನ್ನು ಕಂಡು ಪರಮಾನಂದ ಹೊಂದು ವಂತಹ ಪರಿಸ್ಥಿತಿ ಬಂದಿದೆ ಎಂದರೆ ಅದು ಜನ ಸಾಮಾನ್ಯರ ವಿಷಾದನೀಯವಾದ ದೌರ್ಭಾಗ್ಯದ ಸ್ಥಿತಿ.

★

ಬಿಜೆಪಿ ಸರ್ಕಾರದ ಕಾರ್ಯ ವೈಖರಿಗೆ ಬಿಜೆಪಿ ಸರ್ಕಾರವೇ ಸಾಟಿ

ಬಿಜೆಪಿ ಸರ್ಕಾರದ ಹಗರಣ ಗಣಗಳು, ರಾಶಿಗಳ ಬಗೆಗೆ ಹೇಳುವಾಗ ಹೋಲಿಕೆಗೆ ಬೇರೇನನ್ನೂ ಕೊಡುವುದು ಕಷ್ಟ. ಕೇಂದ್ರದಲ್ಲಿ ಯುಪಿಎ ಸರ್ಕಾರ ಎಂಬುದೊಂದು ಇದೆಯಾದರೂ ಅದರ ಸಾಧನೆಗಳ ಸ್ವರೂಪ ಭಿನ್ನವಾಗಿದೆ. ಇರಲಿ.

ಭದ್ರ ಮೇಲ್ದಂಡೆಯಲ್ಲಿ ಉಂಡದ್ದು ಎಷ್ಟು?

ಭದ್ರ ಮೇಲ್ದಂಡೆ ಗುತ್ತಿಗೆ ಹಗರಣದ ಭೂತವು ಯಡಿಯೂರಪ್ಪನವರ ಬೆನ್ನು ಹತ್ತಿದೆ ಎಂಬುದು ನಮಗೆಲ್ಲಾ ಗೊತ್ತಿದೆ. 5 ಕೋಟಿ ರೂಪಾಯಿಗಳ ಮೊತ್ತವನ್ನು ಮೀರುವ ಯಾವುದೇ ಕಾಮಗಾರಿ, ಯೋಜನೆ ಸಚಿವ ಸಂಪುಟದ ಒಪ್ಪಗೆ ಏಕೆಂಬುದು ನಿಯಮ. ಆದರೆ 1,130,00 ಕೋಟಿ ರೂಪಾಯಿ ಮೊತ್ತದ ಯೋಜನೆಗೆ ಅನುಮತಿ ನೀಡುವಾಗ ಸಚಿವ ಸಂಪುಟದಲ್ಲಿ ಚರ್ಚಿಸದೇ ಅನುಮತಿ ನೀಡಲಾಗಿದೆ ಎಂದರೆ ಸರ್ಕಾರದ ಆಡಳಿತ ಯಾವ ಪರಿ ನಡೆಯುತ್ತಿದೆ ಎಂದು ನೋಡಿ. ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವ, ಜಲ ಸಂಪನ್ಮೂಲ ಸಚಿವರು ಉಪಾಧ್ಯಕ್ಷರಾಗಿರುವ ಬೃಹತ್ ನೀರಾವರಿ ನಿಗಮವು ಈ ಯೋಜನೆ ಅನುಮತಿ ನೀಡಿದೆ. ಇಲ್ಲಿ ಮತ್ತೆ ಕೆಲವು ಮುಖ್ಯವಾದ ಸಂಗತಿಗಳನ್ನು ಗಮನಿಸಿ. ಯೋಜನೆಯ ಎರಡನೇ ಹಂತದ ಈ ಕಾಮಗಾರಿಯ ಪ್ರಶ್ನೆಯಲ್ಲಿ ತಾಂತ್ರಿಕ ಸಲಹಾ ಸಮಿತಿ ಅನುಮತಿ ನೀಡಲು ನಿರಾಕರಿಸಿ ಈ ಕುರಿತು ತೀಮಾನ ಕೈಗೊಳ್ಳಲು ತಜ್ಞರ ಸಮಿತಿ ರಚಿಸಲು ಶಿಫಾರಸ್ಸು ಮಾಡಿತ್ತು.

ಆದರೆ ಈ ಎಲ್ಲವನ್ನು ಮೀರಿ ಅನುಮಿತಿ ನೀಡಲಾಗಿದೆ. ಕೇವಲ 550 ಕೋಟಿ ರೂಫಾಯಿಗಳಿದ್ದ ಈ ಕಾಮಗಾರಿಯ ಅಂದಾಜು ವೆಚ್ಚವನ್ನು ದಿಡೀರನೆ 1,130 ಕೋಟಿ ರೂಪಾಯಿಗಳಿಗೆ ಏರಿಸಿ ಹೆಚ್ಚಿನ ಚರ್ಚೆಗೆ ಅವಕಾಶವೇ ಇಲ್ಲದಂತೆ ಮುಗುಂ ಆಗಿ ವ್ಯವಹಾರವನ್ನು ಡೀಲ್ ಮಾಡಲಾಗಿದೆ.

ಯೋಜನೆಯ ಗುತ್ತಿಗೆ ಪಡೆದ ಆರ್.ಎನ್.ಎಸ್. ಜ್ಯೋತಿ ಜಾಯಿಂಟ್ ವೆಂಚರ್ ಕಂಪನಿಯಿಂದ ಯಡಿಯೂರಪ್ಪ ಮತ್ತು ಅವರ ಮಕ್ಕಳು ಏನೇನೆಲ್ಲಾ ಕೊಡುಗೆಗಳನ್ನು ಗಳಿಸಿ ಕೊಂಡಿದ್ದಾರೆ... ಏನೇನೆಲ್ಲಾ ಪಡೆದು ಕೊಂಡಿದ್ದಾರೆಂಬ ಬಗೆಗೆ ಈಗ ಮೊಕದ್ದಮೆ



ದಾಖಲಾಗಿ ವಿಚಾರಣೆ ನಡೆಯುತ್ತಿದೆ.

★

ದಾಖಲೆ ಸೃಷ್ಟಿ ಶೂರರು ಡಿನೋಟಿಫೈ ದಂಧೆಕೋರರೂ

ಇಲ್ಲಿ ಬಿಜೆಪಿ ಸರ್ಕಾರದ ಆಡಳಿತ ಮತ್ತೊಂದು ಮಾದರಿಯನ್ನು ನೋಡಿ. ಕಳೆದ ವರ್ಷ ಬೆಂಗಳೂರಿನಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ(ಜಿಮ್) ನಡೆದು ರಾಜ್ಯದ ಅಭಿವೃದ್ಧಿಯ ಬಗೆಗೆ ಬಿಜೆಪಿ ಸರ್ಕಾರ ಬಾರಿ ಬೊಬ್ಬೆ ಹೊಡೆದದ್ದು ಜನ ಮರೆತಿಲ್ಲ.

ಈಗ ಕರ್ನಾಟಕ ರಾಜ್ಯದ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ. ಯಡಿಯೂರಪ್ಪನವರ ಸರ್ಕಾರದಲ್ಲೂ ಅವರೇ ಇದ್ದದ್ದು. ಅವರ ಮೇಲೆ ಲೋಕಾಯುಕ್ತದಲ್ಲಿ ದೂರೊಂದು ದಾಖಲಾಗಿದೆ. ಉದ್ಯಮಿ ಆಲಂ ಪಾಷ ಎಂಬುವವರು ದೂರು ಕೊಟ್ಟವರು.

ಈ ದೂರಿನ ವಿವರಗಳನ್ನು ಕೇಳಿ ಗಾಬರಿ ಬೀಳಬೇಡಿ. ಹೀಗೂ ಉಂಟೆ ಎನ್ನ ಬೇಡಿ. ಇಲ್ಲಿ ಎಲ್ಲವೂ ಸಾಧ್ಯ. ಏಕೆಂದರೆ ಇದು ದಕ್ಷಿಣ ಭಾರತದ ಪ್ರಪ್ರಥಮ ಏಕೈಕ ಬಿಜೆಪಿ ಸರ್ಕಾರದ ದರ್ಬಾರ್.

'ಜಿಮ್' ಸಮಾವೇಶದ ಹೆಸರಿನಲ್ಲಿ ವಿಶೇಷ ಆರ್ಥಿಕ ವಲಯಕ್ಕೆಂದು ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 6,000 ಎಕರೆ ಜಮೀನನ್ನು ಸರ್ಕಾರ ವಶಕ್ಕೆ ತೆಗೆದುಕೊಂಡಿದೆ. ಈ ಜಾಗದಲ್ಲಿ ಪಾಷ ಅವರ 'ಪಾಷ್ ಸ್ಪೇಸ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್' ಗೆ 26 ಎಕರೆ ಜಮೀನು ಕೊಡಲು ಸರ್ಕಾರ ಒಪ್ಪಿಗೆ ನೀಡಿತ್ತಂತೆ(2010 ಜೂನ್ 19 ಯಡಿಯೂರಪ್ಪನವರ ನೇತೃತ್ವದ ಉನ್ನತ ಮಟ್ಟದ ಸಮಿತಿ). ಅದರಂತೆ ಸಂಸ್ಥೆ ಅಲ್ಲಿ 600 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮನೆಗಳ ನಿರ್ಮಾಣ ಮಾಡಲು ಯೋಜಿಸಿತ್ತಂತೆ.


ಈ ನಡುವೆ ಇನ್ನೇನು ಜಮಿನು ಸಿಗುತ್ತದೆ ಎಂಬ ಹಂತದಲ್ಲಿ ಅಂದರೆ 2011 ಜನವರಿ 24 ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಸಂಸ್ಥೆಯೊಂದಿಗಿನ ಒಪ್ಪಂದವನ್ನು ಸರ್ಕಾರ ರದ್ದು ಮಾಡಿದ ಸುದ್ದಿ ಆಲಂ ಪಾಷ ಅವರಿಗೆ ಸಿಕ್ಕಿದೆ.

ಮಾಹಿತಿ ಹಕ್ಕು ಬಳಸಿ ಈ ವಿಚಾರದಲ್ಲಿ ಏನು ನಡೆದಿದೆ ಎಂದು ಕೇಳಿದಾಗ ಸಿಕ್ಕಿತು ದಾಖಲೆ. ಪಾಷ್ ಸಂಸ್ಥೆಯು ತನಗೆ ಈ ಯೋಜನೆ ಮುಂದುವರಿಸಲು ಆಸಕ್ತಿ ಇಲ್ಲ ಎಂದು ಸರ್ಕಾರಕ್ಕೆ ಪತ್ರವನ್ನು ಕೊಟ್ಟ ದಾಖಲೆ ಅಲ್ಲಿದೆ. ಸಂಸ್ಥೆ ಅಂತಹ ಪತ್ರ ಕೊಟ್ಟಿಲ್ಲ. ಅದು ನಕಲಿ ದಾಖಲೆ. ಭೂಮಿ ಲಪಟಾಯಿಸುವ ಉದ್ದೇಶದಿಂದ ಸಚಿವ ನಿರಾಣಿಯವರೇ ಈ ದಾಖಲೆ ಸೃಷ್ಟಿಸಿ ಯೋಜನೆ ರದ್ದು ಮಾಡಿದ್ದಾರೆ ಎಂದು ಆಲಂ ಪಾಷ ಲೋಕಾಯುಕ್ತಕ್ಕೆ ದೂರಿದ್ದಾರೆ. ಇದು ಮಾತ್ರವಲ್ಲ ಸರಿಯಾದ ತನಿಖೆ ನಡೆದರೆ ಇಂತಹ ಎಷ್ಟೋ ಪ್ರಕರಣಗಳು ಹೊರ ಬೀಳಲಿವೆ ಅನ್ನುತ್ತಾರೆ ಷಾಷ. ಇಲ್ಲ ಎನ್ನಲು ನಿಮಗೆ ಮನಸ್ಸು, ವಿಶ್ವಾಸ ಇದೆಯೇ. ಇದ್ದರೆ ಹೇಳಿ ಬಿಜೆಪಿ ಸರ್ಕಾರದ ಮತ್ತೊಬ್ಬ ಸಚಿವರು ಪರಪ್ಪನ ಅಗ್ರಹಾರಕ್ಕೆ ಹೋಗುವುದನ್ನು ತಪ್ಪಿಸಲು ನೆರವಾಗುತ್ತದೆ.

★

ಆಸತ್ರೆಯಾದರೇನು ಶಿವ ಜೈಲಾದರೇನು ಶಿವ...

ಆಹಾ !! ಜಮೀನು ಡೀ ನೋಟಿಫೈ ಹಗರಣದ ಪ್ರಕರಣದ ವಿಚಾರಣೆ... ನ್ಯಾಯಾಲಯದಿಂದ ಖುದ್ದು ಹಾಜರಿರುವಂತೆ. ಆದೇಶ. ಆದರೂ ಯಡಿಯೂರಪ್ಪ ಗೈರು ಹಾಜರು... ನ್ಯಾಯಾಲಯದಿಂದ ಜಾಮೀನು ಅರ್ಜಿ ತಿರಸ್ಕಾರ...ಕೋರ್ಟ್‌ನಲ್ಲಿ ಹಾಜರಿದ್ದ ಬಿಜೆಪಿ ಸರ್ಕಾರದ ಮಾಜಿ ಸಚಿವ (ತಿರುಪತಿ ಲಡ್ಡು, ಗಂಗಾಜಲ ಹಂಚಿಕೆ ಖ್ಯಾತಿಯ) ಕೃಷ್ಣಯ್ಯ ಶೆಟ್ಟಿ ಬಂಧನ.. "ಪ್ರಜ್ಞೆ ತಪ್ಪಿ" ಕೋರ್ಟಿನಲ್ಲೇ ಕುಸಿದು ಬಿದ್ದರೂ ಕ್ಯಾಮರಾಗಳಿಗೆ ಮುಖ ಕಾಣದಂತೆ ಕೈ ಮರೆ ಮಾಡಿಕೊಂಡ ಕೃಷ್ಣಯ್ಯ ಶೆಟ್ಟರ ಜಾಣ್ಮೆ.



ಆರ್.ರಾಮಕೃ...

ಬಿಜೆಪಿ ದರ್ಬಾರ್

ತಮ್ಮ ನಿವಾಸಗಳಿಂದ ಯಡಿಯೂರಪ್ಪ ನಾಪತ್ತೆ... ಲೋಕಾಯುಕ್ತ ಪೋಲಿಸರ ... ಕೊನೆಗೆ "ಶುಭ ಲಗ್ನ"ದಲ್ಲಿ ಯಡಿಯೂರ... ಕೋರ್ಟ್‌ಗೆ ಶರಣು... ಪರಪ್ಪನ ಅಗ್ರಹಾರ... ವಿಧಿಯಲ್ಲದ ಪಯಣ... ಎದೆ ನೋವು ಇನ್ನಿಲ್ಲದ ಹತ್ತಾರು ಖಾಯಿಲೆ... ಜೈಲಿನ ಆಸ್ಪತ್ರೆ ದಾಖಲು... ನಿದ್ರೆ ಇಲ್ಲದ ಕರಾಳ ರಾತ್ರಿ ನಡುರಾತ್ರಿ... ವಾಂತಿ, ವಾಂತಿ... ನಗರ... ಜಯದೇವ ಆಸ್ಪತ್ರೆ ಪಯಣ... ರಾಜ್ಯದ ಫ... ಮುಖ್ಯಮಂತ್ರಿಗಳು... ಸಚಿವರು, ಶಾಸಕರ... ಶತಾಯುಷಿ ಮಠಾದೀಶರಿಂದ, ಬಿಜೆ... ನೇತಾಗಳಿಂದ ಎದೆನೋವಿಗೆ ಚಿಕಿತ್ಸೆ... ಕ್ಷಮಿಸಿ... ಎದೆನೋವಿನ ಬಗೆಗೆ ಸಾಂತ್ವಾನ... ಎದೆನೋ... ಹೃದಯ ಬೇನೆ ಎಲ್ಲಾ ನಾಪತ್ತೆಯಾಗಿರು... ಬಗೆಗೆ ಜಯದೇವ ವೈದ್ಯರ ಪ್ರಮಾಣ ಪತ್ರ... ಜಯದೇವದಿಂಧ ಸಕ್ಕರೆ ಖಾಯಿಲೆ ಮತ್ತಿತ... ಹತ್ತಾರು ಖಾಯಿಲೆಗೆ ಚಿಕಿತ್ಸೆಗಾಗಿ ವಿಕ್ಟೋರಿಯ... ಕಡಗೆ ಪಯಣ... ಆಹಾ !!! ಹಸಿರು ಬೆ... ಶೀಟಿನ ತೆರೆಯ ಮರೆಯಲ್ಲಿ ಪಲ್ಲಕ್ಕಿಯ... ಪರಮಾತ್ಮನ ಆಸ್ಪತ್ರೆ ಪ್ರವೇಶ... ಮರುದಿ... ಪತ್ರಿಕೆಗಳಲ್ಲಿನ ಕುತ್ಸಿತ ಅಪಪ್ರಚಾರದಿಂದ ನೊಂ... ದೊರೆಯಿಂದ ಚಿಕಿತ್ಸೆ ನಿರಾಕರಣೆ... ದೂರ್ವಾ... ಮುನಿಗಳಿಂದ ಕಾರಾಗೃಹ ವಾಸಕ್ಕೆ ಮರು... ಪ್ರವೇಶ....

ಅಬ್ಬಬ್ಬ !!! ಏನೇನೆಲ್ಲಾ ರೋಚಕ–ರಸಮ... ಘಟನಾವಳಿ, ದೃಶ್ಯಾವಳಿಗಳ ರಸದೌತಣ... ಓಟು ಕೊಟ್ಟು... ಮೂರು ವರ್ಷ ಅಧಿಕಾ... ಮಾಡಲು ಬಿಟ್ಟ ಜನ ಕೋಟಿಗೆ ಎಂತ... ಯಥೋಚಿತ ಕೊಡುಗೆ. ಕರ್ನಾಟಕ... ಪ್ರಜಾಕೋಟಿಯೇ ಧನ್ಯ. ಧನ್ಯ.

ಬಾಲಂಗೋಚಿ

ಪರಪ್ಪನ ಅಗ್ರಹಾರ ಜೈಲು ವಿಸ್ತರಣೆ?

ಪತ್ರಿಕೆ ಮುದ್ರಣಕ್ಕೆ ಸಿದ್ದಗೊಳ್ಳುವ ಹಂತದಲ್ಲಿ ಬಂದ... ಸುದ್ದಿ ಇದು. ಇದೇ ಬಿಜೆಪಿ ಸರ್ಕಾರದ ಸಚಿವ... ಮಹಾನುಭಾವರಿಗೆ ಅತ್ಯಂತ ಅಪ್ಯಾಯಮಾನವೂ... ಪ್ರಿಯವೂ ಆದ ಭೂಮಿ ಡೀನೋಟಿಫಿಕೇಷನ್ ಘನಕಾರ್ಯದ ಸಂಬಂಧವಾಗಿ ಖಾಸಗಿ ದೂರೊಂದರ ಸಂಬಂಧ ಗೃಹ ಸಚಿವ ಆರ್.ಅಶೋಕ್ ಅವರ ವಿರುದ್ಧ... ಲೋಕಾಯುಕ್ತದಲ್ಲಿ ದೂರು ದಾಖಲಾಗಿದ್ದು, ಲೋಕಾಯುಕ್ತ ಸಂಸ್ಥೆ ತನಿಖೆಗೆ ಆದೇಶಿಸಿದೆ. ಪುಟದಲ್ಲಿ ಜಾಗವಿಲ್ಲದ್ದರಿಂದ ಈ ವಾರ ನಮ್ಮನ್ನು ಕ್ಷಮಿಸಿ, ಮುಂದಿನವಾರ ಇನ್ನಷ್ಟು ಹಗರಣಗಳ ವಿವರಗಳನ್ನು ಇಲ್ಲಿ ನಿರೀಕ್ಷಿಸಿ...

ಪೀಪಲ್ಸ್ ಡೆಮಾಕ್ರಸಿ

ನೆರೆ ಹೊರೆ

ಕೇರಳದಲ್ಲಿ ಮತ್ತೆ ಹರಿಯಿತು ನೆತ್ತರು

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದದ್ದೇ ತಡ, ತನ್ನ ಜನವಿರೋಧಿ ನೀತಿಗಳ ಜಾರಿಗೆ ಅದು ಮುಂದಾಗಿದೆ. ಶಿಕ್ಷಣದ ವ್ಯಾಪಾರೀಕರಣ ಇದರಲ್ಲಿ ಪ್ರಮುಖವಾದದ್ದು. ಖಾಸಗಿ ವೃತ್ತಿಪರ ಕಾಲೇಜುಗಳಿಗೆ ಇದ್ದ ನಿಯಮಗಳನ್ನು ಸಡಿಲಿಸಿದ ಉಮ್ಮನ್ ಚಾಂಡಿ ಸರ್ಕಾರ ಶಿಕ್ಷಣವನ್ನೂ ವ್ಯಾಪಾರವನ್ನಾಗಿ ಮಾಡಿತು. ಇದರ ವಿರುದ್ಧ ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿ ಸಮುದಾಯ ಕೇರಳದಾದ್ಯಂತ ಬೃಹತ್ ಚಳವಳಿಯನ್ನು ಸಂಘಟಿಸಿತು.

ಕೇರಳದ ಕಲ್ಲಿಕೋಟೆಯಲ್ಲಿ ಪ್ರತಿಭಟನಾ ನಿರತರ ಮೇಲೆ ಮತ್ತೆ ಪೊಲೀಸರ ಲಾಠಿಗಳ ನರ್ತನ ನಡೆದಿದೆ. ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ವಿದ್ಯಾರ್ಥಿ ಸಮುದಾಯ ಪ್ರತಿಭಟನೆ ನಡೆಸುತ್ತಿದ್ದಾಗ ಈ ಬರ್ಬರ ಕೃತ್ಯ ನಡೆದಿದೆ. ಘಟನೆಯಲ್ಲಿ 11ಕ್ಕೂ ಹೆಚ್ಚು ವಿದ್ಯಾರ್ಥಿ ಮುಖಂಡರು ತೀವ್ರವಾಗಿ ಗಾಯಗೊಂಡಿದ್ದಾರೆ. ಘಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಬಿಜು ಅವರಿಗೂ ಗಂಭೀರ ಗಾಯಗಳಾಗಿವೆ.

ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿ ಸಮುದಾಯದ ಮೇಲೆ ಪೊಲೀಸರು ಅಶ್ರುವಾಯು ಪ್ರಯೋಗಿಸಿದ್ದು, ಗುಂಡು ಹಾರಾಟಕ್ಕೂ ಮುಂದಾಗಿದ್ದಾರೆ. ನಗರದ ಸಹಾಯಕ ಪೊಲೀಸ್ ಕಮಿಷನರ್ ಗೋವಿಂದ ಪಿಳ್ಳೆ ಕುಮ್ಮಕ್ಕಿನಿಂದಲೇ ಗುಂಡು ಹಾರಾಟ ನಡೆದಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಸಾಬೀತಾಗಿದೆ.

ಘಟನೆಯ ಬಗ್ಗೆ ವ್ಯಾಪಕ ಜನಾಕ್ರೋಶ ಕೂಡ ವ್ಯಕ್ತವಾಗಿದೆ. ತಕ್ಷಣ ತಪ್ಪಿತಸ್ಥ ಅಧಿಕಾರಿಯನ್ನು ವಜಾಗೊಳಿಸಬೇಕೆಂದು ಎಡಪಕ್ಷಗಳ ನಾಯಕರು ಆಗ್ರಹಿಸಿದ್ದಾರೆ. ಆಸ್ಪತ್ರೆಗೆ ದಾವಿಸಿದ ಸಿಪಿಎಂ



ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಘಟನೆ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಪೊಲೀಸರ ಮೇಲೆ ಕ್ರಮ ಕೈಗೊಳ್ಳದ ಸರ್ಕಾರದ ಜನವಿರೋಧಿ ನಿಲುವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಪ್ರಜಾಸತ್ತಾತ್ಮಕ ಚಳವಳಿ ಮೇಲೆ ಉಮ್ಮನ್ ಚಾಂಡಿ ಸರ್ಕಾರದ ಪ್ರಹಾರ ಇದೇ ಮೊದಲಲ್ಲ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಂದಿನಿಂದಲೇ ಇದರ ಪ್ರವರ ಆರಂಭವಾಗಿದೆ.

ಇದಕ್ಕೂ ಕೆಲ ತಿಂಗಳ ಹಿಂದೆ, ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ನಡೆದ ಹೋರಾಟವೂ ಪೊಲೀಸರ ಕೃತ್ಯದಿಂದ ಹಿಂಸಾತ್ಮಕವಾಯಿತು.

ಸರ್ಕಾರ ವಿದ್ಯಾರ್ಥಿಗಳ ಅಹವಾಲು ಆಲಿಸುವ ಬದಲು ಚಳವಳಿಯನ್ನು ದಮನಿಸಲು ಮುಂದಾಯಿತು. ವಿಧಾನಸಭೆಯ ಮುಂದೆ ನಡೆದ ಶಾಂತಿಯುತ ಪ್ರತಿಭಟನೆಗೆ ಸರ್ಕಾರ ಪೊಲೀಸರ ಲಾಠಿಯ ಮೂಲಕ ಉತ್ತರಿಸಿತು. ಘಟನೆಯಲ್ಲಿ ಎಸ್‌ಎಫ್‌ಐನ ಪ್ರಮುಖ ನಾಯಕರು ಸೇರಿದಂತೆ 50 ವಿದ್ಯಾರ್ಥಿಗಳ ದೇಹದಲ್ಲಿ ರಕ್ತದ ಹೊಳೆ ಹರಿಯಿತು. ರಾಜ್ಯಾಧ್ಯಕ್ಷ ಕೆ.ವಿ. ಸುಮೇಶ್, ರಾಜ್ಯ ಜೊತೆ ಕಾರ್ಯದರ್ಶಿ ಎ.ಎ. ರಹೀಂ, ಶಾಸಕ ಆರ್.ರಾಜೇಶ್ ಹಾಗೂ ವಿದ್ಯಾರ್ಥಿ ಮುಖಂಡ ಬಾಲಮುರಳಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದರು.

ಘಟನೆ ವಿಧಾನಸಭೆಯಲ್ಲೂ ಪ್ರತಿಧ್ವನಿಸಿತು. ಪ್ರತಿಪಕ್ಷ ಉಪನಾಯಕ ಕೊಡಿಯೇರಿ ಬಾಲಕೃಷ್ಣನ್ ನೇತೃತ್ವದಲ್ಲಿ ವಿಷಯ ಪ್ರಸ್ತಾಪವಾಯಿತು. ಆದರೆ, ಮುಖ್ಯಮಂತ್ರಿ ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡರು. ಆಕ್ರೋಶಗೊಂಡ ಸದಸ್ಯರು ರಕ್ತಸಿಕ್ತ ಶರ್ಟ್‌ಗಳನ್ನು ಪ್ರದರ್ಶಿಸಿದರು. ಶಾಸಕ ರಾಜೇಶ್ ತನ್ನ ಗಾಯಗೊಂಡ ತೋಳನ್ನು ತೋರಿಸಿದರು.

ವಿದ್ಯಾರ್ಥಿ–ಯುವಜನ ಸಂಘಟನೆಗಳು ರಾಜ್ಯವ್ಯಾಪಿ ಜನಾಂದೋಲನ ನಡೆಸಿ ಸರ್ಕಾರದ ಬರ್ಬರ ಕೃತ್ಯವನ್ನು ಖಂಡಿಸಿದರು. ಹೋರಾಟಗಳ ಪ್ರವರ ಕಂಡು ರಾಜ್ಯ ಸರ್ಕಾರ ತತ್ತರಿಸಿ ಹೋಗಿರುವುದಂತೂ ನಿಜ.

□

ತಮಿಳುನಾಡಿನಲ್ಲೂ ಪೊಲೀಸರ ಪ್ರಹಾರ

ಸರ್ಕಾರಿ ಆಸ್ಪತ್ರೆ ವಿಚಾರದಲ್ಲಿ ಸಾಮಾಜಿಕ ಕಳಕಳಿಯ ಹೋರಾಟ ಕೈಗೆತ್ತಿಕೊಂಡಿದ್ದ ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಪೊಲೀಸರು ಬರ್ಬರವಾಗಿ ಹಲ್ಲೆ ನಡೆಸಿದ್ದಾರೆ. ಇದು ನಡೆದದ್ದು ತಮಿಳುನಾಡಿನ ಸೇಲಂ ಜಿಲ್ಲೆಯಲ್ಲಿ. ಸ್ಥಳೀಯ ಜನರಿಗೆ ಉಪಯುಕ್ತವಾದ ಆಸ್ಪತ್ರೆಗೆ ಬಿಡುಗಡೆಯಾದ ಕೇಂದ್ರ ಸರ್ಕಾರದ ನಿಧಿಯನ್ನು ಬಳಸಿಕೊಂಡಿಲ್ಲ ಎಂದು ಆರೋಪಿಸಿ ಯುವಜನರು ಬೀದಿಗೆ ಇಳಿದಿದ್ದರು. 140 ಕೋಟಿ ರೂಪಾಯಿ ವೆಚ್ಚದಲ್ಲಿ ಏಮ್ಸ್ ಮಾದರಿಯಲ್ಲಿ ಆಸ್ಪತ್ರೆಯನ್ನು ಕಟ್ಟಬೇಕಾಗಿತ್ತು. ಈ ಬಗ್ಗೆ ಜಿಲ್ಲಾಡಳಿತಕ್ಕೆ ಮನವಿ ಅರ್ಪಿಸಲು ಮುಂದಾದಾಗ ಪೊಲೀಸರು ಅನುಮತಿ ನಿರಾಕರಿಸಿದರು. ಇದನ್ನು ಪ್ರತಿಭಟಿಸಿ ರ‍್ಯಾಲಿ ನಡೆಸಲು ನಿರ್ಧರಿಸಿದಾಗ ಪೊಲೀಸರು ಅದನ್ನೂ ತಡೆದರು. ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದರು. ಪ್ರತಿಭಟನೆಯನ್ನು ಮುಂದುವರಿಸಲು ಡಿವೈಎಫ್‌ಐ ನಾಯಕರು ನಿರ್ಧರಿಸಿದಾಗ ಪೊಲೀಸರು ಲಾಠಿ ಪ್ರಹಾರ ನಡೆಸಿ ಹಿಂಸಾತ್ಮಕ ಘಟನೆಗಳಿಗೆ ಕಾರಣರಾದರು.

ಘಟನೆಯನ್ನು ಖಂಡಿಸಿ ರಾಜ್ಯವ್ಯಾಪಿ ಹೋರಾಟವನ್ನೂ ಯುವಜನರು ಯಶಸ್ವಿಯಾಗಿ ನಡೆಸಿದ್ದಾರೆ. ಇದೇ ವೇಳೆ, ಸೇಲಂ ಜಿಲ್ಲಾ ಸಿಪಿಎಂ ಘಟಕ ಲಾಠಿ ಪ್ರಹಾರ ಖಂಡಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆಯನ್ನೂ ನಡೆಸಿದೆ.

ಯಡಿಯೂರಪ್ಪ ಜೈಲಿನಲ್ಲಿ... ..

ಪುಟ 7 ರಿಂದ

ವೈಯುಕ್ತಿಕ ಮುಖ ವೆಂಬುದಿರುವುದಿಲ್ಲ. ಅದೇನಿದ್ದರೂ ಮುಖವಾಡ . ಅದೆಷ್ಟೋ ಜನ ಉಗಿದರೂ ಅದನ್ನು ಸುಲಭವಾಗಿ ಬದಲಾಯಿಸಿ ಬಿಡುತ್ತಾರೆ. ತಾನಲ್ಲ, ಅವನು ಎಂದು ಹೇಳಿ ಬಿಡುತ್ತಾರೆ. ಹೋಗಲಿ ಬಿಡಿ, ಭ್ರಷ್ಟಾಚಾರದ ವಿರುದ್ಧದ ಆಡ್ವಾಣಿ ರಥಯಾತ್ರೆಯೇ ಭ್ರಷ್ಟ ಮಾರ್ಗಗಳನ್ನು ಅನುಸರಿಸುತ್ತಾ ನಡೆದಿದೆ. (ಮಾಧ್ಯಮದವರಿಗೆ ಲಂಚ ನೀಡಿದ್ದು) . ಈ ಹಂತದಲ್ಲಾದರೂ ಕರ್ನಾಟಕದಲ್ಲಾದರೂ ಯಾತ್ರೆ ವಿಸರ್ಜನೆಗೊಳ್ಳಲಿ.

ಈ ಎಲ್ಲಾ ಪ್ರಕರಣಗಳಲ್ಲಿ ಮತ್ತೇ ಬಿಜೆಪಿ ಸರಕಾರದ ನಿಜ ಮುಖ ಬಯಲಾಗಿದೆ. ಅಕ್ರಮ [illegible] ಅಧಿಕಾರದಲ್ಲಿ [illegible] ನೈತಿಕತೆಯನ್ನೂ ಹೊಂದಿಲ್ಲ.

ತೊಲಗು, ತೊಲಗು

ಈಗಿನ ಬೆಳವಣಿಗೆಗಳಿಂದ ಒಂದಂತೂ ಸ್ವಷ್ಟ .ಬಿಜೆಪಿ ಸರ್ಕಾರದ ಇನ್ನಷ್ಟು ಹಗರಣಗಳು, ಅಕ್ರಮಗಳು ಮುಂದೆಯೂ ಸ್ಫೋಟಿಸಲಿವೆ. ಇನ್ನಷ್ಟು ಮಂತ್ರಿ ಮಹೋದಯರು ಜೈಲು ಸೇರಲಿದ್ದಾರೆ, ಸೇರಬಹುದು .ಈ ಸಂದರ್ಭದಲ್ಲಿ ಎಷ್ಟೇ ಒತ್ತಡ, ಹುನ್ನಾರಗಳು ಎದುರಾದರೂ ನ್ಯಾಯಾಂಗದ ಪ್ರಕ್ರಿಯೆ ನಿಷ್ಠುರವಾಗಿ ನಡೆಯಬೇಕು. ಅದೇ ಹೊತ್ತಿನಲ್ಲಿ ಆಧಿಕಾರದಲ್ಲಿ ಉಳಿಯುವ ಹಕ್ಕನ್ನೇ ಕಳೆದುಕೊಂಡಿರುವ ಸದಾನಂದಗೌಡರ ಬಿಜೆಪಿ ಸರ್ಕಾರ ರಾಜೀನಾಮೆ ಕೊಟ್ಟು ತೊಲಗುವವರೆಗೂ ಜನರ ಚಳುವಳಿ ,ಆಗ್ರಹ ನಿಲ್ಲದಿರಲಿ.

●

ತಮಿಳುನಾಡಿನ ರಾಜಕೀಯ ಸಮೀಕರಣ

ನೆರೆಯ ತಮಿಳುನಾಡಿನಲ್ಲಿ ರಾಜಕೀಯ ಧ್ರುವೀಕರಣ ಆರಂಭವಾಗಿದೆ. ಕಳೆದ ಚುನಾವಣೆಯಲ್ಲಿ ಅಣ್ಣಾಡಿಎಂಕೆ ಜೊತೆ ಮತದಾರರನ್ನು ಎದುರಿಸಿದ್ದ ಸಿಪಿಐಎಂ ವಿಜಯಕಾಂತ್ ನೇತೃತ್ವದ ಡಿಎಂಡಿಕೆ ಜೊತೆ ಮೈತ್ರಿ ಬೆಸೆದುಕೊಂಡಿದೆ. ಇದು ರಾಜ್ಯದ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಇದೇ ಮೊದಲ ಬಾರಿಗೆ ಪ್ರಮುಖ ಪಕ್ಷಗಳಾದ ಡಿಎಂಕೆ ಮತ್ತು ಅಣ್ಣಾ ಡಿಎಂಕೆಗೆ ಹೊರತಾದ ಮೂರನೇ ರಂಗವೊಂದು ಜನ್ಮ ತಳೆದಿದೆ.

ಅಕ್ಟೋಬರ್‌ನಲ್ಲಿ ನಡೆಯಲಿರುವ ಈ ಚುನಾವಣೆಯಲ್ಲಿ ಬಹುತೇಕ ಪ್ರಮುಖ ಪಕ್ಷಗಳು ಏಕಾಂಗಿಯಾಗಿ ಕಣಕ್ಕಿಳಿಯುವ ನಿರ್ಧಾರ ತೆಗೆದುಕೊಂಡಿದ್ದವು. ಡಿಎಂಕೆ, ಅಣ್ಣಾಡಿಎಂಕೆ, ಪಿಎಂಕೆ, ಕಾಂಗ್ರೆಸ್ ಪಕ್ಷಗಳು ಏಕಾಂಗಿಯಾಗಿ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾಗಿವೆ. ಮೈತ್ರಿ ಮಾತುಕತೆ ನಡೆಯುತ್ತಿದ್ದ ಸಂದರ್ಭದಲ್ಲೇ ಜಯಲಲಿತಾ ಏಕಾಏಕಿ ಎಲ್ಲ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದ ಹಿನ್ನೆಲೆಯಲ್ಲಿ ಹೊಸ ರಾಜಕೀಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ. ಇದರ ಪರಿಣಾಮ, ಡಿಎಂಡಿಕೆ–ಸಿಪಿಎಂ ಮೈತ್ರಿ ಅಂತಿಮಗೊಂಡಿದೆ.

ಒಪ್ಪಂದದ ಪ್ರಕಾರ, ಎರಡು ನಗರಗಳಲ್ಲಿ, 25 ಮುನ್ಸಿಪಾಲಿಟಿಗಳಲ್ಲಿ, 61 ನಗರ ಪಂಚಾಯತ್‌ಗಳಲ್ಲಿ ಸಿಪಿಎಂ ಸ್ಪರ್ಧಿಸಲಿದೆ. "ಮೈತ್ರಿ ರಾಜಕೀಯದ ನೈತಿಕತೆಯನ್ನು ಜಯಾ ಗಾಳಿಗೆ ತೂರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಅಣ್ಣಾಡಿಎಂಕೆ ಜೊತೆ ಸ್ಥಾನ ಹೊಂದಾಣಿಕೆ ಮಾಡಿಕೊಂಡು ಮೈತ್ರಿಕೂಟ ಅಧಿಕಾರಕ್ಕೆ ಬರುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಆ ಬಳಿಕ ಸಿಪಿಎಂ ರಚನಾತ್ಮಕ ಪ್ರತಿಪಕ್ಷದ ಪಾತ್ರ ವಹಿಸಿತ್ತು" ಎಂದು ಹೇಳುವ ಮೂಲಕ ಸಿಪಿಎಂ ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಹೊಸ ರಾಜಕೀಯ ಸಮೀಕರಣವನ್ನು ಸ್ವಾಗತಿಸಿದ್ದಾರೆ.

◎

ಕನ್ನಡ ವಾರಪತ್ರಿಕೆ

ಈಗ ಮಾಹಿತಿ ಹಕ್ಕಿನ ಮೇಲೆ ಯುಪಿಎ-2 ಕಣ್ಣು !

ಮಾಹಿತಿ ಹಕ್ಕು ಕಾನೂನು ತನ್ನ ಒಂದು ಮಹಾಸಾಧನೆ ಎಂದು ಯುಪಿಎ-1 ಅವಕಾಶ ಸಿಕ್ಕಾಗಲೆಲ್ಲಾ ಡಂಗುರ ಸಾರುತ್ತಿತ್ತು. ಆದರೆ ಯುಪಿಎ-2 ಸರಕಾರಕ್ಕೆ ಈಗ ಹಾಗನಿಸುತ್ತಿಲ್ಲ. ಏಕೆಂದರೆ ನವ-ಉದಾರವಾದದ ಸಾಲು-ಸಾಲು ಹಗರಣಗಳನ್ನು ಜನಗಳ ಮುಂದೆ ತೆರೆದಿಡುವಲ್ಲಿ ಅದು ಒಂದು ಪ್ರಮುಖ ಸಾಧನವಾಗಿ ಬಳಕೆಯಾಗುತ್ತಿದೆ. ಆದ್ದರಿಂದ ತನ್ನ ನವ-ಉದಾರವಾದಿ ಒಲವಿನ ವಿಮರ್ಶೆ ಮಾಡಿಕೊಳ್ಳಲಾರದ ಯುಪಿಎ-2 ಸರಕಾರದ ಮಂತ್ರಿಗಳು ಆಗಾಗ ಅದರ ಮೇಲೆಯೇ ಕಿಡಿ ಕಾರುತ್ತಾ ಬಂದಿದ್ದಾರೆ. ಈಗ ಸ್ವತಃ ಪ್ರಧಾನಮಂತ್ರಿಗಳು ಅವರೆಲ್ಲರ ಅಸಮಾಧಾನಕ್ಕೆ ದನಿ ನೀಡಿದ್ದಾರೆ.

ಕೇಂದ್ರೀಯ ಮಾಹಿತಿ ಆಯೋಗದ ವಾರ್ಷಿಕ ಸಮಾವೇಶವನ್ನು ಉದ್ಘಾಟಿಸುತ್ತ ಅವರು 'ಈ ಪಾರದರ್ಶಕತೆಯ ಕಾನೂನು ಸರಕಾರದ ಕಲಾಪ ಪ್ರಕ್ರಿಯೆ ಮೇಲೆ ಪ್ರತಿಕೂಲ ಪರಿಣಾಮ ಬೀರಬಾರದು, ಪ್ರಾಮಾಣಿಕ, ಸದ್ಭಾವನೆಯ ಸಾರ್ವಜನಿಕ ಸೇವಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ತಡೆಯಾಗಬಾರದು' ಎಂದು ಹೇಳಿದ್ದಾರೆ. ಅಂದರೆ, ಪಾರದರ್ಶಕತೆ ಹೆಚ್ಚಾಯಿತಲ್ಲವೇ, ಅದರ ಮೇಲೆ ಕಡಿವಾಣಗಳು ಬೇಕಲ್ಲವೇ, ಅದಕ್ಕಾಗಿ ಅಗತ್ಯ ತಿದ್ದುಪಡಿಗಳ ಬಗ್ಗೆ ಚರ್ಚಿಸಿ ಎಂದು ದೇಶದ ಅತ್ಯುನ್ನತ ಆಡಳಿತಗಾರ ಮಾಹಿತಿ ಆಯುಕ್ತರುಗಳಿಗೆ ಸಲಹೆ ಮಾಡಿದ್ದಾರೆ!

ವಾಸ್ತವವಾಗಿ ಈ ಮಾಹಿತಿ ಹಕ್ಕು ಕಾನೂನು, ರೇಗಾ ಕಾನೂನಿನಂತೆ, ಅರಣ್ಯ ಹಕ್ಕುಗಳ ಕಾನೂನಿನಂತೆ ಕೊನೆಗೂ ಜಾರಿಗೆ ಬಂದದ್ದು ಎಡಪಕ್ಷಗಳ ಬೆಂಬಲದಿಂದ ಆಡಳಿತ ನಡೆಸಬೇಕಾಗಿದ್ದ ಯುಪಿಎ-1 ಅಧಿಕಾರಾವಧಿಯಲ್ಲಿ, ಎಡಪಕ್ಷಗಳ ಒತ್ತಡದಿಂದಾಗಿಯೇ. ಅವಕ್ಕೆ ಜನರ ಸಕಾರಾತ್ಮಕ ಸ್ಪಂದನ ಕಂಡು ಅದರ ಕೀರ್ತಿಯನ್ನೆಲ್ಲ ತಾನೇ ಬಾಚಿಕೊಂಡ ಯುಪಿಎ, ನವ-ಉದಾರವಾದಿಗಳು ಹೇಳುವಂತೆ, ಈಗ ಎಡಪಕ್ಷಗಳ 'ಒತ್ತಡ'ದಿಂದ 'ಮುಕ್ತ'ವಾಗಿರುವುದರಿಂದ ಪ್ರಜಾಪ್ರಭುತ್ವದ ವಿಸ್ತರಣೆಗೆ ನೆರವಾದ ಆ ಶಾಸನಗಳು ಈಗ ಅದಕ್ಕೆ ಮುಳ್ಳಾಗಿ ಕಾಣುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ ಪ್ರಧಾನಮಂತ್ರಿಗಳ ಈ ಪರೋಕ್ಷ ಸಲಹೆಗೆ ಸೋನಿಯಾ ಗಾಂಧಿ ಅಧ್ಯಕ್ಷತೆಯ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರಿಂದಲೇ ಭಾರೀ ವಿರೋಧ ವ್ಯಕ್ತವಾಯಿತು. ವಾಸ್ತವವಾಗಿ ಆಡಳಿತದಲ್ಲಿ ಇನ್ನಷ್ಟು ಪಾರದರ್ಶಕತೆ ತರುವ ತಿದ್ದುಪಡಿಗಳು ಬೇಕಾಗಿವೆ. ಈ ಪಾರದರ್ಶಕತೆ ಪ್ರಾಮಾಣಿಕ ಆಡಳಿತಗಾರರಿಗೆ ಖಂಡಿತವಾಗಿ ಅಡ್ಡಿಯಾಗುವುದಿಲ್ಲ, ತದ್ವಿರುದ್ಧವಾಗಿ ಅವರು ತಮ್ಮ ಪ್ರಾಮಾಣಿಕ ಅಭಿಪ್ರಾಯಗಳನ್ನು ನಿರ್ಭಿಡೆಯಿಂದ ಕೊಡಲು ಸಹಾಯಕವಾಗುತ್ತದೆ ಎಂದು ಒಬ್ಬ ಸದಸ್ಯರು ಹೇಳಿದ್ದಾರೆ, ಗೋಪ್ಯತೆಯ ಹೆಸರಿನಲ್ಲಿ ಭ್ರಷ್ಟ ಆಚರಣೆಗಳನ್ನು ಮುಚ್ಚಿಕೊಳ್ಳಬಯಸುವ ಕೆಲವು ಮಂತ್ರಿಗಳು ಮತ್ತು ಅಧಿಕಾರಶಾಹಿಗಳ ತಪ್ಪು ಸಲಹೆಗೆ ಪ್ರಧಾನಮಂತ್ರಿಗಳು ಗೋಣು ಹಾಕಿದ್ದಾರೆ ಎಂಬಂತಹ ವಿಮರ್ಶೆಯನ್ನೂ ಇನ್ನೊಬ್ಬ ಸದಸ್ಯರು ಮಾಡಿದ್ದಾರೆ. ದೇಶದ ಪ್ರಧಾನಿಗಳು ಅಷ್ಟೊಂದು ದಡ್ಡರಿರಲಿಕ್ಕಿಲ್ಲ. ಆದರೆ ನವ-ಉದಾರವಾದಕ್ಕೆ ಜೋತು ಬಿದ್ದವರ ಅಸಹಾಯಕತೆಯನ್ನಂತೂ ಇದು ಬಿಂಬಿಸುತ್ತಿರಬಹುದಲ್ಲವೇ?

ನಿಜ, ನಿರೀಕ್ಷೆಯಂತೆ, ಪ್ರಧಾನಿಗಳು ತನ್ನ ಮಾತಿನರ್ಥ ಅದೇನೂ ಆಗಿರಲಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಆದರೆ ಮಾಹಿತಿ ಆಯುಕ್ತರುಗಳ ಸಮಾವೇಶ ಪ್ರಧಾನಿಗಳ ಇಂಗಿತವನ್ನು ಚೆನ್ನಾಗಿಯೇ ಅರ್ಥ ಮಾಡಿಕೊಂಡಂತಿದೆ. ಈ ಹಂತದಲ್ಲಿ ಮಾಹಿತಿ ನೀಡಿಕೆಯನ್ನು ಮೊಟಕು ಮಾಡುವ ಯಾವ ತಿದ್ದುಪಡಿಯೂ ಸಲ್ಲ ಎಂಬ ನಿರ್ಣಯಕ್ಕೆ ಅದು ಬಂದಿದೆ, ಅಷ್ಟೇ ಅಲ್ಲ, ಮಾಹಿತಿ ನೀಡಿಕೆಗೆ ಈಗ ಇರುವ 'ವಿನಾಯ್ತಿ'ಗಳನ್ನು ಕೂಡ ಅಪರೂಪದ ಸಂದರ್ಭಗಳಲ್ಲಿ ಮಾತ್ರವೇ ಬಳಸುವಂತಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.



ವೇದರಾಜ ಎನ್.ಕೆ.

★

ಕೇವಲ 37 ಔಷಧಿಗಳ ಬೆಲೆ ಹತೋಟಿ?

ಯುಪಿಎ-2 ಸರಕಾರದ 'ಆಮ್-ಆದ್ಮಿ' ಕೇವಲ ಒಂದು ಮುಖವಾಡವೇ ಎಂಬ ಪ್ರಶ್ನೆ ಸಾರ್ವಜನಿಕ ಆರೋಗ್ಯ ವಲಯದಲ್ಲೂ ಎದುರಾಗಿದೆ. ಕ್ಷಯರೋಗ, ಅತಿಸಾರ, ಹೃದಯ ಬೇನೆಗಳು ಮತ್ತು ಮಲೇರಿಯಾದಂತಹ ರೋಗಗಳನ್ನು ಎದುರಿಸುವಲ್ಲಿ ನೆರವಾಗಲು ಬಡ ರೋಗಿಗಳಿಗೆ ಆವಶ್ಯಕ ಔಷಧಿಗಳ ಬೆಲೆ ಹತೋಟಿಯ ಬಗ್ಗೆ ಕೇಂದ್ರ ಸರಕಾರ ಗಂಭೀರ ಕಾಳಜಿ ವಹಿಸುತ್ತಿದೆಯೇ ಎಂದು ಸ್ವತಃ ಸುಪ್ರಿಂ ಕೋರ್ಟ್ ಪ್ರಶ್ನಿಸಿದೆ.

'ರಾಷ್ಟ್ರೀಯ ಆವಶ್ಯಕ ಔಷಧಿಗಳ ಪಟ್ಟಿ' ಎಂಬುದಿದೆ. ಸರಕಾರ ಈ ಔಷಧಿಗಳ ಬೆಲೆಗಳ ಮೇಲೆ ಹತೋಟಿ ಹಾಕಬೇಕು. ಅದರಲ್ಲಿ ಈಗ 348 ಔಷಧಿಗಳು ಆವಶ್ಯಕ ಔಷಧಿಗಳೆಂದು ಪಟ್ಟಿ ಮಾಡಲಾಗಿದೆ. ಆದರೆ ಇದರಲ್ಲಿ ಸರಕಾರದ ಬೆಲೆ ಹತೋಟಿಗೊಳಗಾಗಿರುವುದು ಕೇವಲ 37. ಈ ಹಿನ್ನೆಲೆಯಲ್ಲಿ 'ಅಖಿಲ ಭಾರತ ಔಷಧಿ ಕ್ರಿಯಾ ಜಾಲ' ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರಿಂಕೋರ್ಟ್ ಪೀಠ ನಾಲ ವಾರದೊಳಗೆ ಈ ಬಗ್ಗೆ ಅಫಿಡವಿಟ್‌ಗಳನ ಸಲ್ಲಿಸಬೇಕು ಎಂದು ಕೇಂದ್ರ ಸರಕಾರ ಆರೋಗ್ಯ ಇಲಾಖೆ ಮತ್ತು ರಾಸಾಯನಿ ಹಾಗೂ ರಸಗೊಬ್ಬರ ಇಲಾಖೆಯ ಕಾರ್ಯದರ್ಶಿಗಳಿಗೆ ತಾಕೀತು ಮಾಡಿದೆ.

ಆವಶ್ಯಕ ಔಷಧಿಗಳು ಬಡ ರೋಗಿಗಳ ನ್ಯಾಯಯುತ ಬೆಲೆಗಳಲ್ಲಿ ಸಿಗುತ್ತಿಲ್ಲ ಎಂದ 2010ರಲ್ಲಿ ಸಂಸದೀಯ ಸಮಿತಿ ಹಾಗೂ ಅದ ಮೊದಲು 2005ರಲ್ಲಿ ರಾಸಾಯನಿಕ ಮತ ರಸಗೊಬ್ಬರ ಇಲಾಖೆಯ ಸ್ಥಾಯೀ ಸಮಿತಿಗಳ ಒಪ್ಪಿಕೊಂಡಿದ್ದವು ಎಂಬುದನ್ನು ನ್ಯಾಯಾಲಯ ಗಮನಕ್ಕೆ ತಗೊಂಡಿದೆ. ಅಲ್ಲದೆ ಒಂದೆ ಔಷಧಿಗಳ ಬೆಲೆಗಳು ಗಗನಕ್ಕೇರುತ್ತಿರುವಂತ ಇನ್ನೊಂದೆಡೆ ಬೆಲೆ ಹತೋಟಿಗೆ ಒಳಪ ಔಷಧಿಗಳ ಸಂಖ್ಯೆಯೂ ಇಳಿಯುತ್ತಿದೆ.

ಆರೋಗ್ಯ ಇಲಾಖೆ ಆವಶ್ಯಕ ಔಷಧಿಗ ಪಟ್ಟಿಯಲ್ಲಿರುವ ಎಲ್ಲ ಔಷಧಿಗಳನ್ನು ಬೆ ಹತೋಟಿಗೆ ಒಳಪಡಿಸಬೇಕು ಎಂದು ಒಂದ ಪತ್ರ ಕಳಿಸಿರುವುದಾಗಿಯೂ ಸುಪ್ರಿಂ ಕೋರ್ಟ್ ಪೀಠ ಹೇಳಿತು. ಆದರೆ ವಾಸ್ತವವಾಗಿ ಕಳೆ ಎರಡು ದಶಕಗಳಲ್ಲಿ ಬೆ ಹತೋಟಿಗೊಳಗಾಗಿರುವ ಔಷಧಿಗಳ ಸಂ 347ರಿಂದ 76ಕ್ಕೆ ಇಳಿದಿದೆ ಎಂದು ಇನ್ನೊಂದ ಮಾಹಿತಿ ತಿಳಿಸುತ್ತದೆ. ಇವು ಸರಕಾರಿ ಹತೋಟಿಗಳನ್ನೆಲ್ಲ ಒಂದೊಂದಾಗಿ ತೆಗೆಯು ನವ-ಉದಾರವಾದದ ಎರಡು ದಶಕಗಳ ಎಂಬುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

ಬಿಹೆಚ್‌ಇಎಲ್ ಬಗ್ಗೆ ಸರಕಾರೀ ಅಪಪ್ರಚಾರ!

ಯುಪಿಎ-2 ಸರಕಾರದ ಒಂದು ಅಂಗವೇ ಆದ, 'ಬಡತನದ ರೇಖೆ'ಯ ಬಗ್ಗೆ ಸುಪ್ರಿಂ ಕೋರ್ಟಿನಲ್ಲಿ ಹಾಸ್ಯಾಸ್ಪದ ಅಫಿಡವಿಟ್ ಸಲ್ಲಿಸಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡ ಯೋಜನಾ ಆಯೋಗ ಈಗ ಸರಕಾರೀ ಒಡೆತನದ, 'ನವರತ್ನ' ಎಂದು ಸರಕಾರವೇ ಹೆಸರಿಸಿರುವ ಒಂದು ಉದ್ದಿಮೆಯ ವಿರುದ್ಧ ಅಪಪ್ರಚಾರಕ್ಕಿಳಿದಿದೆ. ಇದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಚೀನೀ ಕಂಪನಿಗಳು ತಯಾರಿಸುವ ವಿದ್ಯುತ್ ಉಪಕರಣ ಭಾರತದ 'ನವರತ್ನ' ಕಂಪನಿಯಾದ ಬಿಹೆಚ್‌ಇಎಲ್ ತಯಾರಿಸುವ ಉಪಕರಣಕ್ಕಿಂತ ಉತ್ತಮ ಗುಣಮಟ್ಟ ಹೊಂದಿರುತ್ತದೆ, ಅಲ್ಲದೆ ಬಿಹೆಚ್‌ಇಎಲ್ ಸಮಯಕ್ಕೆ ಸರಿಯಾಗಿ ಕಾಂಟ್ರಾಕ್ಟುಗಳನ್ನು ಮುಗಿಸಿ ಕೊಡುವಲ್ಲಿ ವಿಫಲವಾಗಿದೆ, ಆ ಸಾಮರ್ಥ್ಯ ಅದಕ್ಕಿಲ್ಲ ಎಂದು ಯೋಜನಾ ಆಯೋಗ ವರದಿಯೊಂದನ್ನು ತಯಾರಿಸಿ ಅದನ್ನು ಪ್ರಕಟಗೊಳಿಸಿದೆ.

ಇದು ತಪ್ಪು ಮಾಹಿತಿ ಎಂದು ತಪನ್ ಸೇನ್ ಹೇಳಿದ್ದಾರೆ. ಬಿಹೆಚ್‌ಇಎಲ್ ನಿರ್ವಹಿಸುವ ಪ್ರಾಜೆಕ್ಟುಗಳಲ್ಲಿ ಸುಮಾರು ಮುಕ್ಕಾಲು ಪಾಲು ಸಂದರ್ಭಗಳಲ್ಲಿ ಅದರ ಪಾತ್ರ ಬಾಯ್ಲರುಗಳು, ಟರ್ಬೈನ್‌ಗಳು ಮತ್ತು ಜನರೇಟರುಗಳ ಪೂರೈಕೆಗಷ್ಟೇ ಸೀಮಿತವಾಗಿರುತ್ತದೆ. ಇದು ಒಟ್ಟು ಪ್ರಾಜೆಕ್ಟ್ ಕೆಲಸದ 40-45ಶೇ. ಮಾತ್ರ. ಉಳಿದ ಕೆಲಸಗಳೆಂದರೆ ಇಲೆಕ್ಟ್ರಿಕಲ್, ಬೂದಿ ನಿರ್ವಹಣೆ ಮತ್ತು ಕಲ್ಲಿದ್ದಲು ನಿರ್ವಹಣೆ ಉಪಕರಣಗಳು, ನೀರಿನ ವ್ಯವಸ್ಥೆಗಳು ಇತ್ಯಾದಿ ಬಿಹೆಚ್‌ಇಎಲ್ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ಯಾವುದಾದರೂ ಪ್ರಾಜೆಕ್ಟಿನಲ್ಲಿ ವಿಳಂಬವಾಗಿದ್ದರೆ, ಅದು ಹೆಚ್ಚಿನ ಸಂದರ್ಭಗಳಲ್ಲಿ ಈ ಇತರ ಕಾರ್ಯಗಳ ವಿಳಂಬದಿಂದಾಗಿಯೇ ಹೊರತು ಬಿಹೆಚ್‌ಇಎಲ್ ಕೆಲಸಗಳಿಂದಾಗಿ ಅಲ್ಲ. ಕೆಲವು ಚೀನೀ ಕಂಪನಿಗಳು ಬಿಹೆಚ್‌ಇಎಲ್‌ಗಿಂತ ಶೀಘ್ರವಾಗಿ ಪ್ರಾಜೆಕ್ಟ್ ಮುಗಿಸಿ ಕೊಡುವುದಾಗಿ ಹೇಳಿದರೂ ವಾಸ್ತವವಾಗಿ ಹಾಗೆ ಮಾಡಿರುವುದಿಲ್ಲ. ಇದು ಅನುಭವದ ಮಾತು

ಇನ್ನು ಗುಣಮಟ್ಟದ ಬಗ್ಗೆ ಹೇಳುವುದಾದರೆ, ಬಿಹೆಚ್‌ಇಎಲ್ ಉಪಕರಣಗಳು ಯಾವುದೇ ಅಂತರ್ರಾಷ್ಟ್ರೀಯ ಗುಣಮಟ್ಟಕ್ಕಿಂತ ಕಡಿಮೆಯಿಲ್ಲ. ಒಂದು ವಿಶ್ಲೇಷಣೆಯ ಪ್ರಕಾರ ಕಳೆದ ಎರಡು ವರ್ಷಗಳಲ್ಲಿ ಕಾರ್ಯಗತವಾಗಿರುವ 40 ವಿದ್ಯುತ್ ಸ್ಥಾವರಗಳ ನಿರ್ವಹಣೆಯಲ್ಲಿ ಬಿಹೆಚ್‌ಇಎಲ್ ದಾಖಲೆ ಯಾವ ಚೀನೀ ಕಂಪನಿಗಿಂತಲೂ ಕೆಳಮಟ್ಟದ್ದಾಗಿರಲಿಲ್ಲ. ಅಲ್ಲದೆ, ಇನ್ನೊಂದು ವಿಶ್ಲೇಷಣೆಯ ಪ್ರಕಾರ, ಚೀನೀ ಉಪಕರಣಗಳು ವಿಪರೀತ ಇಂಧನ ಬಳಕೆ ಮಾಡುತ್ತವೆ. 'ಎರಡನೇ ಇಂಧನ ತೈಲ ಬಳಕೆ'(ಸೆಕೆಂಡರಿ ಫ್ಯೂಯಲ್ ಕಂಸಪ್ಶನ್)ಯ ಪ್ರಮಾಣ ಚೀನೀ ಉಪಕರಣಗಳಲ್ಲಿ ಬಿಹೆಚ್‌ಇಎಲ್ ಉಪಕರಣಗಳಿಗಿಂತ 12 ಪಟ್ಟು ಹೆಚ್ಚು.

ಇವೆಲ್ಲ ಸ್ವತಂತ್ರ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಅಧ್ಯಯನಗಳು ಸಾಬೀತು ಮಾಡಿರುವ ಸಂಗತಿಗಳು. ಆದರೂ, ಯೋಜನಾ ಆಯೋಗ ಇಂತಹ ವರದಿಗಳನ್ನು ಪ್ರಕಟಿಸಿ, ಒಂದು ಸ್ಪರ್ಧಾತ್ಮಕವಾದ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಸ್ವಂತ ಸಂಸ್ಥೆಯ ವಿರುದ್ಧವೇ ವಿದೇಶಿ ಸ್ಪರ್ಧೆಗೆ ಸಾರ್ವಜನಿಕ ಪ್ರಮಾಣ ಪತ್ರ ನೀಡುವ ತುರ್ತಾದರೂ ಏನಿದೆ ಎಂದು ಪ್ರಶ್ನಿಸಿರುವ ತಪನ್ ಸೇನ್, ಪ್ರಧಾನಮಂತ್ರಿಗಳಿಗೆ ಬರೆದ ಪತ್ರದಲ್ಲಿ, ಪ್ರಧಾನಿಗಳು ಯೋಜನಾ ಆಯೋಗದ ವರದಿ ಹೇಳಿರುವ ಅಂಶಗಳ ಸ್ವತಃ ಪರೀಕ್ಷೆ ನಡೆಸಿ, ತಥ್ಯಗಳನ್ನು ತಿಳಿಯಲಿ ಹಾಗೂ ತಕ್ಷಣವೇ ಸಾರ್ವಜನಿಕ ವಲಯದ ಕಂಪನಿಯ ಹೆಸರಿಗೆ ಮಸಿ ಬಳಿಯುವ ಚಟುವಟಿಕೆಗಳನ್ನು ಯೋಜನಾ ಆಯೋಗ ನಿಲ್ಲಿಸುವಂತೆ ಕ್ರಮಗಳನ್ನು ಕೈಗೊಳ್ಳಬೇಕು, ಅದು ಪ್ರಕಟಗೊಳಿಸಿರುವ ವರದಿಯನ್ನು ಹಿಂದಕ್ಕೆ ತಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಜಗದಗಲ

ಶರತ್‌ಚಂದ್ರ

ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದಿದ್ದ ಗದ್ದಾಫಿಯ ಕೊಲೆ

ಲೂಟಿಕೋರ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ಅದರ ವ್ಯೂಹಗಳಿಗೆ ಪ್ರತಿವ್ಯೂಹ ರೂಪಿಸುತ್ತಿದ್ದ ಗದ್ದಾಫಿಯ ಬಗ್ಗೆ ಅಮೆರಿಕ ಕೂಟ ಕೆಂಡಾಮಂಡಲವಾಗಿತ್ತು.

ಸಿರ್ತೆ ಎಂಬ ಲಿಬ್ಯಾದ ಪಟ್ಟಣದಲ್ಲಿ ಗದ್ದಾಫಿ ಬೆಂಬಲಿಗರು ಮತ್ತು ವಿರೋಧಿ ಪಡೆಗಳ ನಡುವೆ ನಡೆದ ಕಾಳಗದಲ್ಲಿ ಗದ್ದಾಫಿ ಸತ್ತಿದ್ದಾರೆ ಎಂದು ವರದಿಯಾಗಿದೆ. ಕಾಳಗದಲ್ಲಿ ಗದ್ದಾಫಿ ವಿರೋಧಿ ಪಡೆಗಳ ಕೈಗೆ ಸಿಕ್ಕರು. ಅವರನ್ನು ಗುಂಡು ಹೊಡೆದು ಕೊಲ್ಲಲಾಯಿತು ಎಂದು ಒಂದು ವರದಿ ಹೇಳಿದೆ. ಸಿರ್ತೆಯಿಂದ ಬೇರೆಡೆಗೆ ಹೋಗುತ್ತಿದ್ದ ಗದ್ದಾಫಿ ಇದ್ದ ತುಕಡಿಯ ಮೇಲೆ ನಾಟೋ ವಿಮಾನಗಳ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡ ಮೇಲೆ ವಿರೋಧಿ ಪಡೆಗಳ ಕೈಗೆ ಸಿಕ್ಕರು. ಯಾವುದೇ ವೈದ್ಯಕೀಯ ನೆರವು ಇಲ್ಲದೆ ಅವರು ಸತ್ತರು ಎಂದು ಇನ್ನೊಂದು ವರದಿ ಹೇಳಿದೆ. ರಾಷ್ಟ್ರೀಯ ತಾತ್ಕಾಲಿಕ ಮಂಡಳಿ ವಕ್ತಾರ ಗದ್ದಾಫಿ ಸಾವಿನ ಘೋಷಣೆ ಮಾಡಿದರೂ, ಯಾವುದೇ ವಿವರಗಳನ್ನು ನೀಡಲಿಲ್ಲ. ಗದ್ದಾಫಿ ಉತ್ತರಾಧಿಕಾರಿ ಎನಿಸಿದ್ದ ಮಗ ಮತ್ತು ಭದ್ರತಾ ಮುಖ್ಯಸ್ಥ ಈ ಕಾಳಗದಲ್ಲಿ ಸತ್ತಿದ್ದಾರೆ. ಅವರನ್ನು ವಶ ಪಡಿಸಿಕೊಳ್ಳಲಾಗಿದೆ. ಅವರು ತಪ್ಪಿಸಿಕೊಂಡಿದ್ದಾರೆ ಎಂದು ಬೇರೆ ಬೇರೆ ವರದಿಗಳು ಹೇಳಿವೆ.



ಅಮೇರಿಕಾ ಅಜೆಂಡಾ

ಗದ್ದಾಫಿ-ವಿರೋಧಿ ಪಡೆಗಳಿಗೆ ತೀವ್ರ ಪ್ರತಿರೊಧ ಒಡ್ಡಿದ್ದ ಗದ್ದಾಫಿಯವರ ಸ್ವಂತ ಪಟ್ಟಣವಾದ ಸಿರ್ತೆಯನ್ನು ವಶಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಲಿಬ್ಯಾದ 'ಪೂರ್ಣ ವಿಮೋಚನೆ'ಯನ್ನು ಘೋಷಿಸಲಾಗಿವುದು ಎಂದೂ ತಾತ್ಕಾಲಿಕ ಮಂಡಳಿ ವಕ್ತಾರ ಹೇಳಿದ್ದಾರೆ.

ಸಾಮ್ರಾಜ್ಯಶಾಹಿ 'ಮಾನವೀಯ ಮಧ್ಯಪ್ರವೇಶ'ದ ಹೆಸರಲ್ಲಿ ಪೂರ್ಣ ಪ್ರಮಾಣದ ಮಿಲಿಟರಿ ದಾಳಿ ಮೂಲಕ ಅದಕ್ಕೆ ಇಷ್ಟವಿಲ್ಲದ ಒಂದು ದೇಶದ ಸರ್ಕಾರವನ್ನು ಬದಲಾಯಿಸಿ ಕೈಗೊಂಬೆ ಸರ್ಕಾರವನ್ನು ನೇಮಿಸುವ ಅಜೆಂಡಾ ಯುಗೋಸ್ಲಾವಿಯದಲ್ಲಿ ಆರಂಭವಾಗಿ ಅಫ್ಘಾನಿಸ್ತಾನ, ಇರಾಕ್ ನಂತರ ಈಗ ಲಿಬ್ಯಾದಲ್ಲಿ ಜಾರಿಗೆ ಬಂದಿದೆ. ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ನಿಂತ ಇಂತಹ ದೇಶಗಳ ನಾಯಕರ ಕೊಲೆ ಅಥವಾ ಯುದ್ಧ ಅಪರಾಧಗಳಿಗೆ ವಿಚಾರಣೆ ಸಹ ಈ ಅಜೆಂಡಾದ ಭಾಗ. ಸಿರಿಯಾ ಇಂತಹ ಮುಂದಿನ ದೇಶ ಎಂದು ಹೇಳಲಾಗಿದೆ. ಆದರೆ ಇದೇ 'ಜನತೆಯನ್ನು ದಮನಿಸುವ ಸರ್ವಾಧಿಕಾರಿಗಳನ್ನು ಕೆಳಗಿಳಿಸುವ' ಅಜೆಂಡಾ, ಅಮೆರಿಕದ 'ಮಿತ್ರದೇಶ'ಗಳಾದ ಸೌದಿ ಅರೇಬಿಯಾ, ಯೆಮೆನ್, ಬಹ್ರೈನ್, ಈಜಿಪ್ಟ್ ಗಳಿಗೆ ಅನ್ವಯಿಸುವುದಿಲ್ಲ. ಮಾತ್ರವಲ್ಲ ಈ ದೇಶಗಳಲ್ಲಿ ಅಮೆರಿನ್ ಮಿಲಿಟರಿ ಬೆಂಬಲ ಈ 'ದಮನಕಾರಿ ಸರ್ವಾಧಿಕಾರಿ' ಸರ್ಕಾರಗಳಿಗೆ ಇತ್ತು. ಪ್ರಜಾಪ್ರಭುತ್ವಕ್ಕೆ ಹೋರಾಡುತ್ತಿರುವ ಜನತಾ ಚಳುವಳಿಗೆ ಇಲ್ಲ ಎಂಬುದನ್ನು ಗಮನಿಸಬೇಕು.

ಅಮೆರಿಕಾಕ್ಕೆ ಏಕೆ ಇಷ್ಟು ಕೋಪ?

69 ವಯಸ್ಸಿನ ಗದ್ದಾಫಿ ತಾವು ಓಡಿ ಹೋಗುವುದಿಲ್ಲ. ಕೊನೆಯ ಉಸಿರಿರುವವರೆಗೆ ಹೋರಾಡಿ ಸಾಯುತ್ತೇನೆ ಎಂದಿದ್ದನ್ನು ನಿಜವಾಗಿಸಿದ್ದಾರೆ. 1969ರಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ಮೂಲಕ ರಾಜ ಇಬ್ರಿಸ್‌ನನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಗದ್ದಾಫಿ 42 ವರ್ಷಗಳ ಕಾಲ ಏಕ-ವ್ಯಕ್ತಿ ಅಧಿಕಾರ ಮಾಡಿದ್ದು ನಿಜ. ಜನತೆಗೆ ಅಧಿಕಾರದ ವಿಕೇಂದ್ರೀಕರಣ ಮತ್ತು ರಾಜಕೀಯ ಹಕ್ಕು ಅಧಿಕಾರಗಳನ್ನು ನೀಡಿಲ್ಲ ನಿಜ. ಆದರೆ ಆತ ಇತರ ಪಶ್ಚಿಮ ಏಶ್ಯಾ ಅಥವಾ ಆಫ್ರಿಕಾದ ನಾಯಕರಂತೆ ಪ್ರಜಾಪೀಡಕ ಅಥವಾ ಸಾಮ್ರಾಜ್ಯಶಾಹಿ ಕೈಗೊಂಬೆಯಾಗಿ ಅವರ ಮರ್ಜಿಯಲ್ಲಿ ಅಧಿಕಾರ ಮಾಡಿವರಲ್ಲ. ಅದಕ್ಕೆ – ಲಿಬ್ಯಾ ಶಿಕ್ಷಣ, ಆರೋಗ್ಯ ಸೇವೆಯ ಎಲ್ಲಾ ಸೂಚಕಗಳಲ್ಲಿ ಮಾತ್ರವಲ್ಲ, ವಿಶ್ವಸಂಸ್ಥೆ ಪ್ರಕಟಿಸುವ ಮಾನವ ಅಭಿವೃದ್ಧಿ ಸೂಚಕದಲ್ಲೂ ಆಫ್ರಿಕಾದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂಬುದೇ ಪುರಾವೆ. ದೇಶದ ತೈಲ ಸಂಪತ್ತನ್ನು ರಾಷ್ಟ್ರೀಕರಿಸಿ ಅದನ್ನು ಜನ ಕಲ್ಯಾಣಕ್ಕಾಗಿ ಬಳಸಿದ್ದ ಗದ್ದಾಫಿ ಮಾದರಿಯೇ ಸಾಮ್ರಾಜ್ಯಶಾಹಿಗೆ ಕೋಪ ಮತ್ತು ಈ ಮಿಲಿಟರಿ ದಾಳಿಗೆ ಕಾರಣವಾಗಿದ್ದು. ಪ್ರಸಕ್ತ ಆಫ್ರಿಕನ್ ಕೂಟದ ಅಧ್ಯಕ್ಷರಾಗಿದ್ದು ಆಫ್ರಿಕಾದ ತೈಲ ಮತ್ತಿತರ ಪ್ರಾಕೃತಿಕ ಸಂಪತ್ತು ಮೇಲೆ ಆಧಾರಿತ 'ಆಫ್ರಿಕನ್ ದಿನಾರ್' ನಾಣ್ಯವನ್ನು ಜಾರಿ ಮಾಡಬೇಕೆಂದು ಯೋಜಿಸಿದ್ದು ಸಾಮ್ರಾಜ್ಯಶಾಹಿಯನ್ನು ಕೆರಳಿಸಿತ್ತು. ಆಫ್ರಿಕದ ತೈಲ ಮತ್ತಿತರ ಪ್ರಾಕೃತಿಕ ಸಂಪತ್ತು ಮೇಲೆ ಪುನಃ ಕಣ್ಣಿಟ್ಟಿರುವ ಸಾಮ್ರಾಜ್ಯಶಾಹಿಯ ವ್ಯೂಹಗಳಿಗೆ ಆಫ್ರಿಕನ್ ಕೂಟದ ಮೂಲಕ ಪ್ರತಿ-ವ್ಯೂಹ ರೂಪಿಸುವ ಅವರ ಯೋಜನೆ. ಅವರನ್ನು ಕೆಂಡಾಮಂಡಲವಾಗಿಸಿತ್ತು. ಹೀಗೆ ಗದ್ದಾಫಿಯನ್ನು ಪ್ರಜಾಪೀಡಕ ಸರ್ವಾಧಿಕಾರಿ ಎಂದು ಹೀಗಳೆಯುವ ಸಾಮ್ರಾಜ್ಯಶಾಹಿ ಮಾಧ್ಯಮಗಳ ಪ್ರಚಾರ ಇತಿಹಾಸಕ್ಕೆ ಬಗೆದ ಅಪಚಾರ ಎನ್ನಬೇಕು.



ಗಢಾಫಿ ಕೊಲೆ: ಅಮೇರಿಕಾ ಕೂಟದ ಕಪಟತನದ ಉದ್ದೇಶ

ಮಹ್ಮದ್ ಗಢಾಫಿಯನ್ನು ಕೊಲ್ಲುವ ಮೂಲಕ ಅಮೇರಿಕ –ನ್ಯಾಟೋ ಕೂಟದ ಉದ್ದೇಶ ಈಡೇರಿದಂತಾಗಿದೆ.ಲಿಬಿಯಾದ ಜನತೆಯ ರಕ್ಷಣೆ ಮತ್ತು ಪ್ರಜಾಪ್ರಭುತ್ವ ಸ್ಥಾಪನೆ ತಮ್ಮ ಮಧ್ಯ ಪ್ರವೇಶದ ಉದ್ದೇಶವೆಂದು ಹೇಳಿಕೊಂಡರೂ ಅಲ್ಲಿನ ಪ್ರಭುತ್ವವನ್ನು ಕಿತ್ತೊಗೆಯುವುದೇ ಮುಖ್ಯ ಉದ್ದೇಶವಾಗಿತ್ತುಮೇರಿಕ ಮತ್ತದರ ಕೂಟವು ಎಲ್ಲೆಡೆಗಳಲ್ಲಿ ನಿರಂಕುಶಾಧಿಪತ್ಯಗಳನ್ನು ಪೋಷಿಸುತ್ತಿದ್ದು ತಾವು ಗಡಾಫಿಯನ್ನು ಕೊಂದದ್ದು ನಿರಂಕುಶಾಧಿಕಾರದ ಅಂತ್ಯವೆಂದು ಹೇಳಿಕೊಳ್ಳುವದು ಶುದ್ಧ ಕಪಟತನವಾಗಿದೆ.

ತಮ್ಮ ದೇಶದಲ್ಲಿ ಯಾವ ರೀತಿಯ ಸರಕಾರ ಮತ್ತು ಎಂತಹ ರಾಜಕೀಯ ವ್ಯವಸ್ಥೆ ಇರಬೇಕೆಂಬ ಬಗ್ಗೆ ನಿರ್ಧರಿಸಬೇಕಾದವರು ಲಿಬಿಯಾದ ಜನತೆ ಮಾತ್ರ, ಹೊರತು ಅಸ್ತ್ರಗಳನ್ನು ಹಿಡಿದ ಅಮೇರಿಕ ಮತ್ತು ನ್ಯಾಟೋ ಕೂಟದ ಹೇರಿಕೆಯಿಂದಲ್ಲ.

– ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಹೇಳಿಕೆ,ಅಕ್ಟೋಬರ್ 21,2011

ನವೆಂಬರ್ 11 ಕ್ಕೆ ಲೋಕಾಯುಕ್ತರ ವರದಿ ಜಾರಿಗಾಗಿ ಧರಣಿ

ಭ್ರಷ್ಟಾಚಾರದ ವಿರುದ್ಧ ಬಹುಮುಖಿ ಹೋರಾಟ ನಡೆಸಲು ಅಸ್ತಿತ್ವಕ್ಕೆ ಬಂದಿರುವ "ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆ" ಯು ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 2ರಂದು ಬೆಂಗಳೂರಿನಲ್ಲಿ ಸಂಘಟಿಸಿದ ರಾಜ್ಯ ಸಮಾವೇಶದ ಕರೆಯಂತೆ ಅಕ್ರಮಗಣಿಗಾರಿಕೆ ಕುರಿತ ಲೋಕಾಯುಕ್ತ ವರದಿ ಅಂಗೀಕರಿಸಲು ಮತ್ತು ಅಪರಾಧಿಗಳ ಮೇಲೆ ಕ್ರಮ ಜರುಗಿಸಲು ಆಗ್ರಹಿಸಿ ನವೆಂಬರ್ 11 ರಂದು ಫ್ರೀಡಂ ಪಾರ್ಕ್‌ನಲ್ಲಿ ಧರಣಿಯನ್ನು ನಡೆಸಲು ನಿರ್ಧರಿಸಲಾಗಿದೆ. # ಅಂದೇ ರಾಜ್ಯದ ಇತರೆಡೆಯೂ ಹಾಗೇ ಡಿಸೆಂಬರ್ 16 ರಂದು ಭ್ರಷ್ಟಾಚಾರದ ವಿರುದ್ಧ ವಿದ್ಯಾರ್ಥಿ ಯುವಕರ ರಾಜ್ಯ ಮಟ್ಟದ ರ್‍ಯಾಲಿಯನ್ನು ಸಂಘಟಿಸಲಾಗುವುದು. # ಈ ವೇದಿಕೆಯಲ್ಲಿ ನಾಡಿನ ಖ್ಯಾತ ಸಾಹಿತಿಗಳು ಚಿಂತಕರು, ವಿವಿಧ ಪ್ರಗತಿಪರ ಸಂಘಟನೆಗಳು ಇವೆ ಇದನ್ನು ಯಶಸ್ವಿಗೊಳಿಸಲು ಕೋರಲಾಗಿದೆ. ಪ್ರೊಪೆಸರ್ ಬರಗೂರು ರಾಮಚಂದ್ರಪ್ಪರವರು ಸೇರಿದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಯುಪಿಎ ಸರ್ಕಾರ -ರಸಗೊಬ್ಬರ ಕಂಪನಿ...

ಪುಟ 7 ರಿಂದ

ರಸಗೊಬ್ಬರ ಕಂಪನಿಗಳನ್ನು ಮುಚ್ಚಿದ್ದು ಆಮದನ್ನು ಅವಲಂಬಿಸಿದೆ. ಸರ್ಕಾರವು ಮುಚ್ಚಿರುವ ಕಂಪನಿಗಳನ್ನು ಮತ್ತೆ ಆರಂಭಿಸಬೇಕು ಮತ್ತು ನ್ಯಾಫ್ತ ಆಧಾರಿತ ಘಟಕದ ಬದಲು ಅನಿಲ ಆಧಾರಿತ ಘಟಕಗಳಾಗಿ ಪರಿವರ್ತಿಸಬೇಕು. ಇದು ರೈತರಿಗೆ ಕಡಿಮೆ ಬೆಲೆಯಲ್ಲಿ ಯೂರಿಯಾ ದೊರೆಯುವಲ್ಲಿ ಸಹಕಾರಿಯಾಗುತ್ತದೆ.

2011 ಜುಲೈ 8 ರ ತನ್ನ ಅಧಿಸೂಚನೆಯಲ್ಲಿ ಕಂಪನಿಗಳು ಯೂರಿಯ-ಯೇತರ ರಸಗೊಬ್ಬರ ಬೆಲೆಗಳನ್ನು ಹೆಚ್ಚಿಸುವ ಕುರಿತಾದ ನಿರ್ಬಂದವನ್ನು ಸರ್ಕಾರ ಹಿಂತೆಗೆದುಕೊಂಡಿತು ಮತ್ತು ಯೂರಿಯ-ಯೇತರ ರಸಗೊಬ್ಬರದ ಮಾರುಕಟ್ಟೆ ಬೆಲೆಯು "ಮುಕ್ತ" ವಾಗಿರುತ್ತದೆಂದು ಹೇಳಿತ್ತು. ಆದರೆ ರಸಗೊಬ್ಬರದ ಬೆಲೆ ತೀವ್ರವಾಗಿ ಏರುತ್ತಿದೆ.

ಕಾಂಗ್ರೆಸ್ಸ್ ನೇತೃತ್ವದ ಯುಪಿಎ ಸರ್ಕಾರದ ಈ ನೀತಿಗಳು ರೈತರು ಈಗಾಗಲೇ ಅತೀವ ಸಂಕಷ್ಟ, ಏರುತ್ತಿರುವ ಲಾಗುವಾಡುಗಳ ಬೆಲೆ ಮತ್ತು ಕೃಷಿ ಸಾಧ್ಯವಿಲ್ಲದ ಕಾರಣ ಕೃಷಿಯಿಂದ ಹಿಂದೆ ಸರಿಯುತ್ತಿರುವ ಸಂದರ್ಭದಲ್ಲಿ ಜಾರಿಯಾಗುತ್ತಿವೆ. ಪೌಷ್ಟಿಕ ಆಧಾರಿತ ರಸಗೊಬ್ಬರ ಸಹಾಯಧನ ನೀತಿಯನ್ನು ಮತ್ತು ರಸಗೊಬ್ಬರ ಬೆಲೆಗಳ ನಿಯಂತ್ರಣ ತೆಗೆದು ಹಾಕುವ ಕ್ರಮವನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಎಐಕೆಎಸ್ ಆಗ್ರಹಿಸುತ್ತದೆ. ಎಐಕೆಎಸ್ ರೈತ ವಿರೋಧಿ ಕ್ರಮಗಳ ವಿರುದ್ಧ ಪ್ರತಿಭಟಿಸಬೇಕೆಂದು ಮತ್ತು ಭ್ರಷ್ಟ ಸರ್ಕಾರ, ರಸಗೊಬ್ಬರ ಏಕಸ್ವಾಮ್ಯ ಕಂಪನಿಗಳು, ವಿತರಕರು ಮತ್ತು ಕಾಳಸಂತೆಕೋರರ ನಡುವಿನ ಅಪವಿತ್ರ ಶಾಮಿಲಾತಿಯನ್ನು ಬಯಲಿಗೆಳೆಯಬೇಕೆಂದು ಎಲ್ಲ ಘಟಕಗಳಿಗೆ ಕರೆ ನೀಡಿದೆ.



ಕಾರ್ಯಕ್ರಮದ ಆರಂಭದಲ್ಲಿ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ವೆಂಕಟಾಚಲಯ್ಯ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯೆ ವನಜಾ ವಂದಿಸಿದರು. ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಮುಂತಾದವರು ವೇದಿಕೆಯಲ್ಲಿದ್ದರು. ❑

ಸಾವಯವ ಕೃಷಿ ಪ್ರಾಯೋಗಿಕವಲ್ಲ

"ಮನಮೋಹನ ಸಿಂಗ್ ಸರ್ಕಾರ ಇರುವವರೆಗೂ ರೈತರ ಸಮಸ್ಯೆಗಳು ಇತ್ಯರ್ಥವಾಗುವುದಿಲ್ಲ. ಎಲ್ಲವನ್ನೂ ಕೊಂಡುಕೊಂಡು ತಿನ್ನಬೇಕಾದ ಕೂಲಿಕಾರರಿಗೆ ಮೊದಲೇ ಸಮಸ್ಯೆಗಳು ಹೆಚ್ಚು. ರೈತ ಸಂಕಷ್ಟಕ್ಕೆ ಸಿಲುಕಿದರೆ ಅದರ ನೇರ ಪರಿಣಾಮ ಕೂಲಿಕಾರರ ಮೇಲೆ ಆಗುತ್ತದೆ. ಕೂಲಿಕಾರರು ಕೆಲಸ ಹುಡುಕಿಕೊಂಡು ನಗರಗಳಿಗೆ ವಲಸೆ ಬರುವುದು ಹೆಚ್ಚುತ್ತಿದೆ. ಅದೂ ಮರಳಿ ಹಳ್ಳಿಗಳಿಗೆ ವಾಪಸ್ ಬರದ ವಲಸೆ ತೀವ್ರಗೊಳ್ಳುತ್ತಿದೆ.

ರಸಗೊಬ್ಬರದ ಬಗೆಗೆ ಮಾತನಾಡಿದರೆ ಸಾವಯವ ಕೃಷಿ ಮಾಡಿ ಎನ್ನಲಾಗುತ್ತದೆ. ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಅದು ಪ್ರಾಯೋಗಿಕ ಅಲ್ಲ. ರಸಗೊಬ್ಬರದ ಕಾಳಸಂತೆಕೋರರ ಜೊತೆ ಬಿಜೆಪಿಯವರು ಶಾಮೀಲಾಗಿದ್ದಾರೆ. ಅದು ಗುಟ್ಟಿನ ವಿಷಯವೇನಲ್ಲ"

- ನಿತ್ಯಾನಂದಸ್ವಾಮಿ

ಚೀನಾದ ಸ್ವಾವಲಂಬನೆ ನೋಡಿ

"ಜನಸಂಖ್ಯೆ ಹೆಚ್ಚಿತ್ತಿದೆ. ಆದರೆ ಅದಕ್ಕೆ ತಕ್ಕಂತೆ ಭೂಮಿಯ ಪ್ರಮಾಣ ಹೆಚ್ಚಾಗುವುದಿಲ್ಲ. ಆಹಾರ ಉತ್ಪಾದನೆ ಹೆಚ್ಚಾಗಬೇಕಾದರೆ ರಸಾಯನಿಕ ಗೊಬ್ಬರ ಬಳಲೇಬೇಕು. ಚೀನಾ ದೇಶ, ಭಾರತಗಳು ಸಮೃದ್ಧ ಕಲ್ಲಿದ್ದಲು ಸಂಪತ್ತು ಹೊಂದಿವೆ. ಚೀನಾ ದೇಶ ರಸ ಗೊಬ್ಬರದ ಉತ್ಪಾದನೆಗೆ ಕಲ್ಲದ್ದಲು ಬಳಸುತ್ತ ಸ್ವಾವಲಂಬನೆ ಸಾಧಿಸಿದೆ. ಆದರೆ ಭಾರತ ರಸಗೊಬ್ಬರದ ವಿಚಾರದಲ್ಲಿ ಪರಾವಲಂಭಿಯಾಗಿದೆ. ನಮ್ಮ ರಾಜ್ಯದಲ್ಲಿ ಮಣ್ಣು ಪರೀಕ್ಷಾ ಕೇಂದ್ರಗಳು ಜಿಲ್ಲೆಗೊಂದೂ ಇಲ್ಲ. ಈ ವ್ಯವಸ್ಥೆ ಆಗಬೇಕಿದೆ. ಅಗತ್ಯಕ್ಕಿಂತ ಹೆಚ್ಚು ರಸಗೊಬ್ಬರ ಬಳಸಿ ಭೂಮಿಯ ಫಲವತ್ತತೆ ನಾಶ ಆಗುವುದನ್ನು ಕೂಡ ತಪ್ಪಿಸಬೇಕಿದೆ"

- ಮಾರುತಿ ಮಾನ್ಪಡೆ

'ವಾಲ್‌ಸ್ಟ್ರೀಟ್' ವಶಪಡಿಸಿಕೊಳ್ಳಿ

ಪುಟ 16 ರಿಂದ

ಪರಿಣಾಮವಾಗಿ ಇಡೀ ವ್ಯವಸ್ಥೆಯನ್ನು ನಿಯಂತ್ರಿಸುವವರೇ ಈ ಕಾರ್ಪೊರೇಟರ್‌ಗಳಾದರು. ಹೀಗೆ ಪ್ರಜಾಪ್ರಭುತ್ವ ವ್ಯವಸ್ಥೆಗಳು ಕಾರ್ಪೊರೇಟ್ ಪ್ರಭುತ್ವಗಳಾಗಿ ಪರಿವರ್ತನೆಯಾಗಿದ್ದವು.

ಆದರೆ ಒಳಗೆ ಯಾವ ಹೂರಣವೂ ಇಲ್ಲದೇ ಹೀಗೆ ಬಲೂನಿನಂತೆ ಊದಿಕೊಳ್ಳುತ್ತಲೇ ಹೋದ ಆರ್ಥಿಕತೆ ಭಾರೀ ಸದ್ದಿನೊಂದಿಗೆ ಒಡೆದು ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡುವ ಸೂಚನೆ 2008ರಲ್ಲಿ ಸಿಕ್ಕಿತ್ತು. ಆದರೆ ತಾವು ಆರ್ಥಿಕತೆಯಲ್ಲಿ ಸೃಷ್ಟಿಸಿದ್ದ ನಿಜವಾದ ಸಮಸ್ಯೆಯನ್ನು ಸರಿಪಡಿಸಲು ಬಂಡವಾಳದ ನೇತಾರರು ತಯಾರಿಲ್ಲ.

1930ರ ದಶಕದಲ್ಲೇ ರಲ್ಲೇ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಕೀನ್ಸ್ ಹೀಗೆ ಆರ್ಥಿಕತೆಯನ್ನು ಹಣಕಾಸಿನ ನೀರುಗುಳ್ಳೆಯ ಮಟ್ಟಕ್ಕೆ ಸೀಮಿತಗೊಳಿಸುವುದರ ಅಪಾಯವನ್ನು ವಿವರಿಸಿದ್ದರು. ಕೀನ್ಸ್ ಕೂಡಾ ಬಂಡವಾಳಶಾಹಿ ಪರವಾದ ಅರ್ಥಜ್ಞನೇ ಆಗಿದ್ದರೂ ಅವರು ಪ್ರತಿಪಾದಿಸಿದ್ದು ವಿವೇಕಶೀಲವಾದಂತಹ ಬಂಡವಾಳವಾದವನ್ನು. ಬದಲಾಗಿ ಇಂದಿರುವ ದುರಾಸೆಯ ಬಂಡವಾಳವಾದವನ್ನು ಖಂಡಿತಾ ಆಗಿರಲಿಲ್ಲ. 1980ರ ದಶಕದಲ್ಲೇ ಅಮೆರಿಕ ಕೇಂದ್ರಿತ ಜಾಗತಿಕ ಹಣಕಾಸು ವ್ಯವಸ್ಥೆಯ ಜಾಡು ಹಿಡಿದ ಪೌಲ್ ಸ್ವೀಜಿಯಂತಹ ಎಡಪಂಥೀಯ ಅರ್ಥಶಾಸ್ತ್ರಜ್ಞರೂ ಸಹ ಸನಿಹದಲ್ಲೇ ಬಂದೆರಗಲಿರುವ ಅಪಾಯವನ್ನು ತಿಳಿಸಿದ್ದರು. ಇದು ಇಡೀ ಜಗತ್ತನ್ನು ಮತ್ತೊಂದು ಆರ್ಥಿಕ ಕುಸಿತಕ್ಕೆ ಕೊಂಡೊಯ್ಯಲಿದೆ ಎಂದೂ ಅಂಕಿ ಅಂಶಗಳ ಸಮೇತ ತಿಳಿಸಿದ್ದರು. ಅವರು ಹೇಳಿದ್ದೆಲ್ಲಾ ಈಗ ಸಾಕ್ಷಾತ್ಕಾರವಾಗುತ್ತಿದೆ.

ಜಾಗತೀಕರಣ ಎಂದರೆ ಅಮೇರಿಕೀಕರಣ ಎಂದು ಬಣ್ಣಿಸುವ ನಮ್ಮ ಡಾ. ಯು. ಆರ್. ಅನಂತಮೂರ್ತಿಯಂತಹವರ ಅಭಿಪ್ರಾಯ ಮುಖ್ಯವಾಗುವುದು ಈ ಕಾರಣದಿಂದಲೇ.

ಇಂತಹ ಒಂದು ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಅಮೆರಿಕದ ಈ ಚಳವಳಿ 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳುವ ಕರೆನೀಡಿ ಹೊರಟಿರುವುದು ಇಡೀ ಜಗತ್ತಿನ ಪ್ರಜಾಪ್ರಭುತ್ವವಾದಿಗಳ ದೃಷ್ಟಿಯಿಂದ ಅತ್ಯಂತ ಸ್ವಾಗತಿಸಬೇಕಾದ ಬೆಳವಣಿಗೆ. ಈ ಕುರಿತು ಇತ್ತೀಚೆಗೆ ಪ್ರತಿಕ್ರಿಯಿಸಿರುವ ಜಗತ್ತಿನ ಜನಸಾಮಾನ್ಯರ ಸಾಕ್ಷಿಪ್ರಜ್ಞೆ ಎಂದೇ ಕರೆಯಬಹುದಾದ ನೋಮ್ ಚಾಮ್‌ಸ್ಕಿ ಕೂಡಾ ಈ ಚಳವಳಿಯನ್ನು ಸ್ವಾಗತಿಸಿದ್ದಾರೆ. ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಈ ಚಳವಳಿ ತನ್ನನ್ನು ತಾನು 'ನಾಯಕರಹಿತ' ಎಂದು ಬಣ್ಣಿಸಿಕೊಂಡಿದೆ. ಆದರೆ ಇದರಲ್ಲಿ ಒಳಿತೂ ಉಂಟು, ಕೆಡುಕೂ ಉಂಟು. ಒಬ್ಬ ನಾಯಕ ಇಲ್ಲದೇ ಪ್ರತಿಯೊಂದು ನಿರ್ಧಾರವನ್ನೂ ಸಾಮೂಹಿಕವಾಗಿ ತೆಗೆದುಕೊಳ್ಳುತ್ತಿರುವ ಕಾರಣ ಸರ್ಕಾರಕ್ಕೆ ಈ ಚಳವಳಿಯನ್ನು ಹತ್ತಿಕ್ಕಲು ಸುಲಭಸಾಧ್ಯವಾಗಲಾರದು. ಮತ್ತು ಒಬ್ಬನ ಅಭಿಪ್ರಾಯವನ್ನು ಇಡೀ ಚಳವಳಿಯ ಮೇಲೆ ಹೇರಲು ಸಾಧ್ಯವಾಗಲಾರದು. ಆದರೆ ಇಡೀ ಜಗತ್ತಿನ ಚಳವಳಿಗಳನ್ನು ನೋಡಿದರೆ ಅಲ್ಲಿ ಒಬ್ಬ ನಾಯಕ ನಿರುತ್ತಾನೆ ಎಂದರೆ ಆತನ ಬೆನ್ನಿಗೆ ಒಂದು ಸಿದ್ಧಾಂತವೂ ಇರುತ್ತದೆ. ಆ ಸಿದ್ಧಾಂತ ಎಷ್ಟು ಮಾನವೀಯವಾಗಿರುತ್ತದೆಯೋ ಅಷ್ಟು ಗಟ್ಟಿತನ ಆ ಚಳವಳಿಗಿರುತ್ತದೆ. ಮಾತ್ರವಲ್ಲ ಈಗಿನ ಚಳವಳಿ ಪ್ರಮುಖವಾಗಿ ಅಲ್ಲಿನ ಮಧ್ಯಮ ವರ್ಗದ ಕೈಯಲ್ಲಿರುವುದರಿಂದ ಅದು ಎಷ್ಟರ ಮಟ್ಟಿಗೆ ಯಶಸ್ಸು ಸಾಧಿಸುತ್ತದೆ ಎನ್ನುವುದೂ ಸಂಶಯಕ್ಕೆಡೆಮಾಡುತ್ತದೆ. ಮಾತ್ರವಲ್ಲ. ಇಲ್ಲಿ ಹಲವಾರು ಸಿದ್ಧಾಂತಗಳ ಕಾಕ್‌ಟೇಲ್. ಇಲ್ಲಿ ಕೂಡಾ ನೀತಿ ನಿರೂಪಣೆಗಳ ಮೇಲೆ, ಕಾರ್ಯಕರ್ತರ ಮೇಲೆ ತಂತಮ್ಮ ಸಿದ್ಧಾಂತಗಳನ್ನು ಹೇರುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಪರಿಸ್ಥಿತಿ ಗೊಂದಲ ಮೂಡಿಸುವ ಸಾಧ್ಯತೆಯೂ ಇರುತ್ತದೆ.

ಅಮೆರಿಕಕ್ಕೆ ಚಳವಳಿಗಳನ್ನು ಎಲ್ಲಾ ರೀತಿಯಲ್ಲೂ ಬಗ್ಗು ಬಡಿಯುವ ವಿಧಾನಗಳೂ ಗೊತ್ತಿವೆ. ಸೈನಿಕವಾಗಿಯೂ, ರಾಜಕೀಯವಾಗಿಯೂ ನೂರಾರು ಚಳವಳಿಗಳನ್ನು ಹುಟ್ಟು ಹಾಕಿದ ಹಾಗೂ ಬಗ್ಗುಬಡಿದ ಚರಿತ್ರೆಯೇ ಅಮೆರಿಕಕ್ಕೆ ಇದೆ. ಈಗ ಭುಗಿಲೆದ್ದ ಚಳವಳಿಯನ್ನು ಅಗತ್ಯ ಬಂದರೆ ಅತ್ಯಂತ ತೀವ್ರವಾಗಿ ಸರ್ಕಾರ ಹತ್ತಿಕ್ಕಬಹುದು. ಆದರೆ ಇಂದಿನ ಅಮೆರಿಕದ ಟೆಕ್ ಸ್ಯಾವಿ ಪೀಳಿಗೆಯ ಮುಂದೆ ಅಂತದ್ದೊಂದನ್ನು ನಡೆಸುವುದೇನೂ ಸುಲಭಸಾಧ್ಯವಲ್ಲ ಬಿಡಿ. ಎಚ್ಚೆತ್ತ ಜನಶಕ್ತಿಯ ಮುಂದೆ ಎಲ್ಲಾ ಬಗೆಯ ಸರ್ವಾಧಿಕಾರಗಳೂ ಮಂಡಿಯೂರಿರುವುದೂ ಇತಿಹಾಸವೇ ಎಲ್ಲವೇ?

ಇದೇ ಸಂದರ್ಭ ಅಮೆರಿಕನ್ನರಿಗೆ ಮತ್ತೊಂದು ಅವಕಾಶವನ್ನೂ ಸೃಷ್ಟಿಸಿದೆ. ಅದೇನೆಂದರೆ ಅವರು ನಿಜವಾದ ಅರ್ಥದಲ್ಲಿ ಮನುಷ್ಯರಾಗುವ ಅವಕಾಶ!. ವಾಸ್ತವದಲ್ಲಿ ಇಂದು ಅಮೆರಿಕದ ಶ್ರೀಮಂತಿಕೆ ನಿಂತಿರುವುದೇ ತೃತೀಯ ಜಗತ್ತಿನ ಸಂಪತ್ತಿನ ಲೂಟಿಯನ್ನಾಧರಿಸಿ ಹಾಗೂ ಬಡದೇಶಗಳ ಜನರ ಅಗ್ಗದ ಶ್ರಮವನ್ನು ದೋಚಿದ್ದರ ಪರಿಣಾಮವಾಗಿ. ಯಾವ ಸರ್ಕಾರಗಳು ಬಂಡವಾಳಿಗರ ಲಾಭಕ್ಕಾಗಿ ಸರಕು ಸಂಸ್ಕೃತಿಯನ್ನು, ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರೇರೇಪಿಸಿ ತಾವು ಸಾಲದ ಬಲೆಯಲ್ಲಿ ಬೀಳುವ ಜೊತೆಗೆ ಜನರನ್ನೂ ಸಾಲದ ವ್ಯಸನಕ್ಕೆ ಗುರಿ ಮಾಡಿದ್ದರೋ ಆ ಎಲ್ಲಾ ಸರ್ಕಾರಗಳನ್ನೂ ಅಮೆರಿಕನ್ನರು ಚುನಾವಣೆಯಿಂದ ಚುನಾವಣೆಗೆ ಗೆಲ್ಲಿಸಿಕೊಂಡೇ ಬಂದಿದ್ದಾರೆ. ತಮ್ಮ ಸರ್ಕಾರಗಳ ಇಂತಹ ನೀತಿಗಳನ್ನು ಹಾಗೂ ತಮ್ಮ ಅನುಭೋಗೀ ಸಂಸ್ಕೃತಿಯ ಕುರಿತ ದೊಡ್ಡ ಮಟ್ಟದಲ್ಲಿ ಚಿಂತನೆ ನಡೆಸುವ ಅವಕಾಶವನ್ನಾದರೂ ಈಗಿನ ಚಳವಳಿ ಸೃಷ್ಟಿಸಿದರೆ ಅದೇ ಚಳವಳಿಯ ಅತಿದೊಡ್ಡ ಯಶಸ್ಸಾಗಲಿದೆ. ✤

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಚಳವಳಿಗಳಿಲ್ಲದ, ಪ್ರತಿಭಟನೆಯಿಲ್ಲದ, ಪರ್ಯಾಯ ಚಿಂತನೆಗಳಿಲ್ಲದ ಸಮಾಜ-ದೇಶ ಯಾವತ್ತೂ ಅಪಾಯಕಾರಿಯೇ. ಇಂಥ ಸಮಾಜ-ದೇಶಗಳು ಏಕಕಾಲಕ್ಕೆ ದುರಹಂಕಾರಿಯೂ, ನೈಜ ಪ್ರಜಾಪ್ರಭುತ್ವ ವಿರೋಧಿಯೂ, ಮನುಷ್ಯತ್ವ ವಿರೋಧಿಯೂ ಆಗಿರುತ್ತದೆ. ಅಮೆರಿಕದಲ್ಲಿ ಆರಂಭವಾಗಿರುವ ಜನಾಂದೋಲನ ಈ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ್ದು. ಈ ಬಗ್ಗೆ ಬೆಳಕು ಚೆಲ್ಲುವ ಲೇಖನವನ್ನು ಹರ್ಷಕುಮಾರ್ ಕುಗ್ವೆ ಬರೆದಿದ್ದಾರೆ. ಇದು ನಿಮಗಿಷ್ಟವಾದೀತು

-'ಸಂಪಾದಕೀಯ'ಬ್ಲಾಗ್‌ನಿಂದ ಆಯ್ದ ಭಾಗ

ಈಗ ಇಲ್ಲಿ ಪ್ರಕಟವಾಗಿರುವುದು 'ಸಂಪಾದಕೀಯ' ಬ್ಲಾಗ್‌ನಲ್ಲಿ ಪ್ರಕಾಶಿತವಾದ ಲೇಖನದ ಎರಡನೇ ಭಾಗ.

'ವಾಲ್‌ಸ್ಟ್ರೀಟ್' ವಶಪಡಿಸಿಕೊಳ್ಳಿ ಅಮೆರಿಕಾದಲ್ಲಿ ಆಂದೋಲನ


ಭಾಗ 2

ಹಾಗಾದರೆ ಇಡೀ ಜಗತ್ತಿಗೇ ಬುದ್ಧಿ ಹೇಳುವ ಅಮೆರಿಕದಂಥ ಅಮೆರಿಕದಲ್ಲಿ ಇಂತಹ ಒಂದು ಬಂಡಾಯ ಹುಟ್ಟಿಕೊಂಡಿರುವುದು ಯಾಕೆ? ಈಗ ಹುಟ್ಟಿರುವ ಚಳವಳಿಯ ವ್ಯಾಪ್ತಿಯೇನು? ಇದರ ಶಕ್ತಿ ಏನು? ದೌರ್ಬಲ್ಯಗಳೇನು? ಈ ಕುರಿತು ಕೊಂಚ ತಲೆಕೆಡಿಸಿಕೊಳ್ಳುವ ಅಗತ್ಯ ಭಾರತೀಯರಿಗೂ ಇದೆ. ಯಾಕೆ ಇದರ ಅಗತ್ಯ ನಮಗಿದೆ ಎಂದರೆ ಎರಡನೆಯ ವಿಶ್ವ ಮಹಾಯುದ್ಧದ ನಂತರದಲ್ಲಿ ಅದರಲ್ಲೂ ಸೋವಿಯತ್ ಒಕ್ಕೂಟ ಕುಸಿದ ಮೇಲೆ ಇಡೀ ಜಗತ್ತನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿರುವುದು ಅಮೆರಿಕ. ನೂರಾರು ದೇಶಗಳಲ್ಲಿ ಬುಡಮೇಲು ಕೃತ್ಯಗಳನ್ನು, ಸಾವಿರಾರು ಪ್ರಾಕ್ಸಿ ಯುದ್ಧಗಳನ್ನು ನಡೆಸುತ್ತಾ ಇಡೀ ಜಗತ್ತಿನ ಬಹುಪಾಲು ದೇಶಗಳನ್ನು ತನ್ನ ಪದತಲದಲ್ಲಿ ಬೀಳುವಂತೆ ಮಾಡಿಕೊಂಡು ಕೇಕೆ ಹಾಕುತ್ತಿರುವುದು ಅಮೆರಿಕ. ಒಂದು ಕಡೆ ಮುಕ್ತ ಆರ್ಥಿಕತೆಯ ನೀತಿಗಳನ್ನು ಎಲ್ಲರ ಮೇಲೆ ಹೇರುತ್ತಲೇ ತಾನು ಮಾತ್ರ ರಕ್ಷಣಾತ್ಮಕ ನೀತಿಗಳನ್ನು ಪಾಲಿಸಿಕೊಂಡು ಇಬ್ಬಗೆಯ ನೀತಿಯನ್ನು ಪಾಲಿಸುತ್ತಿರುವುದು ಇದೇ ಅಮೆರಿಕ. ಜಗತ್ತಿನ ತೈಲಸಂಪನ್ಮೂಲಗಳ ಮೇಲಿನ ಹಿಡಿತಕ್ಕಾಗಿ ಲಕ್ಷಾಂತರ ಜನರ ಮಾರಣಹೋಮ ನಡೆಸಿರುವುದೂ ಇದೇ ಅಮೆರಿಕ. ಇಂದು ಇಡೀ ಜಗತ್ತನ್ನು ಕಾಡುತ್ತಿರುವ ಇಸ್ಲಾಂ ಭಯೋತ್ಪಾದನೆಗೆ ಬೀಜ ನೆಟ್ಟು, ನೀರು ಗೊಬ್ಬರ ಹಾಕಿ ಈಗ ಮತ್ತೆ ಭಯೋತ್ಪಾದನೆಯ ವಿರುದ್ಧದ ಹೋರಾಟದ ಹೆಸರಿನಲ್ಲಿ ತನ್ನ ಅಜೆಂಡಾಗಳನ್ನು ಜಗತ್ತಿನ ಮೇಲೆ ಹೇರುತ್ತಿರುವುದೂ ಇದೇ ಅಮೆರಿಕ. ಇಂದು ಜಗತ್ತಿನ ಪ್ರತಿಯೊಬ್ಬ ಮನುಷ್ಯನೂ ಕೂಡ ಅಮೆರಿಕ ತನ್ನ ಹಿತಾಸಕ್ತಿಗಾಗಿ ಹಾಕಿಕೊಟ್ಟ ಅಜೆಂಡಾಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ಪಾಲಿಸುತ್ತಲೇ ಇದ್ದಾನೆ ಎಂದರೆ ಅತಿಶಯೋಕ್ತಿಯಲ್ಲ. ಆದರೆ ಇದೆಲ್ಲಾ ಜಾಗತೀಕರಣ ಮುಸುಕಿನಲ್ಲಿ ನಡೆಯುತ್ತಿರುವುದರಿಂದ ಅದನ್ನೆಲ್ಲಾ ನಮ್ಮದೇ ಎಂಬಂತೆ ನಾವು ಒಪ್ಪಿಕೊಂಡು ಹೋಗುತ್ತಿದ್ದೇವಷ್ಟೆ.



ಇಂತಿಪ್ಪ ಅಮೆರಿಕದ ಪ್ರಭುತ್ವದ ವಿರುದ್ಧ ಅಮೆರಿಕದ ಪ್ರಜೆಗಳೇ ದಂಗೆಯೇಳುವ ಸ್ಥಿತಿ ಉಂಟಾಗಿದೆ ಎಂದರೆ ನಾವು ಖಂಡಿತಾ ಇದನ್ನು ಕೊಂಚ ಹತ್ತಿರದಿಂದ ಗಮನಿಸುವ ಅಗತ್ಯವಿದೆ. ಇದಕ್ಕಾಗಿ ಈ ಚಳವಳಿಗೆ ಕಾರಣವಾಗಿರುವ ಅಮೆರಿಕ ಆರ್ಥಿಕತೆಯನ್ನು ಸಂಕ್ಷಿಪ್ತವಾಗಿಯಾದರೂ ಅರಿಯಬೇಕಾಗುತ್ತದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಅಮೆರಿಕ ಅಮೆರಿಕ ಸರ್ಕಾರದ ಋಣಾರ್ಹತೆ ಮಟ್ಟವನ್ನು ಅಲ್ಲಿನ ಪ್ರಮುಖ ಮೌಲ್ಯಮಾಪನಾ ಸಂಸ್ಥೆಗಳಲ್ಲೊಂದಾದ ಎಸ್ & ಪಿ ಎಎಎ ಯಿಂದ ಎಎ+ಗೆ ಇಳಿಸಿತ್ತು. ತಾನು ಸುಸ್ತಿದಾರನಾಗುವ ಹಂತಕ್ಕೆ ಹೋಗುವುದನ್ನು ತಪ್ಪಿಸಲು ಒಬಾಮಾ ಸರ್ಕಾರವು ಸಾಲ ಒಪ್ಪಂದ ಕಾಯ್ದೆಯನ್ನು ಜಾರಿ ಮಾಡಿತು. ಮುಂದಿನ ಹತ್ತು ವರ್ಷಗಳಲ್ಲಿ ಅಮೆರಿಕವು ಸರ್ಕಾರದ ವೆಚ್ಚಗಳನ್ನು 2 ರಿಂದ 2.4 ಲಕ್ಷ ಕೋಟಿ ಡಾಲರುಗಳಿಗೆ ಹೆಚ್ಚಿಸಲು ನಿರ್ಧರಿಸಿದೆ. ಇನ್ನೂ ಸ್ವಲ್ಪ ಹಿಂದಕ್ಕೆ ಹೋಗೋಣ. 2008ರ ಸೆಪ್ಟೆಂಬರ್ ತಿಂಗಳಲ್ಲಿ ಅಮೆರಿಕದ ಸಬ್‌ಪ್ರೈಂ ಗೃಹಸಾಲ ಬಿಕ್ಕಟ್ಟು ಸ್ಫೋಟಗೊಂಡಿತ್ತು. ಅಮೆರಿಕಾದ ಎಲ್ಲಾ ಹಣಕಾಸು ಉದ್ದಿಮೆಗಳೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ಈ ಸಬ್‌ಪ್ರೈಮ್ ಗೃಹಸಾಲ ಮಾರುಕಟ್ಟೆಯೊಳಗೆ ಕಾಲಿಟ್ಟಿದ್ದವು. ವಾಣಿಜ್ಯ ಬ್ಯಾಂಕುಗಳು ಅಗ್ಗದ ಬಡ್ಡಿ ದರದಲ್ಲಿ ನೀಡತೊಡಗಿದ್ದ ಗೃಹಸಾಲ ಉದ್ದಿಮೆಗೆ ಕಾಲಿಟ್ಟ ಹಣಕಾಸು ಸಂಸ್ಥೆಗಳು ಬೃಹತ್ ಮಟ್ಟದಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸತೊಡಗಿದ್ದೇ ಬೃಹತ್ ಪ್ರಮಾಣದ ಬಂಡವಾಳ ಸಂಚಯವಾಗತೊಡಗಿತ್ತು. ಆದರೆ ಯಾವಾಗ ಇದ್ದಕ್ಕಿದ್ದಂತೆ ಹೆಚ್ಚೆಚ್ಚು ಜನರು ಗೃಹಸಾಲದ ಕಂತುಕಟ್ಟಲಾರದೆ ಜನರು ಡಿಫಾಲ್ಟರ್ ದಿವಾಳಿ ಆಗತೊಡಗಿದ್ದರೋ ಆಗ ಈ ಉದ್ದಿಮೆಯನ್ನವಲಂಭಿಸಿ ಬಹುದೂರ ಹೋಗಿಬಿಟ್ಟದ್ದ ಆರ್ಥಿಕತೆಯೆಲ್ಲವೂ. ಕುಸಿಯತೊಡಗಿತ್ತು. ಎಂತಹ ಪರಿಸ್ಥಿತಿ ಸೃಷ್ಟಿಯಾಗಿತ್ತೆಂದರೆ 2007ರ ಡಿಸೆಂಬರ್‌ನಲ್ಲಿ ಅಮೆರಿಕಾದಲ್ಲಿ ಬ್ಯಾಂಕುಗಳಿಗೆ ಬಾಕಿ ಬರಬೇಕಿದ್ದ ಈ ಸಬ್‌ಪ್ರೈಮ್ ಗೃಹಸಾಲದ ಒಟ್ಟು ಮೊತ್ತ 70 ಲಕ್ಷ ಕೋಟಿ ರೂಗಳು! ಅದೇ ವರ್ಷ 13 ಲಕ್ಷ ಮನೆಗಳು ಜಪ್ತಿಯಾದವು. ಹೀಗೆ ಜಪ್ತಿಯಾಗಿ ಬೀದಿಗೆ ಬಿದ್ದವರ ಸಂಖ್ಯೆ 45 ಲಕ್ಷ ದಾಟಿತ್ತು!. ಮನೆಗಳ ಬೆಲೆಗಳು ಶೇ. 40 ರಷ್ಟು ಕುಸಿದಿದ್ದರೂ ಕೊಳ್ಳುವವರೇ ಗತಿ ಇರಲಿಲ್ಲ. 1.86 ಕೋಟಿ ಮನೆಗಳು ಹೀಗೆ ಧೂಳು ಹಿಡಿದು ಕೂತಿದ್ದವು. ಆದರೆ ಆ ಮನೆಗಳಲ್ಲಿರಬೇಕಾದವರು ಬೀದಿ ಮೂಲೆಗಳಲ್ಲಿ, ತಮ್ಮ ಕಾರುಗಳೊಳಗೆ, ರೈಲು



ಬೋಗಿಗಳಲ್ಲಿ, ಪಾರ್ಕ್‌ಗಳಲ್ಲಿ ರಾತ್ರಿ ಕಳೆಯುವ ಪರಿಸ್ತಿತಿ ಬಂದೊದಗಿತ್ತು!

ಮತ್ತೊಂದೆಡೆ ಲೀಮಾನ್ ಬ್ರದರ್ಸ್‌ನಂತಹ ಹೂಡಿಕೆ ಬ್ಯಾಂಕುಗಳು ದಿವಾಳಿಯಾದವು. ಕೆಲವು ಬ್ಯಾಂಕುಗಳನ್ನು ಸರ್ಕಾರ ರಾಷ್ಟ್ರೀಕರಣ ಮಾಡಿ ಉಳಿಸಿಕೊಂಡಿತು. ಅಮೆರಿಕ ಸರ್ಕಾರ ಕೂಡಲೇ ಸುಮಾರು 700 ಶತಕೋಟಿ ಡಾಲರುಗಳ ಬೇಲೌಟ್ ನೀಡಿತ್ತು. ಹಣಕಾಸು ಸಂಸ್ಥೆಗಳಿಗೆ ತತ್ಕಾಲಿಕ ಸಾಲ ನೀಡುವ ಕಮರ್ಷಿಯಲ್ ಪೇಪರ್ ಕೂಡಾ ಕುಸಿದು ಬಿದ್ದಿದ್ದೇ ಇದಕ್ಕೆ ಕಾರಣವಾಗಿತ್ತು. ಆರ್ಥಿಕತೆಯ ಈ ಬಿಕ್ಕಟ್ಟಿನಿಂದಾಗಿ ಅಂದು ಅಮೆರಿಕದಲ್ಲೇ ಕೆಲಸ ಕಳೆದುಕೊಂಡವರು 12 ಲಕ್ಷಕ್ಕಿಂತ ಹೆಚ್ಚು ಮಂದಿ. ಈ ಬಿಕ್ಕಟ್ಟು ಅಂದು ಇತರ ದೇಶಗಳಿಗೂ ಹರಡಿ ಎಲ್ಲೆಡೆ ಇದೇ ಬೆಳವಣಿಗೆಗಳಾದವು.

1930ರಲ್ಲಾದಂತೆಯೇ ಮತ್ತೊಂದು ಆರ್ಥಿಕ ಮಹಾಕುಸಿತದ ಮುನ್ಸೂಚನೆ ದೊರೆತು ಜಗತ್ತು ತಲ್ಲಣಗೊಂಡಿತ್ತು. ಇದು ಅಮೆರಿಕದಲ್ಲಿ ಡಬಲ್ ಡಿಪ್ ಡಿಪ್ರೆಷನ್ ಸ್ಥಿತಿ. ಅಂದರೆ ಈಗಾಗಲೇ ಒಂದು ಬಿಕ್ಕಟ್ಟಿನಿಂದ ಪೂರ್ತಿ ಚೇತರಿಸಿಕೊಳ್ಳುವಷ್ಟರಲ್ಲೇ ಮತ್ತೊಂದು ಆರ್ಥಿಕ ಕುಸಿತದ ಭಯ!

2008ರ ಈ ಕುಸಿತವಾದಾಗ ಅಮೆರಿಕ ಸರ್ಕಾರ ಹಾಗೂ ಅನೇಕ ಆರ್ಥಿಕ ಪಂಡಿತರು ಗೃಹ ಸಾಲ ಮಾರುಕಟ್ಟೆಯನ್ನು ದೂರಿದರಾಗಲೀ ಈ ಸಮಸ್ಯೆಯ ಕಾರಣವನ್ನು ಗುರಿತಿಸಿ ಅದಕ್ಕೆ ಪರಿಹಾರ ಕಂಡು ಹಿಡಿಯುವ ಪ್ರಯತ್ನ ಮಾಡಲಿಲ್ಲ.

ಇಷ್ಟಕ್ಕೆಲ್ಲ ಇದ್ದ ಮೂಲ ಕಾರಣವನ್ನು ಹೆಚ್ಚಿನ ವಿವರಗಳನ್ನೂ ಅಂಕಿ ಅಂಶಗಳನ್ನು ನೀಡುವ ಗೊಡವೆಗೆ ಹೋಗದೇ ಅತ್ಯಂತ ಸರಳವಾಗಿ ಹೀಗೆ ಹೇಳಬಹುದು - ಅದು ಅಮೆರಿಕ ಕೇಂದ್ರಿತ ಜಾಗತಿಕ ಮಾರುಕಟ್ಟೆ ವ್ಯವಸ್ಥೆ ನೈಜವಾದ ಆರ್ಥಿಕತೆಯಿಂದ (ಅಂದರೆ ಉತ್ಪಾದನೆಯನ್ನು, ಉದ್ಯೋಗವನ್ನು ಆಧರಿಸಿದ ಆರ್ಥಿಕತೆ) ವಿಮುಖಗೊಂಡು ಹಣಕಾಸು ಬಂಡವಾಳವನ್ನು ಅಗಾಧವಾಗಿ ಸಂಚಯಿಸಿಕೊಳ್ಳುತ್ತಾ ಹೋದದ್ದು. ಕೊನೆಗೆ ಇಡೀ ಆರ್ಥಿಕತೆಯೇ ಸಾಲದ ವ್ಯಸನಕ್ಕೊಳಗಾಗಿ ಈಗ ದಿವಾಳಿ ಹಂತಕ್ಕೆ ತಲುಪಿದ್ದು. ಉತ್ಪಾದನೆ ಆಧಾರಿತ ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳು ಒಂದು ಹಂತದಲ್ಲಿ ಸ್ಥಗಿತಗೊಂಡು ಸಾಲಾಧಾರಿತ ಸಟ್ಟಾ ವ್ಯಾಪಾರ (speculative Buisiness ದ ಪ್ರಾಬಲ್ಯ ತೀವ್ರಗೊಂಡಿದ್ದು. ಇದು ಬೇರೇನೂ ಆಗಿರದೇ ಹಣಕಾಸು ಮಾರುಕಟ್ಟೆಯೊಳಗಿನ ಜೂಜು ಮಾತ್ರವಾಗಿದ್ದದ್ದು. ಅಮೆರಿಕದಲ್ಲಿ ಎಲ್ಲಾ ಕ್ಷೇತ್ರಗಳನ್ನೂ ಗಣನೆಗೆ ತೆಗೆದುಕೊಂಡರೆ 1954ರಲ್ಲಿ ಒಟ್ಟು ಜಿಡಿಪಿಗೆ ಹೋಲಿಸಿ ನೋಡಿದಾಗ ಅಲ್ಲಿನ ಸಾಲ ಶೇಕಡಾ 153ರಷ್ಟಿದ್ದರೆ 2007ರಲ್ಲಿ ಶೇಕಡಾ 373ರಷ್ಟಿತ್ತೆಂದರೆ ಸಾಲದ ಪಾತ್ರವನ್ನು ಊಹಿಸಬಹುದು. ಮಾತ್ರವಲ್ಲ ಅತ್ತ ನೈಜ ಆರ್ಥಿಕತೆ ಯಾವ ಬೆಳವಣಿಗೆಯನ್ನೂ ಕಾಣದೇ ಬಡತನ, ನಿರುದ್ಯೋಗಗಳು ಕ್ರಮೇಣ ಹೆಚ್ಚತೊಡಗಿದ್ದರೆ ಆರ್ಥಿಕತೆಯನ್ನು ಹೀಗೆ ಬರೀ ಪೇಪರ್ ಮೇಲಿನ (ಕಂಪ್ಯೂಟರ್ ಎಂದು ಓದಿಕೊಳ್ಳಿ) ಹಣದ ಮೇಲೆಯೇ ನಿಲ್ಲಿಸಿದ ಪರಿಣಾಮವಾಗಿ ಕಾರ್ಪೋರೇಷನ್‌ಗಳು ವಿಪರೀತ ಲಾಭ ಮಾಡತೊಡಗಿದವು. ಮಧ್ಯಮ ವರ್ಗದವರ ಆದಾಯದಲ್ಲಿ ಅಂತಹ ಏರಿಕೆ ಇಲ್ಲದಿದ್ದರೂ ಈ ಹಣಕಾಸು ಸಂಸ್ಥೆಗಳು ಸಾವಿರ ಸಾವಿರ ಪಟ್ಟು ಲಾಭ ಮಾಡಿಕೊಂಡವು. ಅಮೇರಿಕಾದಲ್ಲಿ 2001ರಲ್ಲಿ ಹಣಕಾಸು ವ್ಯವಸ್ಥೆಯ ತುತ್ತತುದಿಯಲ್ಲಿದ್ದ ಶೇ1ರಷ್ಟು ಹಣಕಾಸು ಬಂಡವಾಳವು ಕೆಳಹಂತದ ಶೇ. 80ರಷ್ಟು ಜನರ ಒಟ್ಟು ಆದಾಯದ ನಾಲ್ಕು ಪಟ್ಟು ಇತ್ತು. 2006ರಲ್ಲಿ ಅಮೆರಿಕಾದ 60 ಅತ್ಯಂತ ಶ್ರೀಮಂತರ ಬಳಿ 630 ಬಿಲಿಯ ಡಾಲರುಗಳಷ್ಟು ಮೊತ್ತದ ಸಂಪತ್ತು ಶೇಖರಣೆಗೊಂಡಿತ್ತು!. ಆರ್ಥಿಕತೆ ಎಂದರೇ ಹಣಕಾಸು ಆರ್ಥಿಕತೆ ಎಂದು ಆದ

ಪುಟ 15ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH